ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಲಾಲ್‌ಸಲಾಂ
ಕಾಂ. ಆರ್. ಗೋವಿಂದರಾಜನ್



ಸಂಪುಟ 11 | ಸಂಚಿಕೆ 10 | ಪುಟ 16 | ಫೆಬ್ರವರಿ 27– ಮಾರ್ಚ್ 5, 2017 | ರೂ. 10/-

web: www.janashakthi.co.in | e-mail : js_weekly@yahoo.com

ಹೊಡೆಯುವವರು ಬನ್ನಿರೋ...
ತಡೆಯುವವರು ಬನ್ನಿರೋ....

ಪಿನರಾಯಿ ಬರುತ್ತಾರೆ
ರ‍್ಯಾಲಿ ನಡೆಯುತ್ತದೆ



ಸ್ಮಶಾನ- ಕಬ್ರಿಸ್ತಾನ್ ರಾಜಕೀಯ

ಬಡ್ತಿ ಮೀಸಲಾತಿ ತೀರ್ಪು: ಮುಂದೇನು?

ದೆಹಲಿ ವಿವಿ: ಮತ್ತೆ ಗೂಂಡಾಗಿರಿ

ಎಸ್ಎಫ್ಐ 14ನೇ ರಾಜ್ಯ ಸಮ್ಮೇಳನ

ವಿಧಾನಸಭಾ ಚುನಾವಣೆಗಳಲ್ಲಿ ಎಡ ಪರ್ಯಾಯವನ್ನು ಜನರ ಮುಂದಿಡಲು ಎಡಪಕ್ಷಗಳ ಸ್ಪರ್ಧೆ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ

ಚುನಾವಣಾ ಸುಧಾರಣೆಗಳನ್ನು ಕುರಿತಂತೆ ಎಡಪಕ್ಷಗಳಿಂದ ರಾಷ್ಟ್ರೀಯ ಸಮಾವೇಶ

ಸಿಪಿಐ(ಎಂ) ಇತರ ಎಡಪಕ್ಷಗಳೊಂದಿಗೆ ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ ಮತ್ತು ಮಣಿಪುರ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದೆ. ಉತ್ತರಪ್ರದೇಶದಲ್ಲಿ 26 ಕ್ಷೇತ್ರಗಳಲ್ಲಿ, ಉತ್ತರಾಖಂಡದಲ್ಲಿ 6 ಕ್ಷೇತ್ರಗಳಲ್ಲಿ, ಪಂಜಾಬಿನಲ್ಲಿ 12 ಹಾಗೂ ಮಣಿಪುರದಲ್ಲಿ 2ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ.

ಎಡ ಧೋರಣೆಗಳ ಪರ್ಯಾಯವನ್ನು ಜನರ ಮುಂದಿಡುವ ಪ್ರಾಥಮಿಕ ಉದ್ದೇಶದಿಂದ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಈ ಚುನಾವಣೆಗಳಲ್ಲಿ ಸಪರ್ಧಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ವಿಧಾನಸಭೆಗಳಲ್ಲಿ ಇನ್ನೂ ಕೇಳಬರದ ಜನತೆಯ ಕುಂದುಕೊರತೆಗಳ ದನಿಯನ್ನು ಎತ್ತಲು ಸಾಧ್ಯವಾಗುವಂತೆ, ರಾಜ್ಯಸರಕಾರಗಳ ಮೇಲೆ ಈ ಕುರಿತು ಒತ್ತಡ ಹಾಕಿ ಅವು ಜನಗಳಿಗೆ ಬಹಳ ಅಗತ್ಯವಾಗಿರುವ ಪರಿಹಾರಗಳನ್ನು ಕೊಡುವಂತೆ ಮಾಡಲು ಈ ವಿಧಾನಸಭೆಗಳಲ್ಲಿ ಎಡಪಕ್ಷಗಳ ಪ್ರಾತಿನಿಧ್ಯವನ್ನು ಬಲಪಡಿಸಬೇಕು ಎಂದು ಜನಗಳಿಗೆ ಮನವಿ ಮಾಡಿಕೊಳಲಾಗುತ್ತಿದೆ.

ಸಿಪಿಐ(ಎಂ) ಮತ್ತು ಎಡ ಅಭ್ಯರ್ಥಿಗಳು ಕಣದಲ್ಲಿ ಇಲ್ಲದ ಕ್ಷೇತ್ರಗಳಲ್ಲಿ ಬಿಜೆಪಿಯ ಮತ್ತು ಅದರ ಕೋಮುವಾದಿ ಕೂಟದ ಅಭ್ಯರ್ಥಿಗಳನ್ನು ಸೋಲಿಸಬೇಕು ಎಂದೂ ಸಿಪಿಐ(ಎಂ) ಕರೆ ನೀಡಿದೆ. ಇದು, ಒಂದೆಡೆಯಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮತ್ತು ಇನ್ನೊಂದೆಡೆಯಲ್ಲಿ ಜನಗಳ ಮೇಲೆ ಅಭೂತಪೂರ್ವ ಆರ್ಥಿಕ ಹೊರೆಗಳನ್ನು ಹಾಕುತ್ತಿರುವ ಎರಡಲಗಿನ ದಾಳಿಗಳನ್ನು ಹಿಮ್ಮೆಟ್ಟಿಸಲು ಮತ್ತು ಅಂತಿಮವಾಗಿ ಸೋಲಿಸಲು ಅಗತ್ಯ. ನೋಟುರದ್ಧತಿಯಿಂದಾಗಿ ಜನಗಳ ಮೇಲೆ ಹೇರಿರುವ ಹೊರೆಗಳನ್ನೂ ಈ ಪ್ರಚಾರದಲ್ಲಿ ವಿರೋಧಿಸಲಾಗುತ್ತಿದೆ.

ಈ ಚುನಾವಣಾ ಪ್ರಚಾರದಲ್ಲಿ ಪ್ರಧಾನ ಮಂತ್ರಿ ಮೋದಿ ಮತ್ತು ಬಿಜೆಪಿ ಮುಖಂಡರು ರಾಜಕೀಯ ಪಕ್ಷಗಳನಿಧಿ ಸಂಗ್ರಹವನ್ನು ಪಾರದರ್ಶಕಗೊಳಿಸುವ ಅಗತ್ಯದ ಬಗ್ಗೆ ಹೇಳುತ್ತಿದ್ದಾರೆ.

ಆದರೆ ಮೊದಲಿಗೆ ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ತಮ್ಮ ನಿಧಿ ಸಂಗ್ರಹದ ಬಗ್ಗೆ ಪಾರದರ್ಶಕವಾಗಿರುವುದು ಒಳ್ಳೆಯದು, ಏಕೆಂದರೆ ಬಿಜೆಪಿ ಮತ್ತು ಅದರ ಮಿತ್ರರು ಚುನಾವಣಾ ರ‍್ಯಾಲಿಗಳಲ್ಲಿ ಹಣಬಲದ ಬೃಹತ್ ಪ್ರದರ್ಶನವನ್ನು ನಡೆಸುತ್ತಿದ್ದಾರೆ ಎಂದು ಸಿಪಿಐ(ಎಂ) ಟೀಕಿಸಿದೆ.

ಕೇಂದ್ರ ಬಜೆಟಿನಲ್ಲಿ ರಾಜಕೀಯ ನಿಧಿ ಸಂಗ್ರಹವನ್ನು ಸ್ವಚ್ಛಗೊಳಿಸುವ ಹೆಸರಿನಲ್ಲಿ ಹಣಕಾಸು ಮಂತ್ರಿಗಳು ಪ್ರಕಟಿಸಿರುವ ಕ್ರಮಗಳು ಕೇವಲ ಕಣ್ಣೊರೆಸುವ ತಂತ್ರ. ನಗದು ದೇಣಿಗೆಗಳ ಮೊತ್ತವನ್ನು 20,000ರೂ.ನಿಂದ 2,000ಕ್ಕೆ ಇಳಿಸಿರುವುದು, ಇದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಗಳನ್ನು ಒಂದು ಡಿಜಿಟಲ್ ವ್ಯವಹಾರದ ಮೂಲಕ ಅಥವ ದೇಣಿಗೆದಾರರು ಖರೀದಿಸಿ ಕೊಡುವ ಚುನಾವಣಾ ಬಾಂಡುಗಳ ಮೂಲಕ ನಡೆಸಬೇಕು ಎಂಬುದು ಯಾವುದೇ ರೀತಿಯಲ್ಲಿ ಪರಿಣಾಮಕಾರಿ ಕ್ರಮಗಳು ಎಂದು ಹೇಳಲಾಗದು.

ಚುನಾವಣಾ ಪ್ರಕ್ರಿಯೆಯಲ್ಲಿ ಜನತೆಯು ಪ್ರಜಾಸತ್ತಾತ್ಮಕ ಆಯ್ಕೆಯನ್ನು ಹೆಚ್ಚುತ್ತಿರುವ ವಿಪರೀತ ಹಣಬಲದ ಬಳಕೆ ವಿಕೃತಗೊಳಿಸುವುದನ್ನು ತಡೆಯಬೇಕಾದರೆ ಅದಕ್ಕೆ ಮೊದಲ ಕ್ರಮವೆಂದರೆ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ನಿಧಿ ನೀಡಿಕೆಯನ್ನು ನಿಷೇಧಿಸಬೇಕು ಎಂದು ಸಿಪಿಐ(ಎಂ) ಬಹಳ ಕಾಲದಿಂದ ಸೂಚಿಸುತ್ತ ಬಂದಿದೆ.

ಎರಡನೆಯದಾಗಿ, ಚುನಾವಣೆಗಳ ಸಮಯದಲ್ಲಿ ಒಂದು ರಾಜಕೀಯ ಪಕ್ಷ ಮಾಡಬಹುದಾದ ವೆಚ್ಚಗಳ ಮೇಲೆ ಒಂದು ಮಿತಿಯನ್ನು ಹಾಕಬೇಕು. ಸದ್ಯಕ್ಕೆ ಅಭ್ಯರ್ಥಿಗಳು ಮಾಡುವ ಖರ್ಚುಗಳ ಮೇಲೆ ಮಿತಿ ಇದೆ, ರಾಜಕೀಯ ಪಕ್ಷಗಳು ಮಾಡುವ ಚುನಾವಣಾ ವೆಚ್ಚಗಳ ಮೇಲೆ ಮಿತಿ ಅಥವ ನಿಯಂತ್ರಣ ಇಲ್ಲ. ಈ ಬಿಜೆಪಿ ಸರಕಾರದ ಕಳೆದ ಸುಮಾರು ಮೂರು ವರ್ಷಗಳಲ್ಲಿ ಅದು ಈ ಸಲಹೆಗಳನ್ನು ಪರಿಶೀಲಿಸುವುದನ್ನು ಸಾರಾಸಗಟು ತಿರಸ್ಕರಿಸುತ್ತ ಬಂದಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊದ ಈ ಹೇಳಿಕೆ ಗಮನ ಸೆಳೆದಿದೆ.

ಚುನಾವಣಾ ಸುಧಾರಣೆಗಳ ಪ್ರಶ್ನೆಯ ಮೇಲೆ ಸಿಪಿಐ(ಎಂ) ಬಹಳ ಕಾಲದಿಂದ ಮಹತ್ವದ ಸೂಚನೆಗಳನ್ನು ಮುಂದಿಡುತ್ತ ಬಂದಿದೆ.

ನಮ್ಮ ಚುನಾವಣಾ ವ್ಯವಸ್ಥೆಯನ್ನು ಒಂದು ಭಾಗಶಃ ಆನುಪಾತಿಕ ಪ್ರಾತಿನಿಧ್ಯವನ್ನು ಅಂಗೀಕರಿಸುವಂತೆ ಬದಲಿಸಬೇಕು. ಈ ಮೂಲಕ ಸರಕಾರದ ರಚನೆಯಲ್ಲಿ ಜನಗಳ ನಿಜವಾದ ಪ್ರಜಾಸತ್ತಾತ್ಮಕ ಆಯ್ಕೆ ಬಿಂಬಿತವಾಗಲು ಸಾಧ್ಯವಾಗುತ್ತದೆ ಎಂದು ಸಿಪಿಐ(ಎಂ) ಸೂಚಿಸಿದೆ. ಸ್ವಾತಂತ್ರ್ಯದ ನಮತರ ಕೇಂದ್ರದಲ್ಲಿನ ಸುಮಾರಾಗಿ ಎಲ್ಲ ಸರಕಾರಗಳನ್ನು ಸಾರ್ವತ್ರಿಕ ಚುನಾವಣೆಗಳಲ್ಲಿ ನಡೆದ ಮತದಾನದಲ್ಲಿ 50ಶೇಕಡಾಕ್ಕಿಂತ ಕಡಿಮೆ ಮತಗಳ ಮೇಲೆ ರಚಿಸಲಾಗಿದೆ. ಪ್ರಸಕ್ತ ಬಿಜೆಪಿ ನೇತರತ್ವದ ಸರಕಾರ ಲೋಕಸಭೆಯಲ್ಲಿ ಒಂದು ಆರಾಮದಾಯಕ ಬಹುಮತ ಹೊಂದಿರುವುದು ಕೇವಲ 31ಶೇ.ಕತಗಳಿಕೆಯ ಆಧಾರದಲ್ಲಿ; ಅಂದರೆ ಮತದಾನ ಮಾಡಿದವರಲ್ಲಿ ಬಿಜೆಪಿಯ ವಿರುದ್ಧ 69ಶೇ. ಮಂದಿ ಮತ ಹಾಕಿದ್ದಾರೆ, ಎನ್‌ಡಿಎಯನ್ನು ನಂತರ ಸೇರಿದ ಪಕ್ಷಗಳನ್ನು ಬಿಟ್ಟು. ಪ್ರಜಾಪ್ರಭುತ್ವ ಎಂಬುದು ಬಹುಮತದ ಆಳ್ವಿಕೆ, ಅದನ್ನು ನಿಜವಾಗಿಯೂ ಭಾರತದಲ್ಲಿ ಜಾರಿ ಮಾಡಲಾಗಿಲ್ಲ. ಎರಡು ಕ್ಷೇತ್ರಗಳನ್ನು ಒಟ್ಟಿಗೆ ಸೇರಿಸಿ ಒಂದರಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮತಹಾಕಿದರೆ, ಇನ್ನೊಂದರಲ್ಲಿ ಮತದಾರರು ಒಂದು ರಾಜಕೀಯ ಪಕ್ಷ ವನ್ನು ಅದರ ರಾಜಕೀಯ ಪ್ರಣಾಳಿಕೆ, ಧೋರಣೆಗಳು ಮತ್ತು ಕಾರ್ಯಕ್ರಮಗಳ ಆಧಾರದಲ್ಲಿ ಆರಿಸುವಂತಾಗಬೇಕು ಎಂದು ಸಿಪಿಐ(ಎಂ) ಈ ಹಿಂದೆ ಸೂಚಿಸಿತ್ತು. ಇದು ಜನತೆಯ ಪ್ರಜಾಪ್ರಭುತ್ವ ಆಯ್ಕೆಯನ್ನು ಈಗಿರುವುದಕ್ಕಿಂತ ಉತ್ತಮ ರೀತಿಯಲ್ಲಿ ಬಿಂಬಿಸುತ್ತದೆ. ಆನುಪಾತಿಕ ಪ್ರಾತಿನಿಧ್ಯ ಕೆಲವು ಮಟ್ಟಿಗೆ ಹಣಬಲ, ಜಾತಿ ಪರಿಗಣನೆ ಮುಂತಾದವುಗಳನ್ನು ಸ್ವಲ್ಪ ಮಟ್ಟಿಗೆ ತಡೆಯುವ ಅನುಕೂಲಗಳನ್ನೂ ತರುತ್ತದೆ. ಏಕೆಂದರೆ ಜನರು ರಾಜಕೀಯ ಪಕ್ಷಗಳ ಕಾರ್ಯಕ್ರಮಗಳು ಮತ್ತು ಧೋರಣೆಗಳ ಮೇಲೆ ಮತ ನೀಡುತ್ತಾರೆ.

ಸಿಪಿಐ(ಎಂ) ಮತ್ತು ಸಿಪಿಐ ಇತರ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಸಂಘಟನೆಗಳು ಮತ್ತು ಆಂದೋಲನಗಳೊಂದಿಗೆ ಚರ್ಚಿಸಿ ಆಮೂಲಾಗ್ರ ಚುನಾವಣಾ ಸುಧಾರಣೆಗಳ ಬಗ್ಗೆ ಒಂದು ರಾಷ್ಟ್ರೀಯ ಸಮಾವೇಶವನ್ನು ಸದ್ಯದಲ್ಲೇ ನಡೆಸಲು ಯೋಚಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತಿಳಿಸಿದೆ. ಸಿಪಿಐ(ಎಂ) ನಮ್ಮ ಚುನಾವಣಾ ಪ್ರಕ್ರಿಯೆಯಲ್ಲಿ ಬಹಳ ಅಗತ್ಯವಿರುವ ಬದಲಾವಣೆಗಳನ್ನು ತರಲು ಈ ಮಹತ್ವದ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಲು ಸಿದ್ಧವಿರುವ ರಾಜಕೀಯ ಪಕ್ಷಗಳೊಂದಿಗೆ ಚರ್ಚೆಗಳನ್ನು ನಡೆಸಲಿದೆ.

ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಕಲ್ಯಾಣಕ್ಕೆ ಹಣ ಕಡಿತದ ವಿರುದ್ಧ ಚಳುವಳಿ, ಹೋರಾಟಗಳು

ಕೇಂದ್ರ ಬಜೆಟಿನಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬಡಕಟ್ಟುಗಳ ಕಲ್ಯಾಣಕ್ಕೆ ಅತ್ಯಲ್ಪ ಹಣ ನೀಡಿರುವುದರ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ದಿಗಿಲು ವ್ಯಕ್ತಪಡಿಸಿದೆ. ಯೋಜನಾ ಆಯೋಗ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ರದ್ದು ಮಾಡುವುದರೊಂದಿಗೆ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬಡಕಟ್ಟುಗಳ ಉಪಯೋಜನೆಗಳು ಇಲ್ಲವಾದಂತಾಗಿದೆ. ಇದರ ಫಲಿತಾಂಶವೆಂದರೆ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬಡಕಟ್ಟುಗಳಿಗೆಂದು ಮಂಜೂರಾಗುತ್ತಿದ್ದ ಅಪಾರ ಹಣ ಈಗ ಮಂಜೂರಾಗದೆ ಉಳಿದಿದೆ. ಪ್ರಸಕ್ತ ಕೇಂದ್ರ ಬಜೆಟ್ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಒಟ್ಟು ಬಜೆಟಿನ ಕೇವಲ 2.44ಶೇ.ವನ್ನು ಕೊಟ್ಟಿದ್ದರೆ, ಪರಿಶಿಷ್ಟ ಬಡಕಟ್ಟುಗಳಿಗೆ ಇನ್ನೂ ಕಡಿಮೆ, 1.48ಶೇ. ಮಾತ್ರ ಕೊಟ್ಟಿದೆ.

ಈ ಸನ್ನಿವೇಶದಲ್ಲಿ, ಸಿಪಿಐ(ಎಂ) ಇತರ ಎಡಪಕ್ಷಗಳು ಮತ್ತು ದಲಿತ ಹಕ್ಕುಗಳಿಗೆ ಸಂಬಂಧಪಟ್ಟ ಸಾಮಾಜಿಕ ಆಂದೋಲನಗಳೊಂದಿಗೆ ಈ ಕೆಳಗಿನ ಆಗ್ರಹಗಳನ್ನು ಮಾಡುವುದಾಗಿ ಪೊಲಿಟ್‌ಬ್ಯುರೊ ನಿರ್ಧರಿಸಿದೆ.:

1. **ಪರಿಶಿಷ್ಟ ಜಾತಿಗಳಿಗೆ ನಿರಾಕರಿಸಲಾಗಿರುವ ರೂ.71,139 ಕೋಟಿ ಮತ್ತು ಪರಿಶಿಷ್ಟ ಬಡಕಟ್ಟುಗಳಗೆ ನಿರಾಕರಿಸಲಾಗಿರುವ ರೂ.34,349 ಕೋಟಿಯನ್ನು ಕೂಡಲೇ ನೀಡಬೇಕು.**
2. **ಪರಿಶಿಷ್ಟ ಜಾತಿಗಳ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬಡಕಟ್ಟು ಉಪಯೋಜನೆ (ಟಿಎಸ್‌ಪಿ) ಜವಾಬುದಾರಿಕೆ, ಭಾಗವಹಿಸುವಿಕೆ ಮತ್ತು ಪಾರದರ್ಶಕತೆ ಶಾಸನವನ್ನು ರೂಪಿಸಬೇಕು: ಈ ಎರಡೂ ಉಪಯೋಜನೆಗಳಿಗೆ ಬಜೆಟುಗಳಲ್ಲಿ ಹಣ ಒದಗಿಸುವ ಕುರಿತು ಕೇಂದ್ರದ ಮಟ್ಟದಲ್ಲಿಯೂ, ರಾಜ್ಯಗಳ ಮಟ್ಟದಲ್ಲಿಯೂ ಜಾರಿಗೆ ತರಬೇಕಾದ ಅಂಶಗಳು ಮತ್ತು ವಿಧಾನಗಳನ್ನು ಸ್ಪಷ್ಟವಾಗಿ ನಿರೂಪಿಸುವ ಒಂದು ಕೇಂದ್ರೀಯ ಶಾಸನದ ಅಗತ್ಯವಿದೆ.**
3. **ಈ ಎರಡೂ ಉಪಯೋಜನೆಗಳಲ್ಲಿ 10ಶೇ. ವನ್ನು ನಿರ್ದಿಷ್ಟವಾಗಿ ಮಹಿಳೆಯರಿಗೆ ಒದಗಿಸಬೇಕಲ್ಲದೆ, ಮಹಿಳಾ ಫಲಾನುಭವಿಗಳಿಗೆ ಆದ್ಯತೆಯ ಬಗ್ಗೆ ವಿಶೇಷ ವ್ಯವಸ್ಥೆ ಇರಬೇಕು.**
4. **ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬಡಕಟ್ಟುಗಳ ವಿದ್ಯಾರ್ಥಿಗಳಿಗೆ ಮ್ಯಾಟ್ರಿಕ್ ನಂತರದ ಸ್ಕಾಲರ್‌ಶಿಪ್‌ಗಳಿಗೆಂದು ಕೊಡಬೇಕಾದ ಹಣದಲ್ಲಿ ಈಗಾಗಲೇ ಬಾಕಿಯಾಗಿರುವ 12,000 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು. ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬಡಕಟ್ಟುಗಳ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಮುಂದುವರೆಸಲು ಈ ಹಣದ ಮರುನೀಡಿಕೆಯನ್ನು ಮಾಡಬೇಕು.**

ಸಿಪಿಐ(ಎಂ) ಇತರ ಎಡಪಕ್ಷಗಳು ಮತ್ತು ದಲಿತ ಸಂಘಟನೆಗಳು ಮತ್ತು ಸಾಮಾಜಿಕ ಆಂದೋಲನಗಳೊಂದಿಗೆ ಈ ಪ್ರಶ್ನೆಗಳ ಮೇಲೆ ಜನತಾ ಚಳುವಳಿಗಳನ್ನು ಮತ್ತು ಹೋರಾಟಗಳನ್ನು ಸಮಗಟಿಸುತ್ತದೆ ಮತ್ತು ಅದೇ ವಏಳೆಯಲ್ಲಿ ಸಂಸದೀಯ ವೇದಿಕೆಗಳಲ್ಲಿ ಈ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ದಕ್ಷಿಣ ಏಶ್ಯ ದೇಶಗಳ ವಿಚಾರ ಸಂಕಿರಣ

ಮಹಾನ್ ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವ ಆಚರಣೆಯ ಭಾಗವಾಗಿ ಪೊಲಿಟ್‌ಬ್ಯುರೊ, ಹಿಂದಿನ ಕೇಂದ್ರ ಸಮಿತಿಯ ಸಭೆಯ ನಿರ್ಧಾರದಂತೆ ಸಪ್ಟಂಬರ್ 2017ರಲ್ಲಿ ನೇಪಾಳ, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಶ್ರೀಲಂಕಾದ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಎರಡು ದಿನಗಳ ವಿಚಾರ ಸಂಕಿರಣವನ್ನು ಸಂಘಟಿಸುವ ಸೂಚನೆಯನ್ನು ಮುಂದಿಟ್ಟಿದೆ. ಈ ವಿಚಾರ ಸಂಕಿರಣ "ಸಮಕಾಲೀನ ಯುಗದಲ್ಲಿ ಸಾಮ್ರಾಜ್ಯಶಾಹಿ, ಕೋಮುವಾದ ಮತ್ತು ಮೂಲಭೂತವಾದವನ್ನು ಎದುರಿಸುವ ಬಗೆ–ಅಕ್ಟೋಬರ್ ಕ್ರಾಂತಿಯ ಚಿರ ಪ್ರಸ್ತುತತೆ" ಕುರಿತಂತೆ ಗಮನ ಕೇಂದ್ರೀಕರಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮುಂದಿನ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಎಪ್ರಿಲ್ 18–19ರಂದು ನಡೆಯಲಿದೆ. ಎಪ್ರಿಲ್ 17ರಂದು ಪೊಲಿಟ್‌ಬ್ಯುರೊ ಸಭೆ ನಡೆಯಲಿದೆ.

ಮಾತೆಂದರೆ ಇದು

ಬಂಡವಾಳಶಾಹಿ ಸಮಾಜ ಇಂದು
ಒಂದು ಕವಲುದಾರಿಯಲ್ಲಿದೆ. ಅದು
ಸಮಾಜವಾದದತ್ತ ಬದಲಾವಣೆಯತ್ತ
ಹೋಗಬೇಕು ಅಥವಾ ಬರ್ಬರತೆಯತ್ತ
ಹಿಂದಿರುಗಬೇಕು



– ರೋಸಾ ಲಕ್ಸಂಬರ್ಗ್

ದಿಲ್ಲಿ ವಿ.ವಿ.ಯಲ್ಲಿ ಎಬಿವಿಪಿ ಹಿಂಸಾಚಾರ: ಸಿಪಿಐ(ಎಂ) ಖಂಡನೆ
ಹಿಂಸಾತ್ಮಕ ಅಸಹಿಷ್ಣುತೆಯ ಮತ್ತೊಂದು ನಾಚಿಕೆಹೀನ ಉದಾಹರಣೆ

ಆರೆಸ್ಸೆಸ್‌ನ ವಿದ್ಯಾರ್ಥಿ ಸಂಘಟನೆ ಎಬಿವಿಪಿ ದಿಲ್ಲಿ ವಿಶ್ವವಿದ್ಯಾಲಯದಲ್ಲಿ ನಡೆಸಿರುವ ಹಿಂಸಾಚಾರವನ್ನುಮತ್ತು ಗೂಂಡಾಗಿರಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಮೊದಲಿಗೆ ಎಬಿವಿಪಿ ರಾಮಜಾಸ್ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗ ಸಂಘಟಿಸಿದ ಒಂದು ವಿಚಾರ ಸಂಕಿರಣವನ್ನು ಛಿದ್ರಗೊಳಿಸಲು ಪ್ರಯತ್ನಿಸಿತು. ಅಲ್ಲಿನ ವಿದ್ಯಾರ್ಥಿಗಳು ಪ್ರತಿಭಟಿಸಿದಾಗ ಮರುದಿನ ಎಬಿವಿಪಿ ಗೂಂಡಾಗಳು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಮೇಲೆ ದಾಳಿ ಮಾಡಿ ಹಲವರನ್ನು ಗಾಯಗೊಳಿಸಿದರು. ಮಾಧ್ಯಮಗಳ ಸಿಬ್ಬಂದಿಗಳನ್ನೂ ಬಿಡಲಿಲ್ಲ. ದಿಲ್ಲಿ ಪೋಲೀಸರು ಎಬಿವಿಪಿ ಗೂಂಡಾಗಳಿಗೆ ಸೌಕರ್ಯಗಳನ್ನು ಒದಗಿಸಿ ಕೊಡುವ ನಾಚಿಕೆಗೆಟ್ಟ ಪಾತ್ರವನ್ನು ವಹಿಸಿದರು, ಅವರು ವಿದ್ಯಾರ್ಥಿಗಳ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದಾಗ ಸುಮ್ಮನೇ ನಿಂತು ನೋಡುತ್ತಿದ್ದರು. ಸ್ಥಳೀಯ ಪೊಲಿಸ್ ಠಾಣೆಗೆ ಪ್ರತಿಭಟನೆ ನಡೆಸಲು ಹೊರಟಿದ್ದ ದಿಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘ ಮತ್ತು ಅಕೆಡೆಮಿಕ್ ಕೌನ್ಸಿಲ್ನ ಸದಸ್ಯರೂ ಸಏರಿದಂತೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಮೇಲೆ ದಿಲ್ಲಿ ಪೋಲೀಸರೇ ಹಲ್ಲೆ ನಡೆಸಿದರು ಎಂದು ವರದಿಯಾಗಿದೆ. ಇದು ಎಲ್ಲ ಪ್ರಜಾಪ್ರಭುತ್ವವಾದಿ ಪ್ರತಿಭಟನೆಗಳು, ಅದರಲ್ಲೂ ವಿಶ್ವವಿದ್ಯಾಲಯಗಳಲ್ಲಿನ ಪ್ರತಿಭಟನೆಗಳಿಗೆ ಆರೆಸ್ಸೆಸ್–ಬಿಜೆಪಿ ಕೂಟ ಮತ್ತು ಅದರ ವಿವಿಧ ಅಂಗಗಳು ಪ್ರಭುತ್ವ ಯಂತ್ರದ ಬೆಂಬಲದೊಂದಿಗೆ ಪ್ರದರ್ಶಿಸುತ್ತಿರುವ ಹಿಂಸಾತ್ಮಕ ಅಸಹಿಷ್ಣುತೆಯಿನ್ನೊಂದು ನಾಚಿಕೆಹೀನ ಉದಾಹರಣೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ವಿಚಾರಸಂಕಿರಣವನ್ನು ಕದಡಿಸಲು ಮತ್ತು ಪ್ರಜಾಸತ್ತಾತ್ಮಕ ಪ್ರತಿಭಟನೆಗಳ ಮೇಲೆ ಹಲ್ಲೆ ನಡೆಸಲು ಹಿಂಸಾಚಾರದಲ್ಲಿ ತೊಡಗಿದ ಎಲ್ಲರನ್ನೂ ಬಂಧಿಸಬೇಕು, ಎಬಿವಿಪಿಯೊಂದಿಗೆ ಶಾಮೀಲಾಗಿರುವ ದಿಲ್ಲಿ ಪೋಲೀಸ್ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಫೆಬ್ರುವರಿ 24ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ

ಎಬಿವಿಪಿ ಹಿಂಸಾಚಾರದ ವಿರುದ್ಧ ಫೆಬ್ರುವರಿ 24ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಮಂಡಳಿ ಕರೆ ನೀಡಿದೆ. ಕ್ಯಾಂಪಸ್ ಪ್ರಜಾಪ್ರಭುತ್ವದ ಮೇಲೆ ಆರೆಸ್ಸೆಸ್ ಪ್ರಹಾರದ ವಿರುದ್ಧ ಒಂದಾಗಿ ಎಂದು ಅದು ಕರೆ ನೀಡಿದೆ. ಕ್ಯಾಂಪಸ್‌ಗಳಲ್ಲಿರುವ ಎಬಿವಿಪಿ ವಿದ್ಯಾರ್ಥಿಗಳು ಅಥವ ಶೈಕ್ಷಣಿಕ ವಿಷಯಗಳ ಬಗ್ಗೆ ಏನೇನೂ ಸಂಬಂಧಪಡದ ಗೂಂಡಾಗಳ ಪಡೆಯಷ್ಟೇ ಆಗಿದೆ. ಕೇಸರಿ ಪಡೆಗಳು ತಮ್ಮ ರಾಜಕೀಯ ಅಜೆಂಡಾವನ್ನು ಈಡೇರಿಸಿಕೊಳ್ಳಲು ಈ ಮಂದಿಯನ್ನು ಬಳಸುತ್ತಿವೆ ಎಂದು ಎಸ್‌ಎಫ್‌ಐ ಹೇಳಿದೆ.

ಪಿಣರಾಯಿ ಬರುತ್ತಾರೆ, ಸೌಹಾರ್ದ ರ್‍ಯಾಲಿ ನಡೆಯುತ್ತದೆ

ಸಂಪಾದಕೀಯ

ಕಳೆದ ಕೆಲವು ವಾರಗಳಿಂದ ಕರಾವಳಿ ಕರ್ನಾಟಕದಲ್ಲಿ ನಡೆಯುತ್ತಿರುವ ಕೋಮು ಸಾಮರಸ್ಯ ಮತ್ತು ಸೌಹಾರ್ದತೆಗೆ ಸಿಪಿಐ(ಎಂ) ಹಮ್ಮಿಕೊಂಡಿದ್ದ ಪ್ರಚಾರಾಂದೋಲನ ಆ ಪ್ರದೇಶದ ಮಾತ್ರವಲ್ಲ ರಾಜ್ಯದ ರಾಜಕಿಯದಲ್ಲೊಂದು ತಿರುಗುಬಿಂದುವಾಗಲಿದೆ. ಐತಿಹಾಸಿಕ ಮಹತ್ವದ ಮೈಲಿಗಲ್ಲಾಗಲಿದೆ. ದೇಶದ ಕೋಮುವಾದೀಕರಣದ ಫ್ಯಾಸಿಸ್ಟ್ ದಾಳಿಗಳ ಪ್ರಯೋಗಶಾಲೆ ಎನಿಸಿಕೊಂಡ ಸಂಘ ಗ್ಯಾಂಗನ್ನು ಇಲ್ಲಿ ಹಿಡಿಯುವವರೇ ಇಲ್ಲ. ಅಲ್ಲಿ ನಡೆಯುವುದು ಸಂಘ ಗ್ಯಾಂಗಿನ ದರ್ಬಾರು ಎಂಬ ಅನಿಸಿಕೆ ಬದಲಾಗುವ ಕಾಲ ಬಂದಿದೆ. ಫೆ. 25ರಂದು ಸೌಹಾರ್ದ ರ್‍ಯಾಲಿ ನಡೆಯಲು ಬಿಡುವುದಿಲ್ಲ. ಪಿಣರಾಯಿ ವಿಜಯನ್ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕಾಲಿಡಲು ಬಿಡುವುದಿಲ್ಲ ಎಂಬ ಸಂಘ ಪರಿವಾರದ ಸವಾಲನ್ನು ಸಿಪಿಐ(ಎಂ) ಸ್ವೀಕರಿಸಿ ಸೆಡ್ಡು ಹೊಡೆದು ನಿಂತಿದೆ. ಫ್ಲೆಕ್ಸ್ ಗಳನನು ಕದ್ದರೂ, ಪೋಸ್ಟರುಗಳನನು ಹರಿದರೂ, ಗೋಡೆ ಬರಹಗಳಿಗೆ ಪೈಂಟು ಹೊಡೆದರೂ, ಕಚೇರಿಗೆ ಬೀಗ ಮುರಿದು ಬೆಂಕಿ ಇಟ್ಟರೂ ಎದೆಗುಂದದೆ, ಪ್ರಚೋದಿತರಾಗದೆ ಸಿಪಿಐ(ಎಂ) ಮತ್ತು ಜಿಲ್ಲೆಯ ಜನತೆ "ಪಿಣರಾಯಿ ಬಂದೇ ಬರುತ್ತಾರೆ, ಸೌಹಾರ್ದ ರ್‍ಯಾಲಿ ನಡೆದೇ ನಡೆಯುತ್ತದೆ' ಎಂದು ಪಟ್ಟು ಹಿಡಿದಿದೆ. ಮೊದಲ ಬಾರಿಗೆ ಸಂಘ ಗ್ಯಾಂಗಿನ ಬೆದರಿಕೆಗೆ ಜಗ್ಗದ ಒಂದು ರಾಜಕೀಯ ಶಕ್ತಿಯನ್ನು ಕಂಡು ಜನ ರೋಮಾಂಚಿತರಾಗಿದ್ದಾರೆ.

ಜಿಲ್ಲೆಯ ದಲಿತ, ಮುಸ್ಲಿಮರ, ಹಿಂದುಳಿದ ಜಾತಿಗಳ ಜನ ಸಂಘ ಗ್ಯಾಂಗಿನ ಒಡೆದಾಳುವ ನೀತಿಗೆ ಪ್ರತಿರೋಧ ಒಡ್ಡುವ ಸಿಪಿಐ(ಎಂ) ಜತೆಗೆ ದೃಢವಾಗಿ ನಿಂತಿದ್ದಾರೆ. ಬಿಲ್ಲವ ಸಮಾಜದ ಪ್ರತಿನಿಧಿಗಳು ಇದು ನಮ್ಮ 'ಸ್ವಾಭಿಮಾನ ರ್‍ಯಾಲಿ' ಎಂದಿದ್ದಾರೆ. ಎಲ್ಲಾ ನಿಲುವುಗಳ ಒಲವುಗಳ ಪ್ರಗತಿಪರ ಸಂಘಟನೆ ಮತ್ತು ವ್ಯಕ್ತಿಗಳು – ಲೇಖಕರು, ಕಲಾವಿದರು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು, ಒಕ್ಕೊರಲಿಂದ ಸಂಘ ಗ್ಯಾಂಗಿನ ಪ್ರಜಾಸತ್ತೆ ಮತ್ತು ಸಂವಿಧಾನ–ವಿರೋಧಿ ನಿಲುವು ಮತ್ತು ಹಿಂಸಾಚಾರದ ಬೆದರಿಕೆಯನ್ನು ಖಂಡಿಸಿದ್ದಾರೆ. ಪಿಣರಾಯಿ ಬೇಟಿಯನ್ನು ಸ್ವಾಗತಿಸಿದ್ದಾರೆ. ಸೌಹಾರ್ದ ರ್‍ಯಾಲಿಯಲ್ಲಿ ಭಾಗವಹಿಸುವ ಪಣ ತೊಟ್ಟಿದ್ದಾರೆ.

ಇದೊಂದು ಐತಿಹಾಸಿಕ ಕ್ಷಣ. ಇದೇ ಜಿಲ್ಲೆಯ ಹಿರಿಯ ಕವಿ ಗೋಪಾಲಕೃಷ್ಣ ಅಡಿಗರ ;ಕಟ್ಟುವೆವು ನಾವು' ಕವನದ ಕೆಲವು ಸಾಲುಗಳನ್ನು ನೆನಪಿಸುವ ಸಾಕಾರಗೊಳಿಸುವ ಕ್ಷಣ:

ಹೊಡೆಯುವವರು ಬನ್ನಿರೋ ತಡೆವವರು ಬನ್ನಿರೋ,
ಕೆಡೆ ನುಡಿವ ಕೆಡೆ ಬಗೆವ ಕೆಡುಕು ಜನರೇ ಬನ್ನಿ,
ಕೊಟ್ಟೆವಿದೋ ವೀಳೆಯವನು,
ನಿಮ್ಮೆಲರನು ತೊಡೆದು ನಿಮ್ಮ ಮಸಣದ ಮೇಲೆ,
ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು.
"ಪಿಣರಾಯಿ ಬಂದೇ ಬರುತ್ತಾರೆ,
ಸೌಹಾರ್ದ ರ್‍ಯಾಲಿ ನಡೆದೇ ನಡೆಯುತ್ತದೆ'

ಕೋಮುವಾದಿಗಳು, ಮತೀಯ ಮೂಲಭೂತವಾದಿಗಳ ಕನಸು, ಕಾರ್ಯ ಒಂದೇ

ಎಸ್. ವೈ. ಗುರುಶಾಂತ್

ಒಂದು ಕಾಲವಿತ್ತು. ಕರಾವಳಿ ಕರ್ನಾಟಕ ಎಂದರೆ ಅದೊಂದು ವಿಶಾಲವಾದ ವಿಶಿಷ್ಟ ಕಡಲು ಕಿನಾರೆಗಳ ನಿಸರ್ಗ ಸುಂದರತೆಯ ಬೀಡೆಂದು. ವಿವಿಧ ಜಾತಿ, ಬುಡಕಟ್ಟು, ವಿಭಿನ್ನ ಧಾರ್ಮಿಕ ನಂಬಿಕೆಗಳು, ಆಚಾರ ವಿಚಾರಗಳು, ಭಾಷೆಗಳ ಸಾಮರಸ್ಯಗಳ ಸಂಗಮವೆಂದು. ಕೃಷಿ, ಕೈಗಾರಿಕೆ, ಆರ್ಥಿಕ ವಹಿವಾಟುಗಳಲ್ಲಿ, ಶಿಕ್ಷಣದಲ್ಲಿ ಮುಂದುವರಿದ ಪ್ರದೇಶವೆಂದು. ಅದಕ್ಕಾಗಿ ಅಲ್ಲವೇ ಅವಿಭಜಿತ ದ.ಕ.ಜಿಲ್ಲೆಯೆಂದರೆ ಬುದ್ಧಿವಂತರ ಜಿಲ್ಲೆ ಎಂಬ ಅಭಿಧಾನವಿದ್ದದ್ದು. ಬಹುಶಃ ಇಂತಹದ್ದನ್ನು ನೋಡಿಯೇ ' ಕರ್ನಾಟಕವೆಂದರೆ 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ರಾಷ್ಟ್ರ ಕವಿಗಳು ಹಾಡಿರಬೇಕು. ಆದರೀಗ?

ಆದರೀಗ ಆ ಚಿತ್ರಣ ಬದಲಾಗಿದೆ ಎಂಬುದನ್ನು ವಿಷಾದಿಂದ ಹೇಳಲೇ ಬೇಕಾಗಿದೆ. ಹಲವು ಸಾಧನೆಗಳಿಂದ ಖ್ಯಾತಿಯಾಗುತ್ತಾ ಜನರ ನಾಲಿಗೆಯಲ್ಲಿ ನಲಿಯುತ್ತಿದ್ದ ಕರಾವಳಿ ಇದೀಗ ಆತಂಕ, ದುಃಸ್ವಪ್ನಗಳನ್ನು ಹುಟ್ಟು ಹಾಕುತ್ತಿದೆ. ದ್ವೇಷದ ದಳ್ಳುರಿ, ಹಿಂಸೆ, ಅರಾಜಕತೆಗಳು ನಿತ್ಯದ ಮಾತಾಗುತ್ತಿವೆ. ಮುಖ್ಯವಾಗಿ ದ.ಕನ್ನಡದ ಮಂಗಳೂರು ಮತ್ತು ಉಡುಪಿ ಕೋಮುವಾದಿ ಸಂಘರ್ಷದ ಕದನದ ಕಣವಾಗಿ ಮಾರ್ಪಾಡಾಗಿದೆ. ಮತ್ತು ಇಂತಹುದೇ ಸ್ಥಿತಿಯತ್ತ ಕೆಲ ತಾಲೂಕುಗಳೂ ಹೊರಳುತ್ತಿವೆ. ಇದರಲ್ಲಿ ಸಕ್ರಿಯವಾಗಿ ತೊಡಗುತ್ತಿರುವ, ಮತೀಯ ದ್ವೇಷ, ಕ್ರಿಮಿನಲ್ ಕೃತ್ಯಗಳ ನ್ಯಾಯೀಕರಣದ ಪ್ರಭಾವದಲ್ಲಿ ಯುವಜನರ ಬಹು ದೊಡ್ಡ ವಿಭಾಗ ಬಲಿಯಾಗುತ್ತಿದೆ. ಈ ನವ ಪೀಳಿಗೆಗೆ ತನ್ನ ನಾಡು, ನುಡಿಯ, ಶ್ರೀಮಂತಿಕೆಯ ಬಹುಮುಖಿ ಸಂಸ್ಕೃತಿ, ಸೌಹಾರ್ದ ಪರಂಪರೆಯ ಅರಿವಿಲ್ಲ. ಹಿರಿಯರೂ ಇದರಿಂದ ಹೊರತೆಂದು ಹೇಳಲೂ ಆಗುವುದಿಲ್ಲ.

ಕೋಮುವಾದ, ಮತೀಯ ಮೂಲಭೂತವಾದವೆಂದರೆ ಹಾಗೆಯೇ. ದ್ವೇಷಿಸುವ, ಇತರರ ಅಸ್ತಿತ್ವವನ್ನೇ ನಿರಾಕರಿಸುವ, ಆಕ್ರಮಣಿಸುವ, ವಿವೇಚನೆ, ವಿವೇಕಗಳೇ ಇಲ್ಲವಾಗಿ, ಅಮಾನವೀಯವಾಗಿಸುವ ಬದುಕಿನ ಬವಣೆಗಳನ್ನು ಮರೆಯಾಗಿಸಿ ಹುಸಿ ಹೊಡೆದಾಟದಲ್ಲೇ ಮುಳುಗಿಸುವ ಅಪಾಯಕಾರಿ ಪ್ರವೃತ್ತಿ. ಇಲ್ಲಿ ಈ ಪ್ರಕ್ರಿಯೆ 90 ರ ದಶಕದಲ್ಲಿ ಇಂಬು ಪಡೆದು ವಿಷದ ನಂಜು ಹೆಚ್ಚುತ್ತಲೇ ಹೋಗಿದೆ. ಇದು ಅಲ್ಲಿಗೆ ಮಾತ್ರವೇ ಸೀಮಿತಗೊಂಡದ್ದೇನಲ್ಲ. ಅದು ದೇಶದಲ್ಲಿ, ಕರ್ನಾಟಕದಲ್ಲಿನ ಒಟ್ಟು ವಿದ್ಯಾಮಾನಗಳ ಭಾಗ.

ಬಹುಸಂಖ್ಯಾತರ ಹೆಸರಿನ ಕೋಮುವಾದವೇ ಆಗಲಿ, ಅಲ್ಪಸಂಖ್ಯಾತರ ಹೆಸರಿನ ಮೂಲಭೂತವಾದವೇ ಆಗಿರಲಿ ಇವುಗಳ ಬೆಳವಣಿಗೆಗೆ ಅತಿ ಧಾರ್ಮಿಕತೆ ಪೂರ್ವೋಪಾದಿ ಅವಶ್ಯಕತೆಯನ್ನಾಗಿಸಿ ಬೆಳೆಯುತ್ತವೆ. ರಾಜಕೀಯ ಉದ್ದೇಶಗಳಿಂದ ಪ್ರಜ್ಞಾಪೂರ್ವಕವಾಗಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುವ ಏಕಮುಖ ಧಾಳಿಗಳು, ಅವರನ್ನು ಎರಡನೆಯ ದರ್ಜೆಯ ನಾಗರೀಕರೆಂಬಂತೆ ನಡೆಸಿಕೊಳ್ಳುವ ತಾರತಮ್ಯಗಳು, ದಬ್ಬಾಳಿಕೆ, ಹಿಂಸಾ ವರ್ತನೆಗಳು, ನ್ಯಾಯ ನೀಡಿಕೆ, ಸಂರಕ್ಷಣೆ ಕೊಡಬೇಕಾದ ಆಡಳಿತದ ವಿಫಲತೆಗಳು, ಸತತವಾಗಿ ನಡೆಯುತ್ತಿರುವಂತೆ ಅಲ್ಪಸಂಖ್ಯಾತ ಸಮುದಾಯಗಳಲ್ಲಿನ ಅಸಹಾಯಕತೆ, ಅತೃಪ್ತಿ, ಆಕೋಶ ಹೆಚ್ಚಿ ಅವರೂ ಕೂಡ 'ಪ್ರತಿಕ್ರಿಯೆ'ಗೆ ಇಳಿಯುವಂತೆ ಪ್ರೇರೇಪಿಸುತ್ತದೆ. ಈ ಪ್ರತಿಕ್ರಿಯೆ ಕೋಮುವಾದಕ್ಕೆದುರಾಗಿ ಎಲ್ಲಾ ಪ್ರಗತಿಪರ, ಮತ ನಿರಪೇಕ್ಷತೆಯ ಶಕ್ತಿಗಳೊಂದಿಗಿನ ಪ್ರಜಾಸತ್ತಾತ್ಮಕ ಸ್ವರೂಪದಲ್ಲಿ ಇರಬೇಕು. ಇಲ್ಲವಾದಲ್ಲಿ ಅದು ಮತೀಯ ನೆಲೆಯ ಮೂಲಭೂತವಾಗಿ ಬಿಡುವ ಸಂಭವಗಳೇ ಹೆಚ್ಚು.

ಕರಾವಳಿಯ ವಿಷಯದಲ್ಲಿಯೂ ಇಂತಹುದೇ ಪ್ರಕ್ರಿಯೆಗಳನ್ನು ಗಮನಿಸಬಹುದು. 90ರ ದಶಕದಲ್ಲಿನ ರಾಮಜನ್ಮಭೂಮಿ–ಬಾಬ್ರಿ ಮಸೀದಿಯ ವಿವಾದ ಬಳಸಿ ಹುಟ್ಟು ಹಾಕಲಾದ ಕೋಮುಘರ್ಷಣೆ ಎಂಬುದು ಮುಸ್ಲಿಂರ ಮೆಲಿನ ಬಹುತೇಕ ಏಕಮುಖವಾದ ಧಾಳಿಯಾಗಿತ್ತು. 92 ರಲ್ಲಿನ ಈ ಗಲಭೆಯಲ್ಲಿ ಸುಮಾರು ಆರು ಜನ ಬಲಿಯಾದರು. ಮುಂದೆ ಇದು ಹಾಗೇ ವಿಸ್ತರಿಸುತ್ತಾ 98 ರಲ್ಲಿ ಸುರತ್ಕಲ್‌ನಲ್ಲಿಯ ಗಲಭೆಯಲ್ಲಿ ಹತ್ತು ಜೀವಿಗಳ ಸಾವು, ಅಪಾರ ಆಸ್ತಿ ಹಾನಿ ಸಂಭವಿಸಿ ಅಳಿಸಲಾಗದ ಗಾಯವನ್ನು ಮಾಡಿತು. ಇದರಲ್ಲಿ ಜನರ ನಡುವೆ ಅನುಮಾನಗಳು, ಸುಳ್ಳು ಪ್ರಚಾರಗಳು, ಪೂವಗ್ರಹಪೀಡಿತ ಮನೊಭಾವದ ಸೃಷ್ಟಿ, ಗಲಭೆಗಳನ್ನು ಹುಟ್ಟು ಹಾಕುವಲ್ಲಿ ಸಂಘಪರಿವಾರದ ಪಾತ್ರವೇ ಮುಖ್ಯವಾಗಿತ್ತು. ನಂತರದಲ್ಲಿ ಆದಿ ಉಡುಪಿಯ ದನದ ವ್ಯಾಪಾರಿಗಳಾದ ಹಾಜಬ್ಬ–ಹಸನಬ್ಬನವರನ್ನು ಬೆತ್ತಲಾಗಿಸಿ, ಅಮಾನುಷವಾಗಿ ಹೊಡೆದ ಘಟನೆ ದಿಗ್ಭ್ರಮೆ ಹುಟ್ಟಿಸಿತು. ಈ ಸುಮಾರಿನಲ್ಲೇ ಭಟ್ಕಳ, ಕುಂದಾಪುರದ ಅಸೋಡು ಜಾತ್ರೆ ಹಿನ್ನೆಲೆಯಲ್ಲಿ ಕೋಮು ಗಲಭೆ ಪ್ರಕರಣ, ಮಂಗಳೂರು ಪರಿಸರದಲ್ಲಿನ ಘಟನೆಗಳು ಸಮಾಜದಲ್ಲಿ ಅಶಾಂತಿ, ಮತೀಯ ದ್ವೇಷ, ಸಾಮಾಜಿಕ ತ್ವೇಷವನ್ನು ಹೆಚ್ಚಿಸಿದವು. ಈ ಘಟನೆಗಳಿಗೆ ಪ್ರತಭಟನೆ, ಪ್ರತಿರೋಧಗಳು ಇದ್ದವು. ಹಾಗೆ ದೇಶದಲ್ಲಿ ವಿಶೇಷವಾಗಿ ಗುಜರಾತ್‌ನಲ್ಲಿಯ ಹತ್ಯಾಕಾಂಡ ಈ ಭಾಗದ ಅಲ್ಪಸಂಖ್ಯಾತರಲ್ಲಿ ವಿಪರೀತ ಆತಂಕವನ್ನು ಹೆಚ್ಚಿಸಿದ್ದವು. ಇಂತಹುದರ ನಡುವೆ ಆದಿ ಉಡುಪಿ ಘಟನೆಯನ್ನು ಖಂಡಿಸಿ ಕೂಡಲೇ ವ್ಯಾಪಕ ಪ್ರತಿಭಟನೆಯನ್ನು ತೋರುವಲ್ಲಿ ಡಿ.ವೈ.ಎಫ್.ಐ. ಮತ್ತು ಸಿಪಿಐ(ಎಂ) ಪಕ್ಷಗಳು ಮಂಗಳೂರಿನಲ್ಲಿ ಮದ್ಯಪ್ರವೇಶಿಸಿ ಹತ್ತಾರು ಸಾವಿರ ಜನರ ಪ್ರತಿಭಟನೆ ನಡೆಸಿದ್ದು ಗಮನಾರ್ಹ. ಇಲ್ಲಿ ಎಲ್ಲಾ ಸಮುದಾಯಗಳ ಜನತೆ, ಜಾತ್ಯಾತೀತ ಶಕ್ತಿಗಳು ಒಂದಾಗಿದ್ದವು. ಅದೇ ಹೊತ್ತಿನಲ್ಲಿ ಉಡುಪಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಸ್ಲಿಂರ ಧಾರ್ಮಿಕ ಬಾವುಟವನ್ನು ಹಿಡಿದು ಪ್ರತಿಭಟಿಸಿದ್ದನ್ನೇ ಪಾಕ್ ಧ್ವಜವೆಂದು ಅಪಪ್ರಚಾರಿಸಿ ವಿವಾದ ಸೃಷ್ಟಿಸಲಾಯಿತು. ಈ ವಿವಾದವನ್ನು ಸಂಘಪರಿವಾರವೇ ಹುಟ್ಟು ಹಾಕಿತ್ತು. ಈ ಪ್ರತಿಭಟನೆಯ ಸುಮಾರಿನಲ್ಲಿ ನಾನು ಗಮನಿದ್ದೇನೆಂದರೆ ಮಂಗಳೂರಿನಲ್ಲಿ ಅಪಾರ ಪ್ರಮಾಣದಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಯುವಜನರು ಡಿ.ವೈ.ಎಫ್.ಐ. ಸಂಘಟನೆಯತ್ತ ಬರತೊಡಗಿದ್ದರು. ಅಂದರೆ ಒಂದು ಸೆಕ್ಯುಲರ್ ವಿಶಾಲ ಪ್ರತಿರೋಧದ ಪ್ರಕ್ರಿಯೆಯಲ್ಲಿ ಒಂದಾಗುತ್ತಿದ್ದರು. ಆದರೆ ಇದನ್ನು ಕೆಲ ಮೂಲಭೂತವಾದಿಗಳು ಮತ್ತು ಎಡ ದುಸ್ಸಾಹಸವಾದಿಗಳು ಸಹಿಸಲಿಲ್ಲ ಎಂಬುದು ವಾಸ್ತವವೇ. ಇದನ್ನು ತಡೆಯಲು 'ಕರ್ನಾಟಕ ಫೋರಮ್ ಫಾರ್ ಡಿಗ್ನಿಟಿ' ಎಂಬ ವೇದಿಕೆಯನ್ನು ಹುಟ್ಟು ಹಾಕಿದರಲ್ಲದೇ ಅಲ್ಪ ಸಂಖ್ಯಾತ ಸಮುದಾಯದ ಯುವಜನರನ್ನು ಮತೀಯ ಮೂಲಭೂತವಾದದ ನೆಲೆಯಲ್ಲಿ ಸಂಘಟಿಸಲು ತೊಡಗಿದ್ದರು. ಈ ವೇದಿಕೆ ಕೋಮುವಾದದ ವಿರುದ್ಧ ರಕ್ಷಣೆಗೆಂದು ಹೇಳಲಾಯಿತಾದರೂ ಅದರ ಚಟುವಟಿಕೆ, ಕಾರ್ಯಕ್ರಮ ಮತ್ತು ಕಾರ್ಯ ವೈಖರಿಗಳು ಕೋಮುವಾದವನ್ನು ಎದುರಿಸುವ ಹೆಸರಿನಲ್ಲಿ ಅಲ್ಪಸಂಖ್ಯಾತ ಮೂಲಭೂತವಾದವನ್ನು ಬೆಳೆಸುವುದಾಗಿತ್ತು. ಇಂತಹ ಪ್ರಕ್ರಿಯೆಯನ್ನು ಕೆಲವು ಬುದ್ಧಿಜೀವಿಗಳು ಅಂದಿನಿಂದ ಇಂದಿನವರೆಗೂ ಸಮರ್ಥಿಸುತ್ತಿರುವುದು ವಿಚಿತ್ರವೇ ಆಗಿದೆ.

ಪ್ರಶ್ನೆ ಇದು ಕೋಮುವಾದವನ್ನು ಎದುರಿಸಿದೆಯೇ, ಅಥವಾ ಯಾವ ಸ್ವರೂಪವನ್ನು ಪಡೆದಿದೆ ಎಂಬುದು. ಕೆ.ಎಫ್.ಡಿ.ಯಂತಹ ಸಂಘಟನೆ ಮಂಗಳೂರಿನಲ್ಲಿ ಮತ್ತು ರಾಜ್ಯದ ಇತರೆಡೆ ಸಂಘಪರಿವಾರದ ರೀತಿಯಲ್ಲೇ ವರ್ತಿಸಿರುವುದಕ್ಕೆ ಹಲವು ನಿದರ್ಶನಗಳಿವೆ. ಇದು ಮುಂದೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಬಳಿಕ ಸೋಶಿಯಲ್ ಡೆಮೋಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವಾಗಿ ಕಾರ್ಯ ನಿರ್ವಹಿಸಿದಾಗಲೂ ಅದರ ಮೂಲಭೂತವಾದಿ ರಾಜಕೀಯ ಪ್ರವೃತ್ತಿ ಬದಲಾಗಿಲ್ಲ. ಮೇಲಾಗಿ ಎಸ್.ಡಿ.ಪಿ.ಐ. ನ ಕಾರ್ಯ ವಿಧಾನ, ಅದು ನಡೆಸಿದ ಕಾರ್ಯಾಚರಣೆ, ಧಾಳಿಗಳು ಭಯೋತ್ಪಾದನಾ ಕೃತ್ಯಗಳಿಗೆ ಕಡಿಮೆ ಇಲ್ಲ. ಇದರ ಬಲವಿರುವ ಕೇರಳ ರಾಜ್ಯದಲ್ಲಿ 2010ರಲ್ಲಿ ಕಾಲೇಜಿನ ಅಧ್ಯಾಪಕರೊಬ್ಬರು ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆ ಪ್ರವಾದಿ ಮಹಮ್ಮದ್‌ರವರನ್ನು ಅವಮಾನಗೊಳಿಸುವಂತಿದೆ ಎಂದು ಕೈಗಳನ್ನೇ ಇವರು ಕಡಿದಿದ್ದರು. ಇತ್ತೀಚಿನ ಕೇರಳದಲ್ಲಿನ ಕಣ್ಣೂರು ಒಳಗೊಂಡ ಹಲವು ಕೊಲೆ ಪ್ರಕರಣಗಳನ್ನು ಭೇಧಿಸಿದ ಬಳಿಕ ಗೃಹ ಇಲಾಖೆ ವ್ಯಕ್ತಿಗಳನ್ನು ಹತ್ಯೆ ಮಾಡುವ ತರಬೇತಿಯನ್ನು ನೀಡುತ್ತಿವೆ ಎಂದು ಹೇಳಿದೆ.

ಕರ್ನಾಟಕದಲ್ಲಿ ಕೊಡಗು, ಮೈಸೂರು ಗಲಭೆಗಳಲ್ಲಿ ಎಸ್.ಡಿ.ಪಿ.ಐ. ಮತ್ತು ಪಿ.ಎಫ್.ಐ.ಗಳ ಪಾತ್ರವಿರುವ ಆರೋಪಗಳಿವೆ. ಕರಾವಳಿಯ ದ.ಕ. ಜಿಲ್ಲೆಯ ವಿಟ್ಲದಲ್ಲಿ ಪತ್ರಕರ್ತರೊಬ್ಬರು ಮುಸ್ಲಿಂ ವಿಧವೆಗೆ ಸಹಾಯ ನೀಡುವಲ್ಲಿ ಮುತುವರ್ಜಿ ವಹಿಸಿದರೆಂದು ಅವರ ಮೇಲೆ ಧಾಳಿಯನ್ನು ಮಾಡಿದರು. ಅವರ ಆಕ್ಷೇಪ ಮುಸ್ಲಿಂ ಮಹಿಳೆಗೆ ಸಹಾಯ ಮಾಡಲು ಇವನ್ಯಾರು ಎಂದು! ಇವರು ಮಂಗಳೂರು ಇತರೆಡೆಯಲ್ಲಿ ಸಂಘಪರಿವಾರದಂತೆಯೇ ಅನೈತಿಕ ಪೋಲೀಸ್‌ಗಿರಿ ಮಾಡುವ ಹಲವರು ಪ್ರಕರಣಗಳು ನಿಚ್ಚಳವಾಗಿವೆ. ವಿಶೇಷವೆಂದರೆ ಸಂಘಪರಿವಾರವನ್ನು ವಿರೋಧಿಸುವುದಾಗಿ ಹೇಳುವ ಇವರು ಅನೇಕ ಸಂದರ್ಭಗಳಲ್ಲಿ ಅವರೊಂದಿಗೆ ಕೈ ಜೋಡಿಸುವುದೂ ಇದೆ. ಜೋಕಟ್ಟೆ ಪಂಚಾಯತ್ ಚುನಾವಣೆಯಲ್ಲಿ ಇವರು ಬಿಜೆಪಿ ಅಭ್ಯರ್ಥಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಜಗಜ್ಜಾಹೀರಾಗಿದೆ.

ಅಂದರೆ ಕೋಮುವಾದಿಗಳು, ಮತೀಯ ಮೂಲಭೂತವಾದಿಗಳು ಕನಸು, ಮನಸು ಒಂದೇ. ಹೀಗಾಗಿ ಇವರು ಎಡ ಶಕ್ತಿಗಳನ್ನು, ಅದರಲ್ಲೂ ಸಿಪಿಐ(ಎಂ)ನ್ನು ವಿರೋಧಿಸುವುದರಲ್ಲಿ ಇಬ್ಬರೂ ಒಂದೇ. ಇವರ ಕೃತ್ಯಗಳು ಜಾತ್ಯಾತೀತ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತವೆ, ಒಂದು ಇನ್ನೊಂದು ಬೆಳೆಯಲು ಸಹಕರಿಸುತ್ತವೆ. ಸಾಮಾಜಿಕ ಬದಲಾವಣೆ ಬಯಸುವ, ಕೋಮುವಾದ, ಮತೀಯ ಮೂಲಭೂತವಾದವನ್ನು ವಿರೋಧಿಸುವವರು ಇದನ್ನು ಅರಿಯುವುದು ಅತ್ಯಗತ್ಯ.

'ಸಂಘ ಪರಿವಾರದಿಂದ ಕರಾವಳಿ ರಿಪಬ್ಲಿಕ್'

'ಮಂಗಳೂರಿನಲ್ಲಿ ಇದೇ ಶನಿವಾರ (ಫೆ. 25) ಸಿಪಿಎಂ ವತಿಯಿಂದ ಸಂಘಟಿಸಲಾಗಿರುವ ಸೌಹಾರ್ದ ರ್‍ಯಾಲಿಯನ್ನು ವಿರೋಧಿಸಲು ದಕ್ಷಿಣ ಕನ್ನಡ ಜಿಲ್ಲಾ ಬಂದ್ಗೆ ಕರೆ ನೀಡಿರುವುದು ಬಿಜೆಪಿ ಹಾಗೂ ಸಂಘ ಪರಿವಾರದ ಮನೋಭಾವಕ್ಕೆ ಸಾಕ್ಷಿಯಾಗಿದೆ. ಕೋಮುಸೌಹಾರ್ದ ಸಮಾವೇಶ ಸುಸೂತ್ರವಾಗಿ ನಡೆಯಬೇಕು. ಹೀಗಾಗಿ ರಾಜ್ಯ ಸರ್ಕಾರ ಸಂಘ ಪರಿವಾರದ ಕೃತ್ಯಗಳನ್ನು ಸಂಪೂರ್ಣವಾಗಿ ತಡೆಯಬೇಕು.

– ಸೌಹಾರ್ದ ಕರ್ನಾಟಕ ವೇದಿಕೆ, ಬೆಂಗಳೂರು

'ಕೋಮು ಸೌಹಾರ್ದದ ಕಾರ್ಯಕ್ರಮಕ್ಕೆ ವಿರೋದ–' ವ್ಯಕ್ತಪಡಿಸುತ್ತಿರುವವರು ಕೋಮು ಸೌಹಾರ್ದದ ದ್ವೇಷಿಗಳು. ಡೊನಾಲ್ಡ್ ಟ್ರಂಪ್ ರೀತಿಯಲ್ಲಿ ದಕ್ಷಿಣ ಕನ್ನಡದಲ್ಲೂ ಕೆಲವ್ಯಕ್ತಿಗಳಿಗೆ ಬಹಿಷ್ಕಾರ ಹಾಕುವ ಹುನ್ನಾರ ನಡೆದಿದೆ. ಅಲ್ಲಿ ಕರಾವಳಿ ರಿಪಬ್ಲಿಕ್ ಸೃಷ್ಟಿಯಾಗಿದೆ. ದಾಂದಲೆ ನಡೆಸುವವರಿಗೆ ಯಾರ ಹೆದರಿಕೆಯೂ ಇಲ್ಲ. ಅಲ್ಲಿ ಪೊಲೀಸರು ಸಹ ನಿಷ್ಕ್ರಿಯರಾಗಿದ್ದಾರೆ. ತಮ್ಮದೇ ನಾಯಕತ್ವದ ವಿರುದ್ಧ ದಾಳಿ ಮಾಡುವ ಆ ಭಾಗದ ಕಾಂಗ್ರೆಸ್ ಮುಖಂಡರೊಬ್ಬರಿಗೆ ಈ ವಿದ್ಯಮಾನಗಳು ಕಾಣುವುದೇ ಇಲ್ಲ'

– ಕೆ.ಮರುಳಸಿದ್ದಪ್ಪ, ವಿಚಾರವಾದಿ

'ಚರ್ಚೆ– ಸಂವಾದದ ಮೂಲಕ ಸಂಯಮದಿಂದ ಪ್ರಜಾಪ್ರಭುತ್ವ ಬೆಳೆಸುವ ಕೆಲಸ ಇಂದಿನ ಅಗತ್ಯ. ಆದರೆ, ಅದರ ಸ್ವಾಸ್ಥ್ಯವನ್ನು ಕೆಡಿಸುವ ಹುನ್ನಾರ ನಡೆದಿದೆ. 'ಧಾರ್ಮಿಕ ಹಾಗೂ ರಾಜಕೀಯ ಭಿನ್ನಾಭಿಪ್ರಾಯಗಳಿಗೆ ಸಂಘರ್ಷದ ಸ್ವರೂಪ ನೀಡಲಾಗುತ್ತಿದ್ದು, ದ್ವೇಷವನ್ನು ಬಿತ್ತಲಾಗುತ್ತಿದೆ. ಇಂತಹ ದುರ್ವರ್ತನೆಗೆ ಪ್ರಜ್ಞಾವಂತರು ಯಾರೂ ಬೆಂಬಲ ನೀಡುಯಿವುದಿಲ್ಲ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮಂಗಳೂರು ಸಮಾವೇಶದಲ್ಲಿ ಪಾಲ್ಗೊಳ್ಳುವುದನ್ನು ವಿರೋಧಿಸುತ್ತಿರುವುದು ವಿಚಿತ್ರವಾಗಿದೆ. ರಾಜ್ಯಕ್ಕೆ ಅವರು ಬಾರದಂತೆ ತಡೆಯಲು ಅವರೇನು ಪಾಕ್ ಪ್ರಾಂತದ ಮುಖ್ಯಮಂತ್ರಿಯೇ?'

– ವೀರಭದ್ರಚನ್ನಮಲ್ಲ ಸ್ವಾಮೀಜಿ, ನಿಡುಮಾಮಿಡಿ ಮಠ

'ಕರಾವಳಿಯ ಕಾಂಗ್ರೆಸ್ ಮುಖಂಡರೆಲ್ಲ ಕಲ್ಲಡ್ಕ ಪ್ರಭಾಕರ ಭಟ್ಟ ಅವರೊಂದಿಗೆ ಸೇರಿಯಿದ್ದಾರೆ. ಹೀಗಾಗಿ ಕೋಮು ಸೌಹಾರ್ದ ಕದಡುವ ಯತ್ನಗಳನ್ನು ತಡೆಯುವ ಗೋಜಿಗೆ ಅವರು ಹೋಗುತ್ತಿಲ್ಲ'

ಪ್ರೊ.ಎನ್.ವಿ. ನರಸಿಂಹಯ್ಯ, ನಿರ್ದೇಶಕ – ದೇವರಾಜ ಅರಸು ಸಂಶೋಧನಾ ಸಂಸ್ಥೆ

ಕುಂದಾಪುರ : ಮನೆ, ನಿವೇಶನ, 94 ಸಿ ಅರ್ಜಿದಾರರಿಗೆ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಕೃಷಿ ಕೂಲಿಕಾರರ ಸಮಾವೇಶಗಳು

ವರದಿ : ವೆಂಕಟೇಶ ಕೋಣಿ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (AIAWU) ಸಂಘಕ್ಕೆ ಸಂಯೋಜಿಸಲ್ಪಟ್ಟ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮನೆ ನಿವೇಶನದ ರಹಿತರು, ಸರ್ಕಾರಿ ಜಾಗದಲ್ಲಿ ವಾಸದ ಮನೆ ಕಟ್ಟಿಕೊಂಡು ವಾಸವಾಗಿರುವ ಬಡಕೃಷಿ ಕೂಲಿಕಾರ 94ಸಿ ಅರ್ಜಿದಾರರು ಭೂಮಿ ಹಕ್ಕುಪತ್ರಕ್ಕಾಗಿ ಸರ್ಕಾರವನ್ನು ಒತ್ತಾಯಿಸಲು ಕುಂದಾಪುರ ತಾಲೂಕಿನಾದ್ಯಂತ ಗ್ರಾಮಾಂತರ ಪ್ರದೇಶದಲ್ಲಿ ಫೆಬ್ರುವರಿ 21ರಿಂದ ಮಾರ್ಚ್ 18ರ ವರೆಗೆ ಸಮಾವೇಶವನ್ನು ಏರ್ಪಡಿಸಲಾಗಿದೆ. ನಿವೇಶನ ರಹಿತರು, 94ಸಿ ಅರ್ಜಿದಾರರು ಗ್ರಾಮಾಂತರ ಪ್ರದೇಶದ ಸಭೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಎರಡು ಸಮಾವೇಶಗಳು ಕೋಟೇಶ್ವರ, ತೆಕ್ಕಟ್ಟೆ (ಫೆ. 21) ಮತ್ತು ಬೀಜಾಡಿ ಗೋಪಾಡಿ (ಫೆ.22) ಗಳಲ್ಲಿ ಇಗಾಗಲೇ ನಡೆದಿವೆ. ಹಂಗಳೂರು (01 ಮಾರ್ಚ್), ಅಂಪಾರು (02 ಮಾರ್ಚ್), ಕಸಬಾ, ಕೋಡಿ, ಬಸ್ರೂರು, ಮೂಡಕೇರಿ (03 ಮಾರ್ಚ್), ಆನಗಳ್ಳಿ, ಹೇರಿಕುದ್ರು, ಕೋಣಿ, ಬಳ್ಕೂರು (04 ಮಾರ್ಚ್), ಶಿರೂರು, ಬೈಂದೂರು (11 ಮಾರ್ಚ್), ಉಪ್ಪುಂದ, ಕಾಸನಾಡಿ, ಗೋಳಿಹೊಳೆ (12 ಮಾರ್ಚ್), ಗುಡ್ಡೆಯಂಗಡಿ, ಆಲೂರು, ಹಕ್ಲಾಡಿ ಕುಂದಬಾರಂದಾಡಿ (13 ಮಾರ್ಚ್), ತಲ್ಲೂರು, ಹಟ್ಟಿಯಂಗಡಿ, ಉಪ್ಪಿನಕುದ್ರು, ಕನ್ಯಾನ, ಕಂಚನೂರು, (14 ಮಾರ್ಚ್), ಗುಲ್ವಾಡಿ ಕರ್ಕುಂಜೆ, ಗುಜ್ಜಾಡಿ (15 ಮಾರ್ಚ್), ಮರವಂತೆ, ನಾಗೂರು. (16 ಮಾರ್ಚ್), ಹೆಮ್ಮಾಡಿ, ನಾವುಂದ (17 ಮಾರ್ಚ್), ಬೈಂದೂರು, ತ್ರಾಸಿ (18 ಮಾರ್ಚ್) ಗ್ರಾಮಗಳಲ್ಲಿ ನಡೆಯಲಿದೆ.

ದೇಶದಲ್ಲಿ 2 ಕೋಟಿ ಕುಟುಂಬಕ್ಕೆ ಗ್ರಾಮೀಣ ಭಾರತದಲ್ಲಿ ಸ್ವಂತ ಮನೆ ಇಲ್ಲದವರಿದ್ದಾರೆ. ಶೇಕಡಾ 30% ಗ್ರಾಮೀಣ ನಿವೇಶನ ರಹಿತರಿದ್ದಾರೆ. ಗ್ರಾಮೀಣ ಪ್ರದೇಶದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚಿಗೆ ಮನೆ ಇಲ್ಲದವರು, ಸುಮಾರು 5 ಕೋಟಿ ಜನರಿಗೆ ಸ್ವಂತ ಭೂಮಿ ಇಲ್ಲ, ತುಂಡು ಭೂಮಿ ಇಲ್ಲ, ವಸತಿ ರಹಿತರ ಗೋಳು ಕೇಳುವವರಿಲ್ಲ. ಭೂಮಿ ಸದ್ಬಳಕೆಗೆ ಸಮಗ್ರ ವಸತಿ ನೀತಿಯೊಂದು ಅಗತ್ಯವಿದೆ. ಮನೆ ನಿವೇಶನ ರಹಿತರ ಬೇಡಿಕೆ ಈಡೇರಿಸುವುದಕ್ಕೆ ಹೋರಾಟ ತೀವ್ರಗೊಳಿಸಿ– ಕುಂದಾಪುರದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟರ ಮನೆ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು. ತಾಲೂಕಿನ ಎಲ್ಲಾ ನಿವೇಶನ ರಹಿತ ಅರ್ಜಿದಾರರು ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು ಎಂದು ಕೋಟೇಶ್ವರ, ತೆಕ್ಕಟ್ಟೆ, ಬೀಜಾಡಿ/ಗೋಪಾಡಿ ಮತ್ತು ತೆಕ್ಕಟ್ಟೆ ಸಮಾವೇಶದಲ್ಲಿ ಕರೆ ನೀಡಲಾಯಿತು. ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಮುಂತಾದವರು ಸಮಾವೇಶ ಉದ್ದೇಶಿಸಿ ಮಾತನಾಡಿದರು.



ರೇಗಾ ಜಾರಿಗಾಗಿ ಖಜೂರಿ, ಕಡಗಂಚಿಗಳಲ್ಲಿ ಸಮಾವೇಶ

ವರದಿ: ಕೆ. ನೀಲಾ



ಫೆಬ್ರುವರಿ 21 ರಂದು ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವಂತೆ ಆಗ್ರಹಿಸಿ ಆಳಂದ ತಾಲ್ಲೂಕಿನ ಖಜೂರಿಯಲ್ಲಿ ಐದು ಗ್ರಾಮ ಪಂಚಾಯತ ವ್ಯಾಪ್ತಿಯ ಇಪ್ಪತ್ತೊಂದು ಗ್ರಾಮಗಳಿಂದ ಕೃಷಿ ಕೂಲಿಕಾರರು ಮತ್ತು ರೈತರು ಸಮಾವೇಶಗೊಂಡಿದ್ದರು. ತಾಲ್ಲೂಕಿನ ಗಡಿ ಪ್ರದೇಶದಲ್ಲಿರುವ ಹಳ್ಳಿಗಳಲ್ಲಿ ಜನರು ಕೆಲಸಕ್ಕಾಗಿ ವಲಸೆ ಹೋಗುವ ಪ್ರಮಾಣ ಪ್ರತಿ ವರ್ಷ ಹೆಚ್ಚಿರುತ್ತದೆ. ಈ ವರ್ಷ ವಲಸೆಯನ್ನು ತಡೆಗಟ್ಟುವ ದಿಕ್ಕಿನಲ್ಲಿ ಜಿಲ್ಲಾ ಆಡಳಿತವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಲಾಯಿತು. ಈಗಾಗಲೇ ಹೊಲಗಳಲ್ಲಿನ ಕೃಷಿ ಕೆಲಸಗಳು ಮುಗಿದಿವೆ. ಬೇಸಿಗೆಯು ಕಾಲಿಡುತ್ತಿದೆ. ಒಂದು ವರ್ಷದಲ್ಲಿ ಬರಗಾಲದ ಘೋಷಣೆಯ ಹಿನ್ನೆಲೆಯಲ್ಲಿ ನೂರ ಐವತ್ತು ದಿನಗಳನ್ನು ಒಂದು ಕುಟುಂಬಕ್ಕೆ ಉದ್ಯೋಗ ಖಾತ್ರಿಯ ಕೆಲಸದ ಖಾತ್ರಿ ಇರುವುದರಿಂದ ಎಲ್ಲ ಕುಟುಂಬಗಳು ಇದರ ಪ್ರಯೋಜನ ಪಡೆಯುವಂತೆ ಗ್ರಾಮ ಪಂಚಾಯತ್ ಕಾಳಜಿಯಿಂದ ಕಾರ್ಯತತ್ಪರವಾಗಬೇಕೆಂದು ಒತ್ತಾಯಿಸಲಾಯಿತು.

ಸಮಾವೇಶವನ್ನುದ್ದೇಶಿಸಿ ಡಾ.ಪ್ರಭು ಖಾನಾಪುರೆಯವರು ಮಾತನಾಡುತ್ತ 'ಈ ಬಾರಿ ಉದ್ಯೋಗ ಖಾತ್ರಿಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿ ಮಾಡುವಲ್ಲಿ ಪಂಚಾಯತ್ ಮುತುವರ್ಜಿ ವಹಿಸಬೇಕು. ಇನ್ನು ಅನೇಕ ಗ್ರಾಮಗಳಲ್ಲಿ ಉದ್ಯೋಗ ಖಾತ್ರಿಯ ಕುರಿತು ಜನರಿಗೆ ಸರಿಯಾದ ಮಾಹಿತಿ ಇಲ್ಲದ ಕಾರಣವಾಗಿ ನಿರುದ್ಯೋಗ ಅನುಭವಿಸುತ್ತಿದ್ದಾರೆ. ಹೀಗಾಗಿ ನಗರದಲ್ಲಿರುವ ಅಕ್ಷರವಂತ ಜನರು ಗ್ರಾಮಗಳಿಗೆ ಬಂದು ರೇಗಾ ಬಗ್ಗೆ ಜಾಗೃತಿಯಾಗಲು ಮತ್ತು ಇದರ ಪ್ರಯೋಜನ ಪಡೆಯಲು ನೆರವಾಗಬೇಕೆಂದು' ಕರೆ ನೀಡಿದರು.

ಸಮಾವೇಶದಲ್ಲಿ ಮಾತನಾಡಿದ ನೀಲಾ ಕೆ 'ರೇಗಾ ಅಭಿಯಾನವು ಈ ವರ್ಷ ಮತ್ತೆ ಆರಂಭಿಸಲಾಗಿದೆ. ರೇಗಾದಲ್ಲಿ ಕೆಲಸ ಮಾಡಿದವರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಬೇಕು. ಹಾಗೂ ಅಸಂಘಟಿತ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳನ್ನು ಇವರಿಗೆ ಒದಗಿಸಬೇಕು. ದಿನದ ಕೂಲಿಯನ್ನು ರೂ.400ಕ್ಕೆ ಹೆಚ್ಚಿಸಬೇಕು. ಹಾಗೂ ರೇಗಾ ಕೆಲಸ ಆರಂಭಿಸಿದ ಕಡೆಯಲ್ಲಿ ಕಾಯ್ದೆ ಪ್ರಕಾರ ಇರುವ ಎಲ್ಲ ಸೌಲಭ್ಯಗಳನ್ನು ಚಾಚೂ ತಪ್ಪದೆ ಜಾರಿ ಮಾಡಬೇಕು. ಗಡಿ ಪ್ರದೇಶದ ಗ್ರಾಮಗಳಲ್ಲಿ ಹಾಗೂ ಇನ್ನೂ ಅನೇಕ ಗ್ರಾಮಗಳಲ್ಲಿ ರೇಗಾ ಕುರಿತು ಜಾಗೃತಿಯ ಕೊರತೆ ಇದೆ. ಇದನ್ನು ಪೂರೈಸುವ ದಿಕ್ಕಿನಲ್ಲಿ ಆಡಳಿತವು ಸೂಕ್ತ ಯೋಜನೆ ರೂಪಿಸಬೇಕು. ಹಾಗೂ ಜನತೆಯನ್ನು ಇದನ್ನು ತೊಡಗಿಸಿದಲ್ಲಿ ಇದೊಂದು ಜನಾಂದೋಲನವಾಗಿ ರೂಪುಗೊಳ್ಳುವುದು. ಜನತೆಗೆ ನೆರವಾಗುವ ಯಾವುದೇ ಕಾಯ್ದೆಯ ಜಾರಿಯಲ್ಲಿ ಜನರನ್ನು ಒಳಗೊಳಿಸುವ ಮೂಲಕವೇ ಅದರ ಯಶಸ್ಸು ಸಾಧ್ಯವಾಗುವುದು. ಕಳೆದ ವರ್ಷ ಕೆರೆಗಳನ್ನು ಕೇಂದ್ರೀಕರಿಸಿ ಸಂಘಟನೆಯು ರೇಗಾ ಜಾರಿಗಾಗಿ ಕೆಲಸ ಮಾಡಿದ ಪರಿಣಾಮವಾಗಿ ನಂತರದಲ್ಲಿ ಬಂದ ಮಳೆಯಿಂದಾಗಿ ಕೆರೆಗಳಲ್ಲಿ ನೀರು ನಿಲ್ಲಲು ಸಾಧ್ಯವಾಗಿದೆ. ಜಿಲ್ಲೆಯ ಎಲ್ಲ ಗ್ರಾಮಗಳಲ್ಲಿ ಈ ದಿಕ್ಕಿನಲ್ಲಿ ರೇಗಾ ಜಾರಿ ಮಾಡಿದರೆ ನೀರಿನ ಹಾಹಾಕಾರ ತಗ್ಗಿಸಬಹುದು. ಮತ್ತು ಜನರ ಕೈಗೆ ಕೆಲಸ ದೊರಕಿಸಬಹುದು. ಕೇಂದ್ರ ಸರಕಾರವು ಈ ಬಾರಿ ಬಜೆಟ್ಟಿನಲ್ಲಿ ರೇಗಾ ಜಾರಿಗಾಗಿ ಮೀಸಲಿಟ್ಟ ಮೊತ್ತವು ಅತ್ಯಂತ ಕಡಿಮೆಯಾಗಿದೆ. ಪ್ರತಿ ವರ್ಷ ಕೆಲಸಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ಪೂರ್ತಿ ಪರಿಗಣಿಸಿ ಕೆಲಸ ಒದಗಿಸಿದಲ್ಲಿ ಶೇ.75ರಷ್ಟು ಹಣದ ಕೊರತೆಯಾಗುವುದು. ಕೆಲಸ ನಿರಾಕರಿಸುವ ಧೋರಣೆಯಿಂದ ಬಜೆಟ್ಟಿನಲ್ಲಿ ಕಡಿಮೆ ಹಣ ಇಟ್ಟಿರುವುದು ಜನವಿರೋಧಿ ಕ್ರಮವಾಗಿದೆ." ಎಂದು ಹೇಳಿದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಕೋರಣೇಶ್ವರ ಸ್ವಾಮಿಗಳು, ನಂದಾದೇವಿ ಮಂಗೊಂಡಿ, ಜನವಾದಿ ಮಹಿಳಾ ಸಂಘಟನೆಯ ಅಶ್ವಿನಿ ಮದನಕರ್ ಇವರುಗಳೂ ಮಾತನಾಡಿದರು.

ಸುಮಾರು 21 ಗ್ರಾಮಗಳಿಂದ ರೇಗಾ ಕೆಲಸಕ್ಕಾಗಿ ಬಂದ ಕಾರ್ಮಿಕರು ಅರ್ಜಿಗಳನ್ನು ಸಲ್ಲಿಸಿದರು. ಖಜೂರಿ ಗ್ರಾಮ ಪಂಚಾಯತ್‌ನ ಪಿಡಿಓ ಭಗವಂತ್, ಅಳಂಗದ ಪಿಡಿಓ ಮಾರುತಿ, ತಡೋಣ ಪಿಡಿಓ ಪ್ರೀತಿ, ರುದ್ರವಾಡಿಯ ಪಿಡಿಓ, ಹೊದಲೂರು ಪಿಡಿಓ ಹಾಗೂ ತಾಲ್ಲೂಕಿನ ರೇಗಾ ಕೋಆರ್ಡಿನೇಟರ್ ಕೃಷ್ಣ ಇವರು ಜನತೆಯಿಂದ ಸಮಸ್ಯೆಗಳನ್ನು ಆಲಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಮತ್ತು ಫಾರಂ ನಂ.6 ಸಲ್ಲಿಸಿದವರಿಗೆ ಕೂಡಲೇ ಕೆಲಸ ಆರಂಭಿಸುವುದಾಗಿ ಹೇಳಿದರು. ಅನೇಕ ಜನರು ಫಾರಂ 1 ಸಲ್ಲಿಸಿದರು. ಅವರಿಗೆ ಜಾಬ್ ಕಾರ್ಡು ಕೊಡುವುದಾಗಿ ಹೇಳಿದರು. ರೇಗಾ ಕೆಲಸಕ್ಕಾಗಿ ಅಲ್ಲಲ್ಲಿ ಹಣದ ವ್ಯವಹಾರ ನಡೆಯುತ್ತಿರುವುದನ್ನು ತಡಗಟ್ಟುವುದಾಗಿ ಹೇಳಿದರು. ತಡೋಣ ಗ್ರಾಮದ ಐವತ್ತರಷ್ಟು ಕೂಲಿಕಾರ್ಮಿಕರ ಕೂಲಿಯು ಬಾಕಿ ಇರುವುದನ್ನು ಕೂಡಲೇ ಪರಿಹರಿಸುವುದಾಗಿ

ಪುಟ 15 ಕ್ಕೆ



ಈ ವಾರ ಚರಿತ್ರೆಯಲ್ಲಿ

27 ಫೆಬ್ರುವರಿ 2002

ಗೋಧ್ರಾ ರೈಲಿಗೆ ಬೆಂಕಿ

ಈ ದಿನ ಮುಂಜಾನೆ ಸಾಬರಮತಿ ಎಕ್ಸ್ ಪ್ರೆಸ್ ರೈಲಿನ ಬೋಗಿಯೊಂದರಲ್ಲಿ ಬೆಂಕಿ ಬಿದ್ದು 59 ಜನ ಒಳಗೇನೇ ಸುಟ್ಟು ಹೋದರು. ಇವರಲ್ಲಿ ಹೆಚ್ಚಿನವರು ಬಾಬ್ರಿ ಮಸೀದಿಯ ನಾಶದ ನಂತರ ಗುಜರಾತಿಗೆ ಹಿಂದಿರುಗುತ್ತಿದ್ದ ಕರಸೇವಕರು ಎಂದು ಹೇಳಲಾಗಿದೆ. ಈ ದುರಂತ ನಿಗೂಢವಾಗಿದ್ದು ಇದರ ಕಾರಣಗಳ ಬಗ್ಗೆ ಸರ್ವಸಮ್ಮತ ನಿಲುವು ಇಲ್ಲ. ಆದರೆ ಸುಮಾರು 2 ಸಾವಿರ (ಬಹುಪಾಲು ಮುಸ್ಲಿಮ್) ಜನರನ್ನು ಬಲಿ ತೆಗೆದುಕೊಂಡ ಹಾಗೂ ಸಾವಿರಾರು ಮುಸ್ಲಿಮರು ಗಾಯಗೊಂಡವರೂ ನಿರಾಶ್ರಿತರನ್ನಾಗಿಸಿದ, ಕುಖ್ಯಾತ ಗುಜರಾತ್ ದಂಗೆಗಳಿಗೆ ಇದು ಕಾರಣ(ಅಥವಾ ನೆಪವೋ) ಆಯಿತು. ಈ ದುರಂತಕ್ಕೆ ಮೂರು ತನಿಖಾ ಆಯೋಗಗಳು ಬೇರೆ ಬೇರೆ ಕಾರಣಗಳನ್ನು ಕೊಟ್ಟಿವೆ. ಗುಜರಾತ್ ಸರಕಾರ ನೇಮಿಸಿದ ತನಿಖಾ ಕಮಿಶನ್ ಒಂದು ದೊಡ್ಡ ಗುಂಪು ರೈಲು ಬೋಗಿಗೆ ಬೆಂಕಿ ಕೊಟ್ಟಿತು ಎಂದು ಹೇಳಿತು. ಈ ಕಮಿಶನಿನ ಮುಖ್ಯಸ್ಥ ನ್ಯಾ. ನಾನಾವಟಿ ಅವರ ನಿಷ್ಪಕ್ಷಪಾತತೆ ಮತ್ತು ದೀರ್ಘ ವಿಳಂಬದ ಬಗ್ಗೆ ಸಂಶಯ ವ್ಯಕ್ತಪಡಿಸಲಾಗಿದೆ.

31 ಜನರಿಗೆ ಈ ಅಪರಾಧಕ್ಕೆ ಶಿಕ್ಷೆ ವಿಧಿಸಲಾಗಿದೆ.



ರೈಲು ಮಂತ್ರಿ ನೇಮಿಸಿದ ತನಿಖಾ ಕಮಿಶನ್ ಇದೊಂದು 'ಅಫಘಾತ'? ಎಂದು ಹೇಳಿತು. ಈ ಕಮಿಶನಿನ ನೇಮಕಾತಿ ಸಂವಿಧಾನ–ಬದ್ಧ ಅಲ್ಲ ಎಂದು ಹೇಳಲಾಯಿತು. ಇದು ಗುಜರಾತ್ ದಂಗೆ ನಡೆಸಲು ನೆಪವಾಗಲು ಪೂರ್ವ–ಯೋಜಿತ ಕುಕೃತ್ಯವೆಂದು ಹಲವರ ನಂಬಿಕೆ.

ಗೂಂಡಾಗಿರಿಗೆ ಹೆದರುವುದಿಲ್ಲ, ಐಕ್ಯತಾ ರ್‍ಯಾಲಿ ನಡೆಸಿಯೇ ಸಿದ್ದ: ಎಚ್. ನರಸಿಂಹ



ಕುಂದಾಪುರ: ಗೋಸಾಗಾಟ, ವಸ್ತ್ರ ಸಂಹಿತೆ, ಧರ್ಮ ರಕ್ಷಣೆ ಮುಂತಾದವುಗಳ ಬಗ್ಗೆ ಯುವಕರಲ್ಲಿ ಕೋಮು ವಿಷಬೀಜ ಬಿತ್ತಿ ಅವರನ್ನು ದಾರಿ ತಪ್ಪಿಸುವ ಕೆಲಸಗಳು ನಡೆಯುತ್ತಿವೆ. ಸಂಘಪರಿವಾರಕ್ಕೆ ಸೌಹಾರ್ದದ ಅಗತ್ಯ ಇಲ್ಲ. ಹೀಗಾಗಿ ಅನೇಕ ಬಡ ಯುವಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ, ಜೈಲು ಸೇರುತ್ತಿದ್ದಾರೆ. ಕರಾವಳಿ ಜಿಲ್ಲೆಯಲ್ಲಿ ನಡೆಯುತ್ತಿರುವ ಕೋಮುವಾದವನ್ನು ಮಟ್ಟ ಹಾಕುವ ಉದ್ದೇಶದಿಂದ ಮಂಗಳೂರಿನಲ್ಲಿ ಸಿಪಿಐಎಂ ನೇತೃತ್ವದಲ್ಲಿ ಸೌಹಾರ್ದ ಐಕ್ಯತಾ ರ್‍ಯಾಲಿ ನಡೆಯಲಿದೆ. ಈ ರ್‍ಯಾಲಿ ನಡೆಯದ ಹಾಗೆ ಬಿಜೆಪಿ, ಸಂಘಪರಿವಾರ ತೆರೆಮರೆಯಲ್ಲಿ ಸಾಕಷ್ಟು ಕೆಲಸ ಮಾಡುತ್ತಿವೆ. ಸಂಘಪರಿವಾರದ ಗೂಂಡಾಗಿರಿಗೆ ನಾವು ಹೆದರುವುದಿಲ್ಲ. ಜೀವದ ಹಂಗು ತೊರೆದು ನಮ್ಮ ಕಾರ್ಯಕರ್ತರು ಈ ರ್‍ಯಾಲಿಯನ್ನು ಯಶಸ್ವಿಗೊಳಿಸಲಿದ್ದಾರೆ ಎಂದು ಸಿಪಿಐಎಂ ಕುಂದಾಪುರ ವಲಯ ಕಾರ್ಯದರ್ಶಿ ಎಚ್. ನರಸಿಂಹ ಗುಡುಗಿದರು.

ಐಕ್ಯತಾ ರ್‍ಯಾಲಿ ವಿರೋಧಿಸಿ ಸಂಘಪರಿವಾರ ಫೆ. 25 ರಂದು ಹರತಾಳಕ್ಕೆ ಕರೆಕೊಟ್ಟಿದ್ದು ಹಾಗೂ ಸಿಪಿಐ(ಎಂ) ಉಳ್ಳಾಲ ಕಚೇರಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದನ್ನು ಖಂಡಿಸಿ ಕುಂದಾಪುರ ಹಾಗೂ ಬೈಂದೂರು ವಲಯ ಸಮಿತಿ ಕುಂದಾಪುರದ ಶಾಸ್ತ್ರಿ ವೃತ್ತದಲ್ಲಿ ಆಯೋಜಿಸಿದ್ದ ಖಂಡನಾ ಸಭೆಯಲ್ಲಿ ಅವರು ಸಂಘಪರಿವಾರದ ವಿರುದ್ಧ ಹರಿಹಾಯ್ದರು.

ಪ್ರಜಾಸತ್ತಾತ್ಮಕವಾಗಿ ಚುನಾಯಿತರಾಗಿ ಇಂದು ಕೇರಳ ರಾಜ್ಯದ ಮುಖ್ಯಮಂತ್ರಿಯಾಗಿರುವ ಪಿಣರಾಯಿ ವಿಜಯನ್ ಬರುವುದನ್ನು ಸಂಘಪರಿವಾರ ವಿರೋಧಿಸುತ್ತಿದೆ. ಪಿಣರಾಯಿ ಪಾಕಿಸ್ತಾನದಿಂದ ಬರುತ್ತಿಲ್ಲ. ಪಕ್ಕದ ರಾಜ್ಯದಿಂದ ಬರುತ್ತಿದ್ದಾರೆಂಬುವುದು ಪರಿವಾರದ ಮುಖಂಡರುಗಳು ಗಮನಿಸಬೇಕು. ಓರ್ವ ಸರಳ ಸಜ್ಜನ ನಾಯಕ, ಕೇರಳದಲ್ಲಿ ಅಧಿಕಾರಕ್ಕೆ ಬಂದ ಕೆಲವೇ ಸಮಯಗಳಲ್ಲಿ ಅನೇಕ ಬದಲಾವಣೆ ತಂದ ಪಿಣರಾಯಿ ವಿಜಯನ್ ಮಂಗಳೂರಿಗೆ ಆಗಮಿಸುವುದು ಬೇಡ ಎಂದು ಹೇಳುವ ಇವರಿಗೆ ಅಧಿಕಾರ ಕೊಟ್ಟವರು ಯಾರು ಎಂದು ಪ್ರಶ್ನಿಸಿದ ಎಚ್. ನರಸಿಂಹ, ಮುಖಕ್ಕೆ ಮುಖ ಕೊಟ್ಟು ನಮ್ಮನ್ನು ಎದುರಿಸಲಾಗದವರು ಹೇಡಿಗಳಾಗಿ ತಡರಾತ್ರಿ ಪಕ್ಷದ ಕಚೇರಿಯ ಬೀಗ ಒಡೆದು ಬೆಂಕಿ ಇಕ್ಕಿ ಬ್ಯಾನರ್, ಕರಪತ್ರಗಳನ್ನೆಲ್ಲಾ ಸುಟ್ಟು ಹಾಕಿದ್ದಾರೆ. ಆದರೆ ನಮ್ಮ ಕಾರ್ಯಕರ್ತರು ಮತ್ತೆ ಹಗಲು ರಾತ್ರಿ ದುಡಿದು ಐತಿಹಾಸಿಕ ರ್‍ಯಾಲಿ ನಡೆಯಲು ಶ್ರಮಿಸುತ್ತಾರೆ. ಈಗಾಗಲೇ ಅನೇಕ ಪ್ರಗತಿಪರ ಲೇಖಕರು ಸಂಘಟನೆಗಳು ನಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಬೆಂಕಿ ಹಚ್ಚಿ ನಮ್ಮ ಮೇಲೆ ದಾಳಿ ನಡೆಸಿ ಉದ್ರೇಕಕಾರಿ ವಾತಾವರಣ ನಿರ್ಮಾಣ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಪರಿವಾರದ ಗೂಂಡಾ ನಾಯಕರುಗಳನ್ನು ಬಂಧಿಸಿ ಅವರನ್ನು ಗಡಿಪಾರು ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸಭೆಯನ್ನುದ್ದೇಶಿಸಿ ಸಿಪಿಐಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಶಂಕರ್, ಸಿಪಿಐಎಂ ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು.

ರಾಜೇಶ ವಡೇರಹೋಬಳಿ ಪ್ರಸ್ತಾಪಿಸಿ ಸ್ವಾಗತಿಸಿದರು. ರವಿ ವಿ.ಎಂ ಧನ್ಯವಾದವಿತ್ತರು. ಸಿಪಿಐಎಂನ ದಾಸ ಭಂಡಾರಿ, ಅಶೋಕ್ ಹಟ್ಟಿಯಂಗಡಿ, ಸಂತೋಷ ಹೆಮ್ಮಾಡಿ, ರಾಜಾ ಬಿಟಿಆರ್, ಗಣೇಶ್ ಕಲ್ಲಾಗರ ಮಂಜುನಾಥ ಶೋಗನ್ ಮುಂತಾದವರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಡಿವೈಎಫ್ಐ ಬೆಟ್ಟಾಗರ ಕಚೇರಿಯಿಂದ ಹೊರಡಿದ ಬೈಕ್ ರ್‍ಯಾಲಿಗೆ ಕೆ.ಶಂಕರ್ ಚಾಲನೆ ನೀಡಿದರು. ಬೈಕ್ ರ್‍ಯಾಲಿ ಕುಂದಾಪುರ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಶಾಸ್ತ್ರಿ ಸರ್ಕಲ್ ಬಳಿ ಸಮಾಪ್ತಿಗೊಂಡಿತು. ಇದೇ ಸಂದರ್ಭದಲ್ಲಿ ಕಾರ್ಯಕರ್ತರು 25 ರಂದು ನಡೆಯುವ ಐಕ್ಯತಾ ರ್‍ಯಾಲಿಯ ಪ್ರಚಾರದ ಕರ ಪತ್ರಗಳನ್ನು ಸಾರ್ವಜನಿಕರಿಗೆ ಹಂಚಿ ಪ್ರಚಾರಪಡಿಸಿದರು.

ವರದಿ: ಶ್ರೀಕಾಂತ ಹೆಮ್ಮಾಡಿ



ಸಿಪಿಐ(ಎಂ) ಕಛೇರಿಗೆ ಬೆಂಕಿ ಹಚ್ಚಿದ ಸಂಘಪರಿವಾರ– ಉ.ಕ. ಜಿಲ್ಲಾ ಸಮಿತಿ ಖಂಡನೆ

ಇಂದು ಬೆಳಿಗ್ಗೆ ಬಂದ ಆಘಾತಕಾರಿ ಸುದ್ದಿಯಂತೆ ಮಂಗಳೂರಿನ ಉಲ್ಲಾಳದಲ್ಲಿರುವ ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ) ಸಿಪಿಐ(ಎಂ) ಸ್ಥಳೀಯ ಸಮಿತಿ ಕಛೇರಿಗೆ ಸಂಘ ಪರಿವಾರದ ಕೋಮುವಾದಿ ಕಿಡಿಗೇಡಿ ಗೂಂಡಾಗಳು ಬೆಂಕಿ ಹಚ್ಚಿದ ವಿಧ್ವಂಸಕ ಘಟನೆ ನಡೆದಿದೆ. ಮಂಗಳೂರಿನಲ್ಲಿ ಫೆ. 25ರಂದು ಜರುಗುವ ಸೌಹಾರ್ದತಾ ರ್‍ಯಾಲಿ ಸಭೆಗೆ ಅಡ್ಡಿಪಡಿಸಲು, ಕೇರಳದ ಮುಖ್ಯಮಂತ್ರಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರು ಭಾರತದ ದುಡಿಯುವ ವರ್ಗದ ನಾಯಕರಲ್ಲಿ ಒಬ್ಬರಾದ ಮಾನ್ಯ ಪಿಣರಾಯಿ ವಿಜಯನ್‌ರವರು ಭಾಗವಹಿಸುವದನ್ನು ತಡೆಯಲು ಗಲಾಟೆ ಹುಟ್ಟಿಸಿ ಅಪಪ್ರಚಾರ ನಡೆಸಿ, ಶಾಂತಿ ಸುವ್ಯವಸ್ಥೆ ಕದಡಲು ಸಂಘಪರಿವಾರದವರು ಕರಾವಳಿ ಪ್ರದೇಶವನ್ನು ತಮ್ಮ ಆಡುಂಬೋಲವಾಗಿಸಿಕೊಂಡಿದ್ದಾರೆ. ಇಡೀ ದೇಶದಲ್ಲಿ ಎಂದಿಗೂ ಕಂಡರಿಯದ ರೀತಿಯಲ್ಲಿ ಅಶಾಂತಿ ಸೃಷ್ಟಿಸುವ ಆರ್.ಎಸ್.ಎಸ್ ಭಜರಂಗದಳ ವಿಶ್ವಹಿಂದೂ ಪರಿಷತ್ ಎಬಿವಿಪಿ ಹಿಂದೂ ಸೇನೆ ಇನ್ನೂ ವಿವಿಧ ಹೆಸರಿನಲ್ಲಿರುವ ದ್ವೇಷಪೂರಿತ ವಿಚಾರಗಳ ಮತಾಂಧ ಸಂಘಟನೆಗಳು ಈ ಕೃತ್ಯ ನಡೆಸಿದ್ದು, ಈ ಘಟನೆಯನ್ನು ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ) ಉತ್ತರ ಕನ್ನಡ ಜಿಲ್ಲಾ ಸಮಿತಿ ಬಲವಾಗಿ ಖಂಡಿಸುತ್ತದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಅದರ ಗೃಹ ಇಲಾಖೆ ಅದರ ಪೋಲಿಸರು ಇಂಥ ಕೋಮುವಾದಿ ವಿಧ್ವಂಸಕ ಕೃತ್ಯಗಳನ್ನು ನಿಗ್ರಹಿಸಿ, ಅಂಥ ಸಮಾಜ ಘಾತುಕ ಶಕ್ತಿಗಳನ್ನು ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಲು ಮತ್ತು ರಾಜ್ಯದ ಎಲ್ಲೆಡೆ ಈ ಗೂಂಡಾ ಕಿಡಿಗೇಡಿಗಳು ಇಂಥ ಅಮಾನವೀಯ ಕೃತ್ಯ ನಡೆಸುವ ಸಂಭವವಿದ್ದು ಎಲ್ಲೆಡೆ ರಕ್ಷಣೆ ನೀಡಲು ಸಿಪಿಐ(ಎಂ) ಒತ್ತಾಯಿಸುತ್ತದೆ.

ಈ ಬೆಂಕಿ ಹಚ್ಚುವ ಮತ್ತು ಕ್ರಿಮಿನಲ್ ಕ್ರಿಯೆಗೆ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಬಿಜೆಪಿ ಸಂಸದರಾದ ಅನಂತಕುಮಾರ ಹೆಗಡೆ ಮತ್ತು ನಳಿನಕುಮಾರ್ ಕಟಿಲರ ಪ್ರಚೋದನಾತ್ಮಕ ಹೇಳಿಕೆಗಳೂ ಕೆಲಸ ಮಾಡಿವೆ. ಇಡೀ ಕರಾವಳಿಯ ದುಡಿಯುವ ಜನತೆಯನ್ನು ಕೋಮು ಜಾತಿ ಧರ್ಮದ ಆಧಾರದಲ್ಲಿ ಒಡೆಯುವ ತಮ್ಮ ಪ್ರಯೋಗಶಾಲೆಯನ್ನಾಗಿ ಮಾಡಿ ಜಹಗೀರು ಪಡೆದಂತೆ ವರ್ತಿಸುತ್ತಿದ್ದಾರೆ.



ಕರಾವಳಿಯಲ್ಲಿ ಒಂದೇ ಅಲ್ಲ ರಾಜ್ಯದೆಲ್ಲೆಡೆ ಬಿಜೆಪಿ ಮತ್ತು ಸಂಘಪರಿವಾರದವರು ತಮ್ಮ ಕೋಮುವಾದಿ ವಿಚ್ಛಿದ್ರಕಾರಿ ಅಜೆಂಡಾವನ್ನು ಇಟ್ಟುಕೊಂಡು ಜನರನ್ನು ಒಡೆಯುತ್ತಿವೆ. ತಮಗೆ ಬೇಡವಾದವರನ್ನು ಕೊಲ್ಲುವಲ್ಲಿಯೂ, ಹಿಂಸಿಸುವಲ್ಲಿಯೂ ಈ ಸಂಘಟನೆಗಳ ಕಾರ್ಯಕರ್ತರು ಮುಂಚೂಣಿಯಲ್ಲಿದ್ದುದು ವರದಿಯಾಗುತ್ತಲೇ ಇದೆ. ವಿನಾಯಕ ಬಾಳಿಗಾ ಮಂಗಳೂರು, ಪ್ರವೀಣ ಪೂಜಾರಿ ಉಡುಪಿ, ಕೃಷ್ಣಯ್ಯ ಪಾಟಾಳಿ ಕುಂದಾಪುರ, ಪ್ರತಾಪ್ ಪೂಜಾರಿ ಮರೋಳಿ, ಭಾಸ್ಕರ ಕುಂಬ್ಳೆ, ಶ್ರೀನಿವಾಸ ಬಜಾಲ್, ಹರೀಶ ಭಂಡಾರಿ ಕುಳಾಯಿ, ಶಿವರಾಜ್ ಕೋಡಿಕೆರೆ, ಮಣಿಕಂಠ ಸೂರತ್ಕಲ್, ಹೇಮಂತ್ ಸುರತ್ಕಲ್, ಕೇಶವ ಪೂಜಾರಿ ಸೂರಿಂಜೆ, ಹರೀಶ ಪೂಜಾರಿ ಬಂಟ್ವಾಳ ಹೀಗೆ ಕೊಲೆಯಾದವರ ಪಟ್ಟಿ ಬೆಳೆದಿದೆ. ಜೊತೆಗೆ ಆಹಾರದ ಹಕ್ಕಿನ ಮೇಲೆ ದಾಳಿ, ಶಾಲೆ, ಕಾಲೇಜು ವಿದ್ಯಾರ್ಥಿ ಯುವಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿ, ನೈತಿಕ ಪೊಲೀಸ್ ದಾದಾಗಿರಿ, ದನದ ಮಾಂಸ ಸಾಗಾಟ ತಡೆಯುವ ನೆಪದಲ್ಲಿ ಮುಸ್ಲಿಂ ರ ಮೇಲೆ ಹಲ್ಲೆ, ಗಲಭೆಯಲ್ಲಿ ಮಹಿಳೆಯರ ಅಪಮಾನ, ವಿವಿಧ ದೇವಸ್ಥಾನಗಳಲ್ಲಿ ಮದುವೆ ಮುಂಜಿ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡುವುದು, ತಮ್ಮನ್ನು ಪ್ರಶ್ನಿಸುವ ಸಂಘಟನೆಗಳ ವಸ್ತುಗಳನ್ನು ಕದಿಯುವುದು, ಹರಿಯುವುದು, ಬೀದರಂಪಾಟ ಮಾಡುವುದು, ಕಾಲೇಜು ವಿವಿಗಳಲ್ಲಿ ಕೇಸರಿ ಶಾಲ್ ಹಿಡಿದು ನುಗ್ಗುವುದು, ಕ್ಯಾಂಪಸ್ ಗಳಲ್ಲಿ ಅಪಪ್ರಚಾರ ಮಾಡುವುದು ಇವರ ಖಾಯಂ ಜಾಯಮಾನವಾಗಿದೆ. ಇವರ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದೇಶದಲ್ಲಿ 17% ಕೋಮುಗಲಭೆ ಜಾಸ್ತಿಯಾಗಿದೆ ಎಂದು ವಿವಿಧ ಅಂಕಿಸಂಖ್ಯೆಗಳಷ್ಟೇ ಅಲ್ಲ ದಿನನಿತ್ಯ ಕಣ್ಣಿಗೆ ತೋರಿಸಿವೆ.

ಈ ಹಿನ್ನೆಯಲ್ಲಿ ತಮ್ಮ ಹೀನ ಮನುವಾದಿ ಹಿಂಸಾಕೃತ್ಯ ಜನತೆಗೆ ತಿಳಿಯಬಾರದೆಂದು ಮಂಗಳೂರಿನಲ್ಲಿ ನಡೆಯುತ್ತಿರುವ ಸೌಹಾರ್ದ ರ್‍ಯಾಲಿಗೆ ಸಂಘಪರಿವಾರ ಅಡೆತಡೆಯೊಡ್ಡುತ್ತಿದೆ. ಇದಕ್ಕೆ ಮಾರ್ಕ್ಸವಾದಿ ಕಮ್ಯುನಿಷ್ಟ ಪಕ್ಷ ಹೆದರುವುದಿಲ್ಲ. ರಾಜ್ಯದ ಅಭಿವೃದ್ಧಿ ಬಯಸುವ ಸೌಹಾರ್ದ ಪರಂಪರೆ ಕಾಯಬೇಕಾದ ಮನಸ್ಸುಗಳು ದುಡಿಯುವ ಜನತೆ ಐಕ್ಯತೆಯಿಂದ ಇವರ ಗೂಂಡಾದಾಳಿಯನ್ನು ಹಿಮ್ಮೆಟ್ಟಿಸುತ್ತೇವೆ. ದೇಶದ ದುಡಿಯುವ ಜನತೆಯ ಆಶಾ ಕಿರಣ ಕಮ್ಯುನಿಷ್ಟ ಆಂದೋಲನ. ಅದರ ನೇತೃತ್ವದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರವರು ಆಗಮಿಸುವ ಸೌಹಾರ್ದ ರ್‍ಯಾಲಿ ಸಮಾವೇಶ ಖಂಡಿತ ನಡೆಯುತ್ತದೆ. ಅದಕ್ಕೆ ರಾಜ್ಯ ಸರ್ಕಾರ ಗ್ರಹ ಇಲಾಖೆ ಜಿಲ್ಲಾಡಳಿತ ಸೂಕ್ತ ಭದ್ರತೆ ಒದಗಿಸಲು ವಿನಂತಿಸುತ್ತೇವೆ.

ಯಮುನಾ ಗಾಂವ್ಕರ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ

ಕೇಳಿಸಿದ್ದು

'ನಾನು ಕ್ಯಾಥೊಲಿಕ್. ನಾನು ಯಾವಾಗಲೂ ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡುತ್ತೇನೆ. ನಾನು ನನ್ನ ಕಾರ್ಮಿಕರಿಗೆ ನ್ಯಾಯಬದ್ಧ ವೇತನ ಕೊಡುವುದಿಲ್ಲ. ನಾನು ಜನರನ್ನು ಶೋಷಿಸುತ್ತೇನೆ. ನಾನು ಕೆಟ್ಟ ವಹಿವಾಟಿನಲ್ಲಿ ತೊಡಗಿದ್ದೇನೆ. ನಾನು ಕಪ್ಪು ಹಣವನ್ನು ಬಿಳಿ ಮಾಡುತ್ತೇನೆ'..ಎನ್ನುವುದು ಡಬ್ಬಲ್ ಲೈಫ್. ಇಂತಹ ಹಲವು ಕ್ರಿಶ್ಚಿಯನ್ನರಿದ್ದಾರೆ. ಇಂತಹವರ ಬಗ್ಗೆ ನಾವು ಆಗಾಗ ಕೇಳುತ್ತಿರುತ್ತೇವೆ. ಆದರೆ ಈ ರೀತಿಯ ಕ್ಯಾಥೊಲಿಕ್ ಆಗಿರುವುದಕ್ಕಿಂತ, ನಾಸ್ತಿಕರಾಗಿರುವುದು ಲೇಸು.

– ಪೋಪ್ ಫ್ರಾನ್ಸಿಸ್

ಎಸ್.ಸಿ. / ಎಸ್.ಟಿ. ನೌಕರರ ಬಡ್ತಿ ಮೀಸಲಾತಿ ರದ್ದು: ಮುಂದೇನು?

ಎನ್. ನಾಗರಾಜ್



ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸರ್ಕಾರಿ ನೌಕರರ ಬಡ್ತಿ ಮೀಸಲಾತಿ ರದ್ದು ಕುರಿತಂತೆ ಇತ್ತೀಚಿನ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ವಿರೋಧಿಸಿ ದಲಿತ ಹಕ್ಕುಗಳ ಸಮಿತಿ (ಡಿಹೆಚ್‌ಎಸ್) ಬೆಂಗಳೂರು ನಗರದಲ್ಲಿ ಫೆಬ್ರುವರಿ 21ರಂದು ದುಂಡು ಮೇಜಿನ ಸಭೆಯನ್ನು ಆಯೋಜಿಸಿತ್ತು.

ಈ ಸಭೆಯ ಮಹತ್ವವೇನೆಂದರೆ, ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ದಲಿತ ಸಂಘಟನೆಗಳ ರಾಜ್ಯ ಹಾಗೂ ರಾಷ್ಟ್ರ ನಾಯಕರು ಭಾಗವಹಿಸಿದ್ದರು. ಭಾಗವಹಿಸಿದ್ದ ಎಲ್ಲರು 'ಬಡ್ತಿ ಮೀಸಲಾತಿ ರದ್ದು' ಸುಪ್ರೀಂ ಕೋರ್ಟಿನ ತೀರ್ಪನ್ನು ಒಮ್ಮತದಿಂದ ವಿರೋಧಿಸಿ, ಇದರ ವಿರುದ್ಧ ಉಗ್ರ ಹೋರಾಟ ನಡೆಸಲು ತೀರ್ಮಾನಿಸಿದರು.

ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದ ಪ್ರಮುಖರುಗಳೆಂದರೆ,– – ದಲಿತ ಶೋಷಣಾ ಮುಕ್ತಿ ಮಂಚ್ (ಡಿಎಂಎಸ್‌ಎಸ್)ನ, ರಾಷ್ಟ್ರ ನಾಯಕರಾದ ಬಿ.ವಿ. ರಾಘವಲು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರಾಜ್ಯ ಸರ್ಕಾರಿ ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷರಾದ ಡಿ. ಶಿವಶಂಕರ್, ದಲಿತ ಸ್ವಾಬಿಮಾನಿ ಸಂಘರ್ಷ ಸಮಿತಿಯ (ಡಿಎಸ್–4) ರಾಜ್ಯಧ್ಯಕ್ಷರಾದ ಆರ್. ಮೋಹನ್‌ರಾಜು, ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್, ಪ್ರಸಿದ್ಧ ಹೈಕೋರ್ಟ್ ವಕೀಲರು ಹಾಗೂ ವಿಚಾರವಾದಿಗಳಾದ ಸಿ.ಎಸ್. ದ್ವಾರಕನಾಥ್, ಮಾಯುಶ್ರೀ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಾಜ್ಯ ಎಸ್.ಸಿ./ಎಸ್.ಟಿ ಕೇಂದ್ರ ಸಂಘ, ಸಿದ್ದಲಿಂಗಯ್ಯ, ಸಂಘಟನಾ ಸಂಚಾಲಕರು, ದಲಿತ ಸಂಘರ್ಷ ಸಮಿತಿ, ಡಾ:– ಕೆ. ಕೃಷ್ಣಪ್ಪ, ಅಧ್ಯಕ್ಷರು, ಎಸ್.ಸಿ/ಎಸ್.ಟಿ ನೌಕರರ ಸಂಘದ ಡೈಪುಟಿ ಪ್ರಧಾನ ಕಾರ್ಯದರ್ಶಿ, ಪ್ರೋ. ವಿಜಯಕುಮಾರ್, ಎಸ್ಸ್.ಸಿ/ ಎಸ್ಸ್.ಟಿ ಸಂಘ ಬೆಂ. ಪಾಲಿಟೆಕ್ನಿಕ್ ಕಾಲೇಜು, ಡಾ। ಎಂ. ಶಿವಲಿಂಗಯ್ಯ, ಬೆಂ. ಆಕಾಶವಾಣಿ ಎಸ್ಸ್.ಸಿ/ಎಸ್.ಟಿ ನೌಕರರ ಸಂಘ, ಮಂಗಳೂರು ವಿಜಯ, ವಿಜಯಕುಮಾರ್, ಜಯಕುಮಾರ್ ಪ್ರಸಿದ್ಧ ಪತ್ರಕರ್ತರುಗಳು, ಎಂ. ಚಂದರಶೇಖರ್, ಪ್ರಧಾನ ಕಾರ್ಯದರ್ಶಿ ಎಸ್ಸ್.ಸಿ/ಎಸ್.ಟಿ. ನೌಕರರ/ ಅಧಿಕಾರಿಗಳ ಸಂಘ ಕರ್ನಾಟಕ ಜಲಮಂಡಲಿ, ಮಲ್ಲಿಕಾರ್ಜುನ, ಎಸ್ಸ್.ಸಿ/ಎಸ್.ಟಿ ನೌಕರರ ಸಂಘ, ಬಿ.ಎಂ.ಟಿಸಿ, ಎನ್.ಆರ್. ಪ್ರಭು, ಜಂಟಿ ಕಾರ್ಯದರ್ಶಿ ಕರ್ನಾಟಕ ಸರ್ಕಾರದ ಕಾನೂನು ಇಲಾಖೆ, ಟಿ. ಸುರೇಂದ್ರರಾವ್, ಸಮುದಾಯ ರಾಜ್ಯ ಮುಖಂಡರು, ಅಂಬರೀಶ್, ಭಾರತ ವಿದ್ಯಾರ್ಥಿ ಪೆಡರೇಷನ್ ರಾಜ್ಯಧ್ಯಕ್ಷರು, ಎನ್. ರಾಜಣ್ಣ, ಎಸ್.ಸಿ/ಎಸ್.ಟಿ. ನೌಕರರ ಸಂಘ, ಬೆಂಗಳೂರು ದೂರದರ್ಶನ.

ಸುಮಾರು 30 ಕ್ಕೂ ಹೆಚ್ಚು ಎಸ್.ಸಿ/ಎಸ್.ಟಿ ನೌಕರರ ಸಂಘಟನೆಗಳ ಪದಾಧಿಕಾರಿಗಳು ಈ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದು, ಅವರ ಚರ್ಚೆಗಳಲ್ಲಿ ಮಾಡಿದ್ದ 'ಹೋರಾಟದ ಉತ್ಸಾಹ' ಸುಪ್ರೀಂ ಕೋರ್ಟ್‌ನ ತೀರ್ಪನ್ನು ಹಿಮ್ಮೆಟ್ಟಿಸುವ ದೃಡ ವಿಶ್ವಾಸವಿತ್ತು.

ದುಂಡು ಮೇಜಿನ ಸಭೆಯ ಅಧ್ಯಕ್ಷತೆಯನ್ನು, ದಲಿತ ಹಕ್ಕುಗಳ ಸಮಿತಿ'ಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ವಹಿಸಿದ್ದರು. ಆರಂಭದಲ್ಲಿ ಪ್ರಾಸ್ತಾವಿಕ ಮಾತುಗಳೊಂದಿಗೆ ಡಿಹೆಚ್‌ಎಸ್ ನ ಸಹ ಸಂಚಾಲಕರಾದ ನಾಗರಾಜ ನಂಜುಂಡಯ್ಯ ಸ್ವಾಗತ ಕೋರಿದರು, ಡಿಹೆಚ್‌ಎಸ್ ನ ಬಿ. ರಾಜಶೇಖರ್ ಮೂರ್ತಿ ನಿರೂಪಿಸಿದರು. ಹೆಚ್.ಜಿ. ನಾಗಣ್ಣ ವಂದಿಸಿದರು.

ಡಿಎಂಎಸ್‌ಎಸ್ ನ ಅಖಿಲ ಭಾರತ ಮುಖಂಡರಾದ ಹಾಗೂ ಸಿಪಿಐ(ಎಂ) ನ ಪಾಲಿಟ್ ಬ್ಯೂರೋ ಸದಸ್ಯರಾದ ಬಿ.ವಿ. ರಾಘವುಲು ಉದ್ಘಾಟಿಸಿದರು. ನಮ್ಮ ದೇಶದಲ್ಲಿ ಶತ–ಶತಮಾನಗಳಿಂದ ರೌದ್ರತಾಂಡವದ ಜಾತಿ ವ್ಯವಸ್ಥೆಯ ಹಾಗೂ ಅಸ್ಪೃಶ್ಯತಾ, ಜಾತಿ–ತಾರತಮ್ಯಗಳ ಆಚರಣೆಗಳಿಂದಾಗಿ ಧಮನಕ್ಕೆ ತುತ್ತಾಗಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡದವರನ್ನು ಆರ್ಥಿಕವಾಗಿ ಸಮಾನತೆಯೆಡೆಗೆ ತರುವ ಮೂಲ ಉದ್ದೇಶದ ಆಶಯದ ಭಾಗವಾಗಿ ಸಂವಿಧಾನದಲ್ಲಿ 'ಮೀಸಲಾತಿ' ಯನ್ನು ಈ ಜನಾಂಗಕ್ಕೆ ಒದಗಿಸಲಾಗಿದೆ. ಆದರೆ ಈ ತೀರ್ಪು 'ಸಾಮಾಜಿಕ ನ್ಯಾಯ'ಕ್ಕೆ ವಿರುದ್ಧವಾಗಿದೆ. ಮೀಸಲಾತಿಯನ್ನೇ ರದ್ದುಗೊಳಿಸುವ ಒಂದು ಸಂಚಾಗಿದೆ ಎಂದರು. ಆಡಳಿತ ರೂಡ ಸರ್ಕಾರಗಳ ನೀತಿಗಳಿಂದಾಗಿ ದೇಶದಲ್ಲಿ 'ಮೀಸಲಾತಿ' ವಿರೋಧಿ ಮನೋಭಾವ ಹೆಚ್ಚಾಗುತ್ತಿದೆ. ಅದು ಸರ್ವೋಚ್ಚ ನ್ಯಾಯಾಲಗಳ ಮೇಲೂ ಪ್ರಭಾವ ಬೀರಿದೆ. ಮೊದಲು ಈ ತೀರ್ಪಿನ ಮೂಲ ಉದ್ದೇಶಗಳನ್ನೂ ಅಭ್ಯಾಸಮಾಡಿ, ಆದಷ್ಟು ಬೇಗ ಜಾಗೃತರಾಗಿ, ಹೋರಾಟ ನಡೆಸಲು ಪೂರ್ವ ತಯಾರಿ ಮಾಡಿಕೊಳ್ಳಬೇಕೆಂದರು.

ಕೇಂದ್ರ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಮೇಲಿನ ದೌರ್ಜನ್ಯ ತಡೆ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡಿದಾಗ ಮಾತ್ರ ಅವರಿಗೆ ನ್ಯಾಯ ದೊರಕಿಸಲು ಸಾಧ್ಯವಾಗುತ್ತದೆ. ಕೇಂದ್ರವು ಈ ಹಿಂದೆ ಇದ್ದ ಯೋಜನಾ ಆಯೋಗವನ್ನೇ ರದ್ದುಗೊಳಿಸಿ, ಇದೀಗ ಅದರ ಬದಲಿಗೆ ನೀತಿ ಆಯೋಗವನ್ನು ತಂದಿದೆ.

ಯೋಜನಾ ಆಯೋಗಕ್ಕೆ ಮೂಲ ಗುರಿಗಳಿದ್ದವು, ಅದರ ಮಾರ್ಗದರ್ಶನದಂತೆ ಎಸ್ಸ್.ಟಿ/ಎಸ್.ಟಿ.ಗಳ ಆರ್ಥಿಕ ಅಭಿವೃದ್ಧಿಯ ಉದ್ದೇಶಗಳನ್ನು ಭಾಗವಾಗಿ ಎಸ್.ಟಿ./ಎಸ್.ಪಿ/ಟಿ.ಎಸ್.ಪಿ– ಉಪಯೋಜನೆಗಳನ್ನು ಜಾರಿಗೆ ತಂದಿತ್ತು. ಇದರಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 'ಬಜೆಟ್'ಗಳಲ್ಲಿ, ಅವರ ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ಒದಗಿಸುತ್ತಿದ್ದರು ಆದರೆ 'ನೀತಿ ಆಯೋಗವು' ಇಂತಹ ಯಾವುದೇ ಮೂಲ ಉದ್ದೇಶಗಳನ್ನು ಹೊಂದಿಲ್ಲ. ಜೊತೆಗೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಿದ್ದ ಈ ಉಪಯೋಜನೆಗಳನ್ನೇ ರದ್ದುಗೊಳಿಸಲು ರಾಜ್ಯಗಳಿಗೆ ಸೂಚನೆ ಕೊಟ್ಟಿದ್ದಾರೆ.

ಇತ್ತೀಚಿನ ಕೇಂದ್ರದ ಬಜೆಟ್‌ನಲ್ಲಿ ಕೇವಲ ಸೇ. 4.2 ರಷ್ಟು ಮಾತ್ರ ಹಣವನ್ನು ಒದಗಿಸಿರುವುದು ಇದಕ್ಕೆ ಉದಾಹರಣೆ: ಜನಸಂಖ್ಯೆಗೆ ಅನುಗುಣವಾಗಿ ಶೇ. 16.2 ರಷ್ಟು ಹಣ ಹಂಚಬೇಕಾಗಿತ್ತು. ಇದು ಯೋಜನಾ ಆಯೋಗದ ಆಶಯವಾಗಿತ್ತು. ಈ ಹಿಂದೆ ಬಜೆಟ್‌ಗಳಲ್ಲಿ ಹೊಸ ಯೋಜನೆಗಳಿಗಾಗಿ ಹಣವನ್ನು ಪ್ರತ್ಯೇಕವಾಗಿ ಒದಗಿಸಲಾಗಿತ್ತು. ಆದರೆ ಇದೀಗ ಯೋಜನೆಗಳು ಮತ್ತು ಯೋಜನೇತರ – ಎಂಬ ಎರಡು ರೀತಿಯನ್ನು ರದ್ದುಗೊಳಿಸಲಾಗಿದೆ. ಇದು ಪರಿಶಿಷ್ಟ ಜಾತಿ ಉಪಯೋಜನೆ ಹೆಚ್ಚು ಹಣ ಒದಗಿಸದಂತೆ ಮಾಡಿಕೊಂಡಿರುವ ಹೊಸ ಕೇಂದ್ರದ ನೀತಿಯಾಗಿದೆ.

ಒಂದು ಕಡೆ, ಡಾ। ಬಿ.ಆರ್. ಅಂಬೇಡ್ಕರ್ ಬಗ್ಗೆ ಮಾತನಾಡುವ ಆಡಳಿತರೂಡರು, ಮತ್ತೊಂದು ಕಡೆ ಅವರ ಆರ್ಥಿಕ ಯೋಜನೆಗಳ ಮೇಲೆ ಬರೆ ಎಳೆಯುತ್ತಿದ್ದಾರೆ. ಇಂತಹ ಹಿನ್ನೆಲೆಯಲ್ಲಿಯೇ 'ಜಾತಿ ಆಧಾರಿತ ಮೀಸಲಾತಿ' ಬೇಡವೆಂದು ಸುಪ್ರೀಂ ಕೋರ್ಟ್ ತೀಪುಗಳು ಹೇಳುತ್ತಿವೆ. ಬದಲಿಗೆ ಆರ್ಥಿಕ ಆಧಾರಿತ ಮೀಸಲಾತಿಯ ಬಗೆ ಪ್ರೋತ್ಸಾಹ ಕೊಡುತ್ತಾ ಬಂದಿವೆ. ಇದರಿಂದಾಗಿಯೇ, ಗುಜರಾತಿನಲ್ಲಿ ಮೇಲ್ಜಾತಿಯ ಪಟೇಲರು, ಹರಿಯಾಣದಲ್ಲಿ ಪಂಜಾಬು, ಉ.ಪ್ರದೇಶದಲ್ಲಿ ಜಾಟ್ ಮತ್ತಿತರ ಸಮುದಾಯಗಳು ತಮಗೂ ಉದ್ಯೋಗಗಳಲ್ಲಿ ಮೀಸಲಾತಿ ಕೊಡಬೇಕೆಂದು ಚಳುವಳಿ ನಡೆಸುತ್ತಿದ್ದಾರೆ. ತಮ್ಮ ಉದ್ಘಾಟನಾ ಮಾತುಗಳಲ್ಲಿ ಇಂತಹ ಅನೇಕ ಅಂಶಗಳನ್ನೂ ತಿಳಿಸಿಕೊಡುತ್ತಾ, ಸುಪ್ರೀಂ ಕೋರ್ಟಿನ ಈ ತೀರ್ಪನ್ನೂ ತಡೆಹಿಡಿಯಲು ಸಿಪಿಐ(ಎಂ) ಪಕ್ಷದಿಂದ ಎಲ್ಲಾ ರೀತಿಯ ಬೆಂಬಲವನ್ನು ಪಾರ್ಲಿಮೆಂಟಿನ್ ಒಳಗೆ ಹಾಗೂ ಹೊರಗೆ ನೀಡುತ್ತದೆ ಕರ್ನಾಟಕದಲ್ಲಿ ಡಿಹೆಚ್‌ಎಸ್ ನಿಮ್ಮೊಂದಿಗೆ ಸಹಕರಿಸಿ, ಹೋರಾಟಗಳಿಗೆ ಸ್ಫೂರ್ತಿ ತುಂಬುತ್ತದೆ ಎಂದರು.

ಸುಪ್ರೀಂ ಕೋರ್ಟಿನ ಮೀಸಲಾತಿ ಬಡ್ತಿ ರದ್ದತಿ' ತೀರ್ಪಿನಲ್ಲಿ, ಏನಿದೆ? ಯಾವ ರೀತಿ ಹೋರಾಟಗಳನ್ನು ರೂಪಿಸಬೇಕು? ಎಂಬ ಪ್ರಶ್ನೆಗಳಿಗೆ, ರಾಜ್ಯ ಸರ್ಕಾರಿ ಎಸ್.ಸಿ/ಎಸ್.ಟಿ ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷರಾದ ಡಿ. ಶಿವಶಂಕರ್, ಹಾಗೂ ಪ್ರಸಿದ್ಧ ವಕೀಲರಾದ ಡಾ। ಸಿ.ಎಸ್ ದ್ವಾರಕನಾಥ್ ರವರು ಮಾವಳ್ಳಿ ಶಂಕರ್, ಡಾ। ಎ. ಕೃಷ್ಣಪ್ಪ, ಸಿದ್ಧಲಿಂಗಯ್ಯ, ಆರ್. ಗುರುಸ್ವಾಮಿ, ಮಾರುತಿ ಮಾನ್ಪಡೆ ಇವರೆಲ್ಲಾ ಚರ್ಚೆಯಲ್ಲಿ ಭಾಗವಹಿಸುತ್ತಾ, ತಮ್ಮ ವಿಚಾರಗಳನ್ನು ಹಂಚಿಕೊಂಡರು. 'ಮೀಸಲಾತಿ'ಯ ಮೂಲ ಉದ್ದೇಶ ಇದೇ ಸುಪ್ರೀಂ ಕೋರ್ಟಿನ ನ್ಯಾಯಾಧೀಶರೊಬ್ಬರು ತಮ್ಮ ತೀರ್ಪೊಂದರಲ್ಲಿ "Reservation is not a charity, it is for parity" ಅಂದರೆ– ಮೀಸಲಾತಿ ಬಿಕ್ಷೆಯಲ್ಲ; ಅದೊಂದು ಸಮಾನತೆಯ ಸಾಧನ" ಎಂದು ಹೇಳಿದ್ದುಂಟು, ನಮ್ಮ ಸಂವಿಧಾನವು ನಮಗೆ ಪ್ರಜಾಪ್ರಭುತ್ವ, ಸಮಾನತೆ, ಸೋದರತ್ವ, ಸ್ವಾತಂತ್ರ್ಯವನ್ನು ಮೂಲ ಆಶಯಗಳನ್ನಾಗಿ ಕೊಟ್ಟಿದೆ. 'ಸಾಮಾಜಿಕ ನ್ಯಾಯ' ನಮ್ಮ ಸಂವಿಧಾನದ ಆಧಾರ ಸ್ತಂಭಗಳಲ್ಲಿ ಪ್ರಮುಖವಾದುದ್ದು, ಪ್ರತಿಯೊಬ್ಬ ಪ್ರಜೆಗೂ – ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಸರ್ವರಿಗೂ ಸಮಾನ ಪ್ರಾತಿನಿಧ್ಯವನ್ನು ನೀಡಬೇಕೆಂಬ ಮೂಲ ತತ್ವವನ್ನು



ಮಾಯಾವತಿಯವರ ಬಿಎಸ್‌ಪಿ ಮತ್ತು ಮೋದಿಯ ಬಿಜೆಪಿ ಉತ್ತರಪ್ರದೇಶದಲ್ಲಿ ಚುನಾವಣೋತ್ತರ ಮೈತ್ರಿ ಮಾಡಿಕೊಂಡರೆ ನಿಮ ಅಭಿಪ್ರಾಯವೇನು ಎಂಬ ಪ್ರಶ್ನೆಗೆ ಅಲ್ಲಿರುವ "ಭಕ್ತರು" ಎಂಬ ಪದದ ಸುತ್ತವೆ ಗಿರಕಿ ಹೊಡೆಯುತ್ತಿರುವ ಕೆಲವರು ಪ್ರಶ್ನೆಗೆ ಉತ್ತರಿಸದೆ ಹೊಸ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಗೆಳೆಯ Shridhar Prabhu ಅವರು "ಕೊರಗಜ್ಜನ ಪಾತ್ರಿಗೂ ನಡೆದುಕೊಳ್ಳುವವರಿದ್ದಾರೆ ಉಡುಪಿ ಮಠದ ಸ್ವಾಮಿಗಳಿಗೂ ಭಕ್ತರಿದ್ದಾರೆ. ಇಬ್ಬರೂ ಒಂದೇನಾ?" ಎಂದು ಕೇಳಿದ್ದಾರೆ. ಅದಕ್ಕೆ ನನ್ನ ಉತ್ತರ ಇದು.

ಹೌದು, ಪೇಜಾವರ ಸ್ವಾಮಿಗೂ ಭಕ್ತರಿದ್ದಾರೆ. ಕೊರಗಜ್ಜನ ಪಾತ್ರಿಗೂ ನಡೆದುಕೊಳ್ಳುವವರಿದ್ದಾರೆ. ಇಬ್ಬರು ಒಂದೇ ಅಲ್ಲ, ಬೇರೆಬೇರೆ. ನಾವೆಲ್ಲ ಪೇಜಾವರ ಸ್ವಾಮೀಜಿ ನಮಗೆ ಬೇಡ, ನಾವೇನಿದ್ದರೂ ದೇವರ ಅನುಗ್ರಹಕ್ಕೆ ಕೊರಗಜ್ಜನ ಪಾತ್ರಿಯನ್ನೆ ನೆಚ್ಚಿಕೊಂಡಿದ್ದೇವೆ. ಹೀಗಿರುವಾಗ ಸ್ವತಃ ಕೊರಗಜ್ಜನ ಪಾತ್ರಿಯೆ ಹೋಗಿ ಪೇಜಾವರ ಸ್ವಾಮಿಯ ಜೊತೆ ಸೇರಿಕೊಂಡರೆ ಹೇಗಾಗುತ್ತದೆ? ಈ ಆತಂಕ ನಮ್ಮದು

– ಶಶಿಧರ ಹೆಮ್ಮಾಡಿ

ಉತ್ತರ ಪ್ರದೇಶದಲ್ಲಿ ಮೋದಿ–ಷಾ ಜೋಡಿಯ ಕೋಮುವಾದೀ ಅಬ್ಬರ



ಬಿಜೆಪಿಗೆ ಕೋಮುವಾದಿ ವೇದಿಕೆಯು ಅದರ ಹಿಂದುತ್ವ ಸಿದ್ಧಾಂತದಿಂದ ಹೊಮ್ಮುವ ರಾಜಕೀಯ ಪ್ರಚಾರದ ಅಗತ್ಯ ಭಾಗವಾಗಿದೆ. ಕೋಮುವಾದಿ ಕಣ್ಣೋಟವನ್ನು ಪಸರಿಸುವುದು ಮತ್ತು ಹಿಂದೂ–ಮುಸ್ಲಿಂ ವಿಭಜನೆ ಮಾಡುವುದು ಅದರ ರಾಜಕೀಯ ಯೋಜನೆ ಮತ್ತು ಹಿಂದೂ ಕ್ರೋಡೀಕರಣದ ಅದರ ಹುಡುಕಾಟದ ಭಾಗವಾಗಿದೆ. ಇದಕ್ಕೆ ಪೂರಕವಾಗಿ ಉತ್ತರ ಪ್ರದೇಶದ ಜಾತಿ ಮೈತ್ರಿಗಳು ಮತ್ತು ಅಸ್ಮಿತೆಗಳನ್ನು ಬಳಸಲಾಗುತ್ತಿದೆ.



ವ್ಯಂಗ್ಯಚಿತ್ರ: ಕೀರ್ತೀಶ್, ಬಾಮುಲಾಜಿಜಾ.ಕಾಂ

*** ಪ್ರಕಾಶ್ ಕಾರಟ್**

ಉತ್ತರ ಪ್ರದೇಶದಲ್ಲಿ ಬಿಜೆಪಿಯ ಚುನಾವಣೆ ಪ್ರಚಾರ ಅದರ ನಿಜ ಸ್ವರೂಪವನ್ನು ಅನಾವರಣಗೊಳಿಸುತ್ತಿದೆ. ನರೇಂದ್ರ ಮೋದಿ ಮತ್ತು ಅಮಿತ್ ಷಾ ನೇತೃತ್ವದಲ್ಲಿ ಕೋಮುವಾದಿ ಮಾತಿನ ಅಬ್ಬರ ಪೂರ್ಣ ಪ್ರಮಾಣದಲ್ಲಿ ಸಾಗಿದ್ದು ಬಹುಸಂಖ್ಯಾತ ಕೋಮುವಾದದ ಔತಣವನ್ನು ಉಣಬಡಿಸಲಾಗುತ್ತಿದೆ. ಫತೇಪುರದಲ್ಲಿ ಚುನಾವಣೆ ಪ್ರಚಾರ ರ್‍ಯಾಲಿಯಲ್ಲಿ ನರೇಂದ್ರ ಮೋದಿ ಇದ–ಕ್ಕೆ ನಾಂದಿ ಹಾಡಿದ್ದಾರೆ. ಒಂದು ಹಳ್ಳಿಯಲ್ಲಿ ಕಬರಿಸ್ತಾನ (ಮುಸ್ಲಿಮರ ಅಂತ್ಯಸಂಸ್ಕಾರ ಸ್ಥಳ) ಇದ್ದರೆ ಅಲ್ಲಿ ಸ್ಮಶಾನವೂ ಇರಬೇಕು, ರಮ್ಜಾನ್ ವೇಳೆ ವಿದ್ಯುತ್ ಸರಬರಾಜು ಇದ್ದರೆ ದೀಪಾವಳಿ ದಿನವೂ ಅದು ಇರಬೇಕು ಎನ್ನುವ ಮೂಲಕ ಮೋದಿ ಈ ಕೋಮುವಾದದ ರಾಗ ಆರಂಭಿಸಿದರು. ಈ ಖುಲ್ಲಂಖುಲ್ಲಾ ಕೋಮುವಾದಿ ಕರೆಯನ್ನು ಮುಚ್ಚಿಹಾಕಲೋ ಎನ್ನುವಂತೆ ಹೋಳಿ ದಿನದಂದು ವಿದ್ಯುತ್ ಇರುವುದಾದರೆ ಈದ್ ದಿನದಂದೂ ಇರಬೇಕು ಎಂದು ತಮ್ಮ ಭಾಷಣದ ಕೊನೆಯಲ್ಲಿ ಅವರು ಹೇಳಿದರು.

ಇದು 'ಅಲ್ಪಸಂಖ್ಯಾತರನ್ನು ತುಷ್ಟೀಕರಿಸಲಾಗುತ್ತಿದೆ' ಎಂಬ ಬಹಳಷ್ಟು ಹಳಸಲಾದ ವಿಚಾರದ ಹಾಗೂ ಬಹುಸಂಖ್ಯಾತರು ಬಲಿಪಶುಗಳಾಗಿದ್ದಾರೆ ಎಂಬ ಕಪೋಲ ಕಲ್ಪನೆಯ ಆಟವಲ್ಲದೆ ಬೇರೇನೂ ಅಲ್ಲ. ಉತ್ತರ ಪ್ರದೇಶದ ಸಮಾಜವಾದಿ ಪಕ್ಷದ ಸರಕಾರ ಮುಸ್ಲಿಮರನ್ನು ಓಲೈಸುತ್ತಿದೆ ಎಂದು ಹೇಳಲುಅವರಿಗೆ ಒಂದಿಷ್ಟೂ ನಾಚಿಕೆಯೆನಿಸಿದಂತಿಲ್ಲ. ಉತ್ತರ ಪ್ರದೇಶದಲ್ಲಿ ಈದ್ ಮಿಲಾದ್ ದಿನಕ್ಕಿಂತಲೂ ದೀಪಾವಳಿ ದಿನದಂದು ಹೆಚ್ಚು ವಿದ್ಯುತ್ ಸರಬರಾಜು ಇತ್ತು ಎನ್ನುವುದು ಅಧಿಕೃತ ಅಂಕಿಸಂಖ್ಯೆಗಳೇ ಹೇಳುತ್ತವೆ. ಅಲ್ಲದೆ ಬಿಜೆಪಿ ಪ್ರಚಾರಕರು ಹೇಳುವಂತೆ ಹೆಚ್ಚಾಗಿ ಮುಸ್ಲಿಂ ವಿದ್ಯಾರ್ಥಿಗಳಿಗೇ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿದೆ ಎಂಬ ಮಾತೂ ಸತ್ಯವಾದುದಲ್ಲ.

ಈ ಕೋಮುವಾದಿ ಪ್ರಚಾರವನ್ನು ಉನ್ನತ ಮಟ್ಟದಿಂದಲೇ ರೂಪಿಸಲಾಗಿದೆಯೆನ್ನುವುದು ಬಿಜೆಪಿ ಅಧ್ಯಕ್ಷ ಅಮಿತ್ ಷಾ ಕೋಮುವಾದಿ ಧ್ರುವೀಕರಣಕ್ಕೆಂದೇ ಹೆಣೆದ ಕೋಮುವಾದಿ ವಿಚಾರಗಳನ್ನೇ ಕೆದಕುತ್ತಿದ್ದಾರೆ ಎನ್ನುವ ಅಂಶದಿಂದ ದೃಢವಾಗುತ್ತದೆ. ಬಿಜೆಪಿ ಅಧಿಕಾರಕ್ಕೆ ಬಂದರೆ 'ಉತ್ತರ ಪ್ರದೇಶದಲ್ಲಿ ಎಲ್ಲಾ ಕಸಾಯಿಖಾನೆಗಳನ್ನು ಅದು ಮುಚ್ಚುತ್ತದೆ' ಮತ್ತು 'ಹಸುಗಳು, ಎತ್ತುಗಳು ಮತ್ತು ಕೋಣಗಳ ರಕ್ತದ ಕೋಡಿಯನ್ನು ನಿಲ್ಲಿಸುತ್ತೇವೆ' ಎಂದು ಷಾ ಘೋಷಿಸಿದ್ದಾರೆ. ಕ್ರಿಮಿನಲ್‌ಗಳನ್ನು ಮುಸ್ಲಿಮರೊಂದಿಗೆ ಸಮೀಕರಿಸುವ, ಅವರಿಗೆ ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿ ಆಶ್ರಯ ನೀಡುತ್ತಿದ್ದಾರೆ ಎಂದು ಹೇಳಿಕೊಂಡು ಬರುತ್ತಿದ್ದಾರೆ.

ಬಿಜೆಪಿ ಚುನಾವಣೆ ಪ್ರಣಾಳಿಕೆ 'ರೋಮಿಯೋ–ವಿರೋಧಿ ಪಡೆ'ಗಳನ್ನು ರಚಿಸುವುದಾಗಿ ಹೇಳಿದೆ. ರೋಮಿಯೋ ಎಂಬುದು ಮುಸ್ಲಿಂ ಯುವಕರನ್ನು ಸೂಚಿಸುವ ಗುಪ್ತಸಂಕೇತ, ಅವರು ಹಿಂದೂ ಹುಡುಗಿಯರನ್ನು ಪೀಡಿಸುತ್ತಾರೆ ಎನ್ನುವ ಕಲ್ಪನೆ ಇದರ ಹಿಂದಿದೆ. ಇದು 'ಲವ್ ಜಿಹಾದ್' ಪ್ರಚಾರದ ಚರ್ವಿತಚರ್ವಣವಷ್ಟೇ. ಕೈರಾನಾದಂಥ ಪಟ್ಟಣಗಳಿಂದ ಹಿಂದೂ ಜನರು ತಂಡತಂಡವಾಗಿ ವಲಸೆ ಹೋಗುವುದನ್ನು ತಡೆಯಲು ತಂಡಗಳನ್ನು ರಚಿಸುವುದಾಗಿಯೂ ಪ್ರಣಾಳಿಕೆ ಹೇಳಿದೆ. ಇದು ಇನ್ನೊಂದು ಮಿಥ್ಯೆ ಎನ್ನುವುದು ಮಾಧ್ಯಮಗಳ ತನಿಖಾ ವರದಿಗಳಿಂದ ಈಗಾಗಲೇ ಸಾಬೀತಾಗಿರುವ ವಿಚಾರ.

ಚುನಾವಣೆಯಲ್ಲಿ ಜನರ ಬೆಂಬಲ ಪಡೆಯಲು ವಿಫಲವಾಗುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಹೆಚ್ಚೆಚ್ಚು ಕೋಮುವಾದಿ ಪ್ರಚಾರದಲ್ಲಿ ತೊಡಗಲು ಆರಂಭಿಸಿದೆ ಎಂದು ಕೆಲವು ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಇದೊಂದು ತಪ್ಪು ವಿಶ್ಲೇಷಣೆಯಾಗಿದೆ. ಬಿಜೆಪಿಗೆ ಕೋಮುವಾದಿ ವೇದಿಕೆಯು ಅದರ ಹಿಂದುತ್ವ ಸಿದ್ಧಾಂತದಿಂದ ಹೊಮ್ಮುವ ರಾಜಕೀಯ ಪ್ರಚಾರದ ಅಗತ್ಯ ಭಾಗವಾಗಿದೆ. ಕಳೆದ ಬಿಹಾರ ವಿಧಾನಸಭೆ ಚುನಾವಣೆಗಳು ಮತ್ತು ಉತ್ತರ ಪ್ರದೇಶದಲ್ಲಿ ಲೋಕಸಭೆ ಚುನಾವಣೆಗಳ ವೇಳೆಯೂ ಮೋದಿ ಮತ್ತು ಬಿಜೆಪಿ ಇಂಥ ಕೋಮುವಾದಿ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಚುನಾವಣೆ ಸಂದರ್ಭದಲ್ಲೆಲ್ಲಾ ಆರ್‌ಎಸ್‌ಎಸ್–ಬಿಜೆಪಿ ಕಾರ್ಯಕರ್ತರು ತಳಮಟ್ಟದಲ್ಲಿ ಕೋಮುವಾದಿ ಪ್ರಚಾರ ನಡೆಸುವುದು ಸರ್ವೇಸಾಮಾನ್ಯ. ನಾಯಕರು ತಮ್ಮ ಭಾಷಣಗಳಲ್ಲಿ ಅದಕ್ಕೆ ಹೆಚ್ಚು ಒತ್ತು ನೀಡಬೇಕೋ ಬೇಡವೋ ಎನ್ನುವುದು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

ಬಿಜೆಪಿಗೆ ಕೋಮುವಾದಿ ಕಣ್ಣೋಟವನ್ನು ಪಸರಿಸುವುದು ಮತ್ತು ಹಿಂದೂ–ಮುಸ್ಲಿಂ ವಿಭಜನೆ ಮಾಡುವುದು ಅದರ ರಾಜಕೀಯ ಯೋಜನೆ ಮತ್ತು ಹಿಂದೂ ಕ್ರೋಡೀಕರಣದ ಅದರ ಹುಡುಕಾಟದ ಭಾಗವಾಗಿದೆ. ಇದಕ್ಕೆ ಪೂರಕವಾಗಿ ಉತ್ತರ ಪ್ರದೇಶದ ಜಾತಿ ಮೈತ್ರಿಗಳು ಮತ್ತು ಅಸ್ಮಿತೆಗಳನ್ನು ಬಳಸಲಾಗುತ್ತಿದೆ.

ಚುನಾವಣಾ ಆಯೋಗ ನರೇಂದ್ರ ಮೋದಿ ಮತ್ತು ಅಮಿತ್ ಷಾ ಅವರ ಭಾಷಣಗಳನ್ನು ಸ್ವಪ್ರೇರಣೆಯಿಂದ ಗಮನಕ್ಕೆ ತಗೊಂಡಿಲ್ಲ ಎನ್ನುವುದು ಕೋಮುವಾದಿ ಚಿಂತನೆಯು ಈಗೀಗ ಮುಖ್ಯವಾಹಿನಿ ರಾಜಕೀಯ ಮುಖ್ಯವಾಹಿನಿಯಲ್ಲಿ ಹೇಗೆ ಸ್ವೀಕಾರಾರ್ಹವಾಗುತ್ತಿದೆ ಎನ್ನುವುದನ್ನು ತೋರಿಸುತ್ತದೆ.

ಬಿಜೆಪಿಯ ಕೋಮುವಾದಿ ಆಟವನ್ನು ಉತ್ತರ ಪ್ರದೇಶದ ಜನರು ಅರ್ಥಮಾಡಿಕೊಳ್ಳುತ್ತಾರೆ ಹಾಗೂ ತಮ್ಮನ್ನು ವಿಭಜಿಸುವ ಸಿನಿಕ ಕಸರತ್ತುಗಳನ್ನು ವಿಫಲಗೊಳಿಸುತ್ತಾರೆ ಎಂದು ಆಶಿಸೋಣ.

– ಅನು: ವಿಶ್ವ

ಭಯೋತ್ಪಾದನೆ ಕೇಸುಗಳ ವಿಚಾರಣೆಯ ಹೆಸರಲ್ಲಿ ಮುಸ್ಲಿಂ ಯುವಜನರಿಗೆ ಕಿರುಕುಳ

ದಿಲ್ಲಿ ಹೈಕೋರ್ಟ್ 2005ರ ದಿಲ್ಲಿ ಸರಣಿ ಸ್ಫೋಟಗಳಲ್ಲಿ ಆಪಾದಿತರಾಗಿದ್ದ ಎಲ್ಲ ಮೂವರನ್ನು ಖುಲಾಸೆ ಮಾಡಿದೆ. ಈ ಸುದ್ದಿ ಭಯೋತ್ಪಾದನೆ ಸಂಬಂಧಿತ ಕೇಸುಗಳಲ್ಲಿ ಮುಸ್ಲಿಂ ಯುವಜನರ ಮೇಲೆ ಸುಳ್ಳು ಆರೋಪ ಹೊರಿಸಿ ಅವರ ಮೇಲೆ ಗುರಿಯಿಡುವ, ಅವರನ್ನು ವಿಚಾರಣೆಗೆ ಗುರಿಪಡಿಸುವ ಹೀನ ಮತ್ತು ಆಘಾತಕಾರೀ ದಾಖಲೆಯನ್ನು ಮತ್ತೊಮ್ಮೆ ಎತ್ತಿ ತೋರಿದೆ. ನ್ಯಾಯಾಲಯ ಮಹಮ್ಮದ್ ಹುಸೇನ್ ಫಜ್ಲಿ ಮತ್ತು ಮಹಮ್ಮದ್ ರಫೀಕ್ ಶಹಾ ಈ ಇಬ್ಬರನ್ನು ಎಲ್ಲ ಆಪಾದನೆಗಳಿಂದ ಮುಕ್ತಗೊಳಿಸಿದೆ. ಮತ್ತೊಬ್ಬ ಆಪಾದಿತ ತಾರಿಕ್ ಅಹ್ಮದ್ ದರ್ ಕೂಡ ಈ ಸ್ಫೋಟಗಳಲ್ಲಿ ಯಾವುದೇ ಪಾತ್ರ ಹೊಂದಿರಲಿಲ್ಲ ಎಂದು ಕಂಡು ಬಂದಿದೆ. ಆದರೆ ಆತ ಒಂದು ಭಯೋತ್ಪಾದಕ ಸಂಘಟನೆಯ ಒಬ್ಬ ಸದಸ್ಯ ಎಂದು ಶಿಕ್ಷೆಗೊಳಪಟ್ಟಿದ್ದಾನೆ.

ಈ ಪಕ್ಷಪಾತಪೂರ್ಣ ಮತ್ತು ಕೋಮುವಾದಿ ದುರುದ್ದೇಶದ ಪೊಲಿಸ್ ತನಿಖೆಯ ಒಟ್ಟು ಫಲಿತಾಂಶವೆಂದರೆ, ದಿಲ್ಲಿಯಲ್ಲಿ 67 ಮಂದಿಯನ್ನು ಸಾಯಿಸಿದ ಆ ಭಯೋತ್ಪಾದಕ ದಾಳಿಯನ್ನು ನಡೆಸಿದವರು ಯಾರು ಎಂದು ಪತ್ತೆಯಾಗಿಯೇ ಇಲ್ಲ. ಈ ದಾಳಿಗೆ ಬಲಿಯಾದವರ ಕುಟುಂಬಗಳಿಗೆ ಇದು ಅತ್ಯಂತ ಆಕ್ರೋಶದ ಸಂಗತಿಯೇ ಸರಿ.

ಫಜ್ಲಿ ಮತ್ತು ರಫೀಕ್ ಶಹಾ ಬಿಡುಗಡೆ ಪಡೆಯಲು 12 ವರ್ಷಗಳೇ ಬೇಕಾದವು. ಈ ವರ್ಷಗಳಲ್ಲಿ ಅವರು ಪೋಲೀಸ್ ಚಿತ್ರಹಿಂಸೆಯನ್ನು ದೀರ್ಘಕಾಲದ ಸೆರೆವಾಸದ ಹಿಂಸೆಯನ್ನು ಅನುಭವಿಸಬೇಕಾಗಿ ಬಂತು. ನ್ಯಾಯವ್ಯವಸ್ಥೆಯ ಈ ವೈಫಲ್ಯದ ಹಿಂದೆ ಪೋಲೀಸ್ ಚಿತ್ರಹಿಂಸೆಗಳ, ಸುಳ್ಳು ಸಾಕ್ಷ್ಯಗಳ ಮತ್ತು ಆಪಾದಿತರು ಅಮಾಯಕರು ಎಂದು ಸಾಬೀತು ಮಾಡುವ ನಿಜಸಂಗತಿಗಳನ್ನು ಮುಚ್ಚಿ ಹಾಕಿದ ಒಂದು ದೊಡ್ಡ ಕತೆಯೇ ಇದೆ.

ಉದಾಹರಣೆಗೆ 22ವರ್ಷಗಳ ರಫೀಕ್ ಶಹಾ ಕಾಶ್ಮೀರ ವಿಶ್ವ ವಿದ್ಯಾಲಯದ ವಿದ್ಯಾರ್ಥಿಯಾಗಿದ್ದ,



ಯಾವುದೇ ಅಪರಾಧ ಮಾಡದಿದ್ದರೂ 12 ವರ್ಷಗಳ ಜೈಲುವಾಸದ ನಂತರ ಶ್ರೀನಗರಕ್ಕೆ ಮರಳಿರುವ ಮಹಮ್ಮದ್ ರಫೀಕ್ ಶಹಾ 12 ವರ್ಷಗಳ ನಂತರ ತನ್ನ ಮನೆಯಲ್ಲಿ ತನ್ನ ತಂದೆ ಮಹಮ್ಮದ್ ಯಾಸೀನ್‌ರೊಂದಿಗೆ

ದಿಲ್ಲಿಯಲ್ಲಿ ಸ್ಫೋಟ ನಡೆದ ದಿನ ಅತ ಶ್ರೀನಗರದಲ್ಲಿ ತರಗತಿಯಲ್ಲಿದ್ದ. ಹಾಜರಿ ಪಟ್ಟಿಯಿಂದ ಇದನ್ನು ದೃಢಪಡಿಸುವ ಕಾಶ್ಮೀರ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅವರ ಪತ್ರವನ್ನು ಪೋಲಿಸರು ಬೇಕೆ–ಂದೇ ದಬಾಯಿಸಿಟ್ಟರು. ನ್ಯಾಯಾಲಯದ ತೀರ್ಪು ಈ ಕೇಸನ್ನು ಸೃಷ್ಟಿಸಿದ ಮತ್ತು ಮುಗ್ಧ ಜನಗಳ ಮೇಲೆ ಈ ಅತ್ಯಾಚಾರವನ್ನು ನಡೆಸಿಕೊಂಡು ಬಂದಿರುವ ದಿಲ್ಲಿ ಪೋಲಿಸಿನ ವಿಶೇಷ ಸೆಲ್‌ನ ಅಪರಾಧವನ್ನು ತೋರಿಸುವ ತೀರ್ಪು ಆಗಿದೆ.

ದಿಲ್ಲಿ ಸ್ಫೋಟದ ಈ ಕೇಸಿನಲ್ಲಿ ಆಪಾದಿತರ ಖುಲಾಸೆ ಕಳೆದ ಒಂದೂವರೆ ದಶಕದಲ್ಲಿ ಭಯೋತ್ಪಾದನೆ ಸಂಬಂಧಿತ ಕೇಸುಗಳಲ್ಲಿ ಆಗಿರುವ ಖುಲಾಸೆಗಳ ಸರಣಿಯ ಭಾಗವಾಗಿ ಬಂದಿದೆ. ಈ ಕುರಿತ ನ್ಯಾಯಾಲಯದ ತೀರ್ಪುಗಳು ಇವುಗಳೆಲ್ಲದರಲ್ಲಿ

ದಿಲ್ಲಿ ಸ್ಫೋಟದ ಕೇಸಿನಲ್ಲಿ ಆಪಾದಿತರ ಖುಲಾಸೆ ಕಳೆದ ಒಂದೂವರೆ ದಶಕದಲ್ಲಿ ಭಯೋತ್ಪಾದನೆ ಸಂಬಂಧಿತ ಕೇಸುಗಳಲ್ಲಿ ಆಗಿರುವ ಖುಲಾಸೆಗಳ ಸರಣಿಯ ಭಾಗವಾಗಿ ಬಂದಿದೆ. ಈ ಕುರಿತ ನ್ಯಾಯಾಲಯದ ತೀರ್ಪುಗಳು ಇವುಗಳೆಲ್ಲದರಲ್ಲಿ ಒಂದು ಸಿದ್ಧಮಾದರಿ ಇರುವುದನ್ನು ತೋರಿಸುತ್ತವೆ.ಈ ಪ್ರಶ್ನೆಯನ್ನು ಸರಕಾರ ಮತ್ತು ಭಾರತದ ರಾಷ್ಟ್ರಪತಿಗಳ ಮುಂದೆ ಎತ್ತಿದ್ದರೂ ಪರಿಸ್ಥಿತಿಯನ್ನು ಸರಿಪಡಿಸಲು ಏನೂ ಮಾಡಲಿಲ್ಲ. ಈಗ ದಿಲ್ಲಿ ಹೈಕೋರ್ಟ್ ಪೋಲಿಸ್ ತನಿಖೆಯ ವಿರುದ್ಧ ನೀಡಿರುವ ತೀರ್ಪಿನ ನಂತರವಾದರೂ ಈ ದಿಕ್ಕಿನಲ್ಲಿ ಒಂದು ಆರಂಭವನ್ನು ಮಾಡಬೇಕಾಗಿದೆ.

ಒಂದು ಸಿದ್ಧಮಾದರಿ ಇರುವುದನ್ನು ತೋರಿಸುತ್ತವೆ. ಒಂದು ಭಯೋತ್ಪಾದಕ ಸ್ಫೋಟ ನಡೆದಾಗಲೆಲ್ಲ ಮುಗ್ಧ ಮುಸ್ಲಿಂ ಯುವಜನರನ್ನು ಸುತ್ತುವರೆದು ಅವರ ಮೇಲೆ ಆರೋಪ ಹೊರಿಸಲಾಗುತ್ತದೆ. ಪೋಲೀಸ್ ತನಿಖಾ ಏಜೆನ್ಸಿಗಳಲ್ಲಿ, ವಿಶೇಷವಾಗಿ ವಿಶೇಷ ಸೆಲ್‌ಗಳಲ್ಲಿ ಮತ್ತು ಭಯೋತ್ಪಾದನಾ–ನಿಗ್ರಹ ತಂಡಗಳಲ್ಲಿ ಮುಸ್ಲಿಂ ಯುವಜನರ ವಿರುದ್ಧ ಪಕ್ಷಪಾತ ರಕ್ತಗತವಾದಂತಿದೆ; ವಿಶೇಷವಾಗಿ ಕಾಶ್ಮೀರಿ ಯುವಜನರ ಮೇಲೆ ಗುರಿಯಿಡಲಾಗುತ್ತದೆ.

2012 ರಲ್ಲಿ ಸಿಪಿಐ(ಎಂ) ಭಯೋತ್ಪಾದನೆ ಸಂಬಂಧಿತ ಕೇಸುಗಳಲ್ಲಿ ಸುಳ್ಳು ಆಪಾದನೆಗಳಿಂದ ಖುಲಾಸೆಯಾದ, ಬಿಡುಗಡೆ ಹೊಂದಿದ 22 ಮುಸ್ಲಿಂ ಯುವಜನರ ಕೇಸುಗಳನ್ನು ಕೈಗೆತ್ತಿಕೊಂಡಿತ್ತು. ದಿಲ್ಲಿಯ 18 ವರ್ಷದ ಮಹಮ್ಮದ್ ಅಮೀರ್ ಬಂಧಿಸಲ್ಪಟ್ಟು 14 ವರ್ಷ ಜೈಲಿನಲ್ಲಿ ಕಳೆದ ಮೇಲೆ ನಿರಪರಾಧಿ ಎಂದು ಬಿಡುಗಡೆ ಹೊಂದಿದ್ದ. ಇನ್ನೊಬ್ಬ ಶ್ರೀನಗರದ ಮಕ್ಬುಲ್ ಶಹಾ 14 ವರ್ಷ ಜೈಲಿನಲ್ಲಿ ಕಳೆದ ನಂತರ ಖುಲಾಸೆಯಾಗಿದ್ದ.

ಸಿಪಿಐ(ಎಂ) ಈ ಕೆಳಗಿನ ಬೇಡಿಕೆಗಳನ್ನು ಇಟ್ಟಿತ್ತು:

1. ಇಂತಹ ಕೇಸುಗಳಲ್ಲಿ ಸುಳ್ಳು ಆರೋಪಗಳನ್ನು ಹೊತ್ತ ಮುಗ್ಧ ವ್ಯಕ್ತಿಗಳಿಗೆ ಪರಿಹಾರ ಮತ್ತು ಮರುವಸತಿ.
2. ಇಂತಹ ಕೇಸುಗಳನ್ನು ಸಮಯಬದ್ಧ ವಿಧಾನಗಳ ಮೂಲಕ ಒಂದು ವರ್ಷದೊಳಗೆ ಇತ್ಯರ್ಥ ಪಡಿಸಲು ವಿಶೇಷ ನ್ಯಾಯಾಲಯಗಳು
3. ಸುಳ್ಳು ಸಾಕ್ಷ್ಯಗಳ ಸೃಷ್ಟಿ ಮತ್ತು ಅಮಾಯಕ ವ್ಯಕ್ತಿಗಳನ್ನು ಸಿಗಿಸಿ ಹಾಕುವ ಪಕ್ಷಪಾತಪೂರ್ಣ ಪ್ರಯತ್ನಗಳನ್ನು ನಡೆಸಿದ್ದು ಕಂಡು ಬಂದಿರುವ ಕೇಸುಗಳಲ್ಲಿ ಇದಕ್ಕೆ ಹೊಣೆಗಾರರಾದವರ ವಿರುದ್ಧ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು
4. ಕಾನೂನುಬಾಹಿರ ಚಟುವಟಿಕೆಗಳ ನಿಷೇಧ ಕಾಯ್ದೆಯಲ್ಲಿನ ಕರಾಳ ಅಂಶಗಳನ್ನು ತೆಗೆಯಬೇಕು.

ಈ ಪ್ರಶ್ನೆಯನ್ನು ಸರಕಾರ ಮತ್ತು ಭಾರತದ ರಾಷ್ಟ್ರಪತಿಗಳ ಮುಂದೆ ಎತ್ತಿದ್ದರೂ ಪರಿಸ್ಥಿತಿಯನ್ನು ಸರಿಪಡಿಸಲು ಏನೂ ಮಾಡಲಿಲ್ಲ. ಈಗ ದಿಲ್ಲಿ ಹೈಕೋರ್ಟ್ ಪೊಲಿಸ್ ತನಿಖೆಯ ವಿರುದ್ಧ ನೀಡಿರುವ ತೀರ್ಪಿನ ನಂತರವಾದರೂ ಈ ದಿಕ್ಕಿನಲ್ಲಿ ಒಂದು ಆರಂಭವನ್ನು ಮಾಡಬೇಕಾಗಿದೆ. ಈ ಕೇಸಿನಲ್ಲಿ ತಪ್ಪಿತಸ್ಥರಾದ ಪೋಲೀಸ್ ಅಧಿಕಾರಿಗಳ ಮೇಲೆ ಆರೋಪ ಪಟ್ಟಿ ಹಾಕಿ ವಿಚಾರಣೆ ನಡೆಸಬೇಕು ಮತ್ತು ಅನ್ಯಾಯದ ವರ್ತನೆಗಳಿಗೆ ಒಳಗಾಗಿರುವ ಈ ಇಬ್ಬರು ವ್ಯಕ್ತಿಗಳ ಮರುವಸತಿಗೆ ಕ್ರಮಗಳನ್ನು ಕೈಗೊಳ್ಳಬೇಕು.

ಕರಾವಳಿ ಸೌಹಾರ್ದ ರ್‍ಯಾಲಿಗೆ ಭರದ ಸಿದ್ಧತೆ

"ಹೊಡೆಯುವವರು ಬನ್ನಿರೋ ತಡೆವವರು ಬನ್ನಿರೋ"

ಪಿಣರಾಯಿ ಭೇಟಿಯನ್ನು ತಡೆಯುವ ಪ್ರಯತ್ನಕ್ಕೆ ವ್ಯಾಪಕ ಪ್ರತಿರೋಧ

ವಾಸುದೇವ ಉಚ್ಚಿಲ್


ಮಂಗಳೂರಿನಲ್ಲಿ ಪ್ರತಿಭಟನೆ

ಕರಾವಳಿಯ ಸೌಹಾರ್ದವನ್ನು ಕೆಡಿಸುವ ಹಿಂದುತ್ವವಾದಿ ಪಡೆಗಳು ಸಿಪಿಐ(ಎಂ) ಫೆಬ್ರವರಿ 25 ರಂದು ಮಂಗಳೂರಿನಲ್ಲಿ ಆಯೋಜಿಸಿರುವ 'ಕರಾವಳಿ ಸೌಹಾರ್ದ ರ್‍ಯಾಲಿ'ಯನ್ನು ವಿಫಲಗೊಳಿಸಲು ಸರ್ವಪ್ರಯತ್ನ ನಡೆಸುತ್ತಿದೆ. ಕೆಟ್ಟುಹೋಗಿರುವ ಕೋಮುಸೌಹಾರ್ದ ಹಾಗೂ ಶಾಂತಿಯನ್ನು ಮತ್ತೆ ಪ್ರತಿಷ್ಠಾಪಿಸಲು ಹಲವಾರು ವರ್ಷಗಳಿಂದಲೂ ಸಿಪಿಐ(ಎಂ) ಮತ್ತು ಎಡ ನಿಲುವಿನ ಸಂಘಟನೆಗಳು ಪ್ರತ್ನಿಸುತ್ತಾ ಬಂದಿದ್ದರೂ, ಸಂಘಪರಿವಾರದ ಹಿಂದೂತ್ವ ಪಡೆಗಳು ಅಲ್ಪಸಂಖ್ಯಾತರ ಮೇಲೆ, ಮಹಿಳೆಯರ ಮೇಲೆ, ದಲಿತರ ಮೇಲೆ ಅಲ್ಲದೆ ಹಿಂದೂತ್ವವನ್ನು ಒಪ್ಪದಿರುವ ಪ್ರಜ್ಞಾವಂತ ನಾಗರಿಕರ ಮೇಲೆ ಕರಾವಳಿಯಲ್ಲಿ ಪದೇ ಪದೇ ದಾಳಿಗಳನ್ನು ಮುಂದುವರಿಸಿವೆ. ಅನೈತಿಕ ಪೋಲೀಸ್‌ಗಿರಿ, ಯುವಕ ಯುವತಿಯರ ಸ್ನೇಹಕ್ಕೆ ಬಲವಂತದ ತಡೆ, ಮುಸ್ಲಿಂ ಹೆಣ್ಣು ಮಕ್ಕಳು ಬುರ್ಖಾ ಧರಿಸಿ ಶಾಲೆಗೆ ಹೋಗುವುದಕ್ಕೇ ತಕರಾರು, ಗೋಸಾಗಾಟ ಹಾಗೂ ಮಾರಾಟಗಾರರ ಮೇಲೆ ಹಲ್ಲೆ–ಇವು ಕರಾವಳಿಯ ದಿನನಿತ್ಯದ ವಿದ್ಯಮಾನಗಳು ಎಂಬಂತಾಗಿವೆ. ಬುದ್ಧಿ ಜೀವಿಗಳನ್ನು ಲೇವಡಿ ಮಾಡುವುದು, ಮುಸ್ಲಿಮರಿಗೆ ಹುಟ್ಟಿದವರೆಂದು ಕೀಳಾಗಿ ಅವಹೇಳನ ಮಾಡುವುದು – ಇವನ್ನು ಜನಪ್ರತಿನಿಧಿಗಳಾಗಿ ಇಂದು ಆಯ್ಕೆಯಾಗಿ ಬಂದವರೂ ಮಾಡಿಕೊಂಡು ಬಂದವರೇ ಕ್ರಿಮಿನಲ್ ಘಟನೆಗಳನ್ನು ಕೋಮುವಾರಾಗಿ ಧ್ರುವೀಕರಿಸಿ, ಅಲ್ಪಸಂಖ್ಯಾಕರ ಮೇಲೆ ಕ್ರಮಕೈಗೊಳ್ಳಲು ಪೋಲೀಸರನ್ನು ನಿರ್ದೇಶಿಸುವುದೂ ನಡೆದಿದೆ.

ಇದೇ ಹಿನ್ನೆಲೆಯಲ್ಲಿ ಅಪರಾಧ ಪ್ರಕರಣವೊಂದರಲ್ಲಿ ತಾವು ಬಯಸಿದಂತೆ ಕಾನೂನುಕ್ರಮ ಕೈಗೊಳ್ಳದಿದ್ದರೆ ಜಿಲ್ಲೆಗೇ ಬೆಂಕಿ ಹಚ್ಚುತ್ತೇವೆ ಎಂಬ ಮಾತನ್ನೂ ಆಡಿದ್ದಾರೆ. ಮಂಗಳೂರಿನ ಸಂಸದರಾದ ನಳಿನ್ ಕುಮಾರ್ ಕಟೀಲು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರಕಾರ ಬಂದಿದ್ದರೂ, ಕರಾವಳಿ ಜಿಲ್ಲೆಗಳಲ್ಲಿ ಕೋಮುಪ್ರಚೋದನೆ ನೀಡುವ ಕಲ್ಲಡ್ಕ ಪ್ರಭಾಕರ ಭಟ್ಟರನ್ನಾಗಲೀ, ಅಂಥದೇ ಕೃತ್ಯಗೈಯುತ್ತಿರುವ ಸಂಘಪರಿವಾರದ ಪ್ರಭೃತಿಗಳನ್ನಾಗಲೀ, ಹದ್ದುಬಸ್ತಿನಲ್ಲಿಡಲು ರಾಜ್ಯ ಸರಕಾರ ವಿಫಲವಾಗಿದೆ.

ಸಂಘ ಪರಿವಾರವನ್ನು ಹದ್ದುಬಸ್ತಿನಲ್ಲಿರಿಸಿದ ಕೇರಳ ಮುಖ್ಯಮಂತ್ರಿ:

ಕೇರಳದಲ್ಲಿ ಒಂದು ವರ್ಷದ ಹಿಂದೆ ಎಡಪ್ರಜಾಪ್ರಭುತ್ವರಂಗದ ಸರ್ಕಾರ ಬಂದ ಮೇಲೆ ಅಭಿವೃದ್ಧಿಯನ್ನು ಹಳಿಯಲ್ಲಿರಿಸುವ ಪ್ರಯತ್ನಗಳು ನಡೆದಿವೆ. ಸಾರ್ವಜನಿಕ ಪಡಿತರ, ಉದ್ಯೋಗ ಖಾತ್ರಿ, ಆದಿವಾಸಿ ಕಾರ್ಯಕ್ರಮಗಳನ್ನು ಬಲಪಡಿಸಲಾಗುತ್ತಿದೆ. ಅಲ್ಲಿ ಶಾಸನ ಸಭೆಗೆ ಪ್ರವೇಶಿಸುವಲ್ಲಿ ವಿಫಲವಾದರೂ, ಸಂಘಪರಿವಾರದ ಶಕ್ತಿಗಳು ಮುಸ್ಲಿಮರ ಮೇಲೂ ಕಮ್ಯೂನಿಸ್ಟರ ಮೇಲೂ ಕೊಲೆ, ಹಲ್ಲೆಗಳನ್ನು ತೀವ್ರವಾಗಿ ಮುಂದುವರಿಸಿವೆ. ಅದರಿಂದಾಗಿ ಎಡಪಕ್ಷಗಳ ಕಾರ್ಯಕರ್ತರು ದಶಕದಲ್ಲಿ ಮುನ್ನೂರಕ್ಕೂ ಮೀರಿ ಹತರಾಗಿದ್ದಾರೆ. ತಮ್ಮ ಕೊಲೆಗಡುಕತನ ಮರೆಮಾಚಲು, ಸಂಘಪರಿವಾರದ ಬೆಂಬಲಿಗರು (ಹೆಚ್ಚಾಗಿ ಬೇರೆ ಅಪರಾಧಿ ಕೃತ್ಯಗಳ, ಕೆಲವು ಸಂಘಪರಿವಾರದ ಆಂತರಿಕ ಮೇಲಾಟ–ದ್ವೇಷದ) ಕೊಲೆಯಾದ ಪ್ರಕರಣಗಳನ್ನೇ ಅತಿರಂಜಿತವಾಗಿ ಮಾಧ್ಯಮಗಳಲ್ಲಿ ಚಿತ್ರಿಸಿ ಎಡ–ಪ್ರಜಾಪ್ರಭುತ್ವರಂಗ, ಸಿಪಿಐ(ಎಂ) ಮತ್ತು ಮುಖ್ಯಮಂತ್ರಿ ಪಿನರಾಯಿ ವಿಜಯನ್ ಮೇಲೆ ಸಂಚುಕೋರರರೆನ್ನುವಂತೆ ಆರೋಪಗಳನ್ನು ಬಿತ್ತರಿಸಲಾಗುತ್ತಿದೆ. ಬೂರ್ಜ್ವಾ ಮಾಧ್ಯಮಗಳೂ ಅವನ್ನೇ ಚಿತ್ರಿಸುತ್ತಿವೆ. ಇತ್ತೀಚೆಗೆ ಕಣ್ಣೂರು ಜಿಲ್ಲೆಯಲ್ಲಿ ಆದ ಸಂಘರ್ಷದ ಬಳಿಕ ರಾಜ್ಯ ಸರಕಾರ ಮುಖ್ಯಮಂತ್ರಿ ನೇತೃತ್ವದಲ್ಲಿ ಸೌಹಾರ್ದ ಸ್ಥಾಪಿಸಲು ಇನ್ನಿಲ್ಲದ ಕಾರ್ಯಕ್ರಮ ಹಾಕಿಕೊಂಡಿದೆ. ಇತ್ತೀಚಿನ ಒಂದು ಪ್ರಕರಣದಲ್ಲಿ ಸಿಪಿಐ(ಎಂ) ಮೇಲೆ ಆಪಾದನೆ ಹಾಕಲೆಂದೇ ಒಬ್ಬಾತನ ಕೊಲೆಯ ಸಂಚು ಬಗ್ಗೆ ಗೊತ್ತಾಗಿ ಆತ ಪೋಲಿಸಿಗೆ ದೂರು ಕೊಟ್ಟ ಪ್ರಕರಣ ಬಯಲಾಗಿದೆ. ಇಂತಹ ಹಲವು ಪ್ರಕರಣಗಳನ್ನು ಬೂರ್ಜ್ವಾ ಮಾಧ್ಯಮಗಳೂ ಪ್ರಸಾರ ಮಾಡದೆ ಮುಚ್ಚಿ ಹಾಕುತ್ತವೆ. ಹಾಗಿದ್ದರೂ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಅವರನ್ನು ಕೇರಳ ರಾಜ್ಯ ಹೊರಗಡೆ ಪ್ರತಿರೋಧಿಸಲು ಸಂಘಪರಿವಾರ ಹಾಕಿಕೊಂಡ ಕಾರ್ಯಕ್ರಮದಂತೆ ಅವರ ಮಧ್ಯಪ್ರದೇಶದ ಭೇಟಿ ವೇಳೆಗೆ ಪ್ರತಿಭಟನೆ ನಡೆದಿದೆ. ಮಂಜೇಶ್ವರದ ಕಾರ್ಯಕ್ರಮಕ್ಕೆ ಬಂದಿದ್ದ ಮುಖ್ಯಮಂತ್ರಿ ವಿಜಯನ್ ಮಂಗಳೂರು ಜಂಕ್ಷನ್ ರೈಲ್ವೇ ನಿಲ್ದಾಣದಿಂದ ವಾಪಾಸಾಗುವ ವೇಳೆ ಅಲ್ಲೂ ಅವರು ಕರಿಬಾವುಟ ಪ್ರದರ್ಶಿಸಿದ್ದಾರೆ.

ಪಿಣರಾಯಿ ವಿಜಯನ್ ಭೇಟಿ ತಡೆಯಲು ಸಂಘಪರಿವಾರದ ಸಿದ್ಧತೆ:

ಫೆಬ್ರವರಿ 25ರ 'ಕರಾವಳಿ ಸೌಹಾರ್ದ ರ್‍ಯಾಲಿ'ಯ ಬಹಿರಂಗ ಸಭೆಯ ಭಾಷಣಕಾರರಾಗಿ ಪಿಣರಾಯಿ ವಿಜಯನ್ ಬರುವವರಿದ್ದಾರೆ. ಮಂಗಳೂರಿನಲ್ಲಿ ಸಂಘಪರಿವಾರದ ಕುಳಗಳಿಗೆ ಬುಡಕ್ಕೆ ಇರುವೆ ಕಚ್ಚಿದಂತಾಗಿದೆ. ಶತಾಯಗತಾಯ ಪಿಣರಾಯಿ ವಿಜಯನ್ ಭೇಟಿಯನ್ನು ನಿಲ್ಲಿಸಿಯೇ ಬಿಡುತ್ತೇವೆಂದು ಸಂಘಪರಿವಾರದ ಕಾರ್ಯಾಲಯದಲ್ಲಿ ಫೆಬ್ರವರಿ 21ರಂದು ತೀರ್ಮಾನವಾಗಿ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ವಿಶ್ವಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಭಜರಂಗದಳದ ಪ್ರಮುಖರ ಜೊತೆ ಸಂಸದ ನಳಿನ್ ಕುಮಾರ್ ಕಟೀಲು, ಕಾರ್ಕಳದ ಶಾಸಕ ಸುನಿಲ್ ಕುಮಾರ್ ಮತ್ತು ಆರೆಸ್ಸೆಸ್ ಮುಖಂಡರು ಈ ತೀರ್ಮಾನದಲ್ಲಿ ಭಾಗವಹಿಸಿದ್ದಾರೆಂದು ತಿಳಿದು ಬರುತ್ತದೆ. ಸಂವಿಧಾನಬದ್ಧವಾಗಿ ಪ್ರತಿಜ್ಞೆ ಕೈಗೊಂಡ ಶಾಸಕ, ಸಂಸದರು ಅದು ಹೇಗೆ ಇನ್ನೊಬ್ಬ ಸಂವಿಧಾನಿಕ ಪ್ರತಿನಿಧಿಯ ಸಂಚಾರ ಹಾಗೂ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುತ್ತಾರೆ ಎಂಬುದೇ ಸಾರ್ವಜನಿಕರು ಕೇಳುತ್ತಿರುವ ಪ್ರಶ್ನೆಯಾಗಿದೆ.

ಇದಕ್ಕೂ 3 ದಿನಗಳ ಹಿಂದೆಯೇ ವಿಶ್ವಹಿಂದೂ ಪರಿಷತ್ತಿನ ರಾಜ್ಯ ಕಾರ್ಯಾಧ್ಯಕ್ಷ ಪ್ರೊ.ಎಂ.ಬಿ.ಪುರಾಣಿಕ್ ಹಾಗೂ ಅವರೊಂದಿಗೆ ಹಿಂದೂ ಜಾಗರಣ ವೇದಿಕೆ ಮತ್ತು ಭಜರಂಗದಳದ ಪದಾಧಿಕಾರಿಗಳು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಫೆಬ್ರವರಿ 25 ರಂದು ಹರತಾಳಕ್ಕೆ ಕರೆನೀಡಿದ್ದರು. ಬಳಿಕ ಸಂಘನಿಕೇತನದಲ್ಲಿ ಸಂಸದ, ಶಾಸಕರಿದ್ದ ಸಭೆಯಲ್ಲೂ ಅದಕ್ಕೆ ಪೂರಕವಾದ ಕಾರ್ಯಕ್ರಮಗಳ ಚರ್ಚೆಯಾಗಿದ್ದು, ದ.ಕ.ಜಿಲ್ಲೆಯನ್ನೇ ಬಂದ್‌ಗೊಳಿಸುವುದೆಂದು ಸಾರಲಾಗಿದೆ. ಸಾರಿಗೆಯನ್ನು ನಿಲ್ಲಿಸಲಾಗುವುದೆಂದೂ, ವರ್ತಕರು ಅಂಗಡಿ ತೆರೆಯದಂತೆ ವಿನಂತಿಸಲಾಗುವುದೆಂದೂ ಕೋರಲಾಗಿದೆ. ಆದರೆ ಈ



ಒಂದು ರಾಜ್ಯದ ಮುಖ್ಯಮಂತ್ರಿ ಇನ್ನೊಂದು ರಾಜ್ಯಕ್ಕೆ ಬರುವುದನ್ನು ತಡೆಯುವುದು ನೋಡುವಾಗ ಅಚ್ಚರಿಯಾಗುತ್ತದೆ. ಅದೂ ದೇಶದ ಆಡಳಿತ ನಡೆಸುತ್ತಿರುವ ಬಿಜೆಪಿ ಪರಿವಾರ ಹೀಗೆ ಮಾಡಬಹುದಾ?! ಇದು ಯಾವ ಸಂದೇಶ ನೀಡುತ್ತದೆ? ಬಹುಷ ಸಂಘ ಪರಿವಾರ ಭಯಗೊಂಡಿರಬೇಕು. ಪಿನರಾಯಿ ಆಗಮನದಿಂದ ಕಮ್ಯುನಿಸ್ಟ್ ಚಳುವಳಿ ಬೆಳೆಯುವ ಆತಂಕವೂ ಇರಬಹುದು. ಏನೇ ಆದರೂ ಇದನ್ನು ಎಲ್ಲರೂ ಒಗ್ಗಟ್ಟಿನಿಂದ ವಿರೋಧಿಸಬೇಕು. ಸೌಹಾರ್ದ ಮೆರವಣಿಗೆಯಲ್ಲಿ ಪಾಲ್ಗೊಂಡು ಮತೀಯವಾದದ ವಿರುದ್ಧ ಧ್ವನಿ ಎತ್ತಬೇಕು.

–ಸಾರಾ ಅಬೂಬಕರ್



ಕೋಮುವಾದದ ವಿರುದ್ಧ, ಹಿಂದು ಮುಸ್ಲಿಂ ಸಹಬಾಳ್ವೆಯ ಉದ್ದೇಶದಿಂದ ಸಿಪಿಐ(ಎಂ) ಪಕ್ಷ ಪೆಬ್ರವರಿ 25 ರಂದು ಹಮ್ಮಿಕೊಂಡಿರುವ ಸೌಹರ್ದ ರ್‍ಯಾಲಿಯನ್ನು ನಾನು ಬೆಂಬಲಿಸುತ್ತೇನೆ, ಭಾಗವಹಿಸುತ್ತೇನೆ. ಸಮಾವೇಶದಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಗವಹಿಸುವುದನ್ನು ಸಂಘಪರಿವಾರ ನಿಷೇಧಿಸುತ್ತಿರುವುದು, ಅದೇ ದಿನ ಬಂದ್ ಆಚರಿಸುತ್ತಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾದದ್ದು, ಸಂವಿಧಾನದ ಒಕ್ಕೂಟ ವ್ಯವಸ್ಥೆಗೆ ಹಾನಿಯುಂಟು ಮಾಡುವಂತದ್ದು. ಇದನ್ನು ಬಿಜೆಪಿ, ಸಂಘಪರಿವಾರ ಅರ್ಥಮಾಡಿಕೊಳ್ಳಬೇಕು.

ಶರತ್ ಗುಡ್ಡಕೊಪ್ಪ, ಮೀನುಗಾರ ಮುಖಂಡ

ಕೋಮುಸೌಹಾರ್ದತೆ ಇಂದಿನ ಅವಶ್ಯಕತೆಯಾಗಿದೆ. ಜಾತಿ ಧರ್ಮಗಳ ನಡುವೆ ದ್ವೇಷದ ಬೆಂಕಿಯನ್ನು ಹಚ್ಚಿ ಅದರಲ್ಲಿ ಸಂತೋಷ ಪಡುವವರಿಗೆ ಪಿಣರಾಯಿ ವಿಜಯನ್ ಭಾಗವಹಿಸುವ ಕೋಮು ಸೌಹಾರ್ದ ರ್‍ಯಾಲಿ ಬೇಡವಾಗಿದೆ. ಅದಕ್ಕಾಗಿಯೇ ಸೌಹಾರ್ದ ಸಮಾವೇಶ, ರ್‍ಯಾಲಿ ಯಶಸ್ಸು ಕಾಣಬಾರದು ಎಂದು ಸಂಘಪರಿವಾರ ಫೆಬ್ರವರಿ 25 ರಂದು ಕಾರ್ಯಕ್ರಮದ ದಿನ ಬಂದ್‌ಗೆ ಕರೆಕೊಟ್ಟಿರುವುದು ದುರುದ್ದೇಶಪೂರ್ವಕವಾದದ್ದು. ಸೌಹಾರ್ದ ರ್‍ಯಾಲಿಗೆ ಜಿಲ್ಲೆಯ ಎಲ್ಲಾ ವಿಭಾಗದ ಜನರು ಬೆಂಬಲ ನೀಡಬೇಕಾಗಿದೆ. ನಾನು ಈ ಸಮಾವೇಶದಲ್ಲಿ ಭಾಗವಹಿಸುತ್ತೇನೆ. ನೀವೂ ಭಾಗವಹಿಸಿ...



ದಯಾನಾಥ ಕೋಟ್ಯಾನ್
ಹಿರಿಯ ವಕೀಲರು, ಮೊಗವೀರ ಸಮಾಜದ ಮುಖಂಡರು



ಸೌಹಾರ್ದತಾ ರ್‍ಯಾಲಿಗೆ ಬೆಂಬಲ, ಸಂಘ ಗ್ಯಾಂಗಿನ ಬೆದರಿಕೆಗೆ ಖಂಡನೆ

ಕೇರಳದ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಮಂಗಳೂರು ಭೇಟಿಯನ್ನು ವಿರೋಧಿಸಿ ಬಂದ್ ಗೆ ಕರೆಕೊಟ್ಟಿರುವುದು ನಾರಾಯಣ ಗುರುಗಳ ಚಿಂತನೆಗಳಿಗೆ ವ್ಯಕ್ತಪಡಿಸಿರುವ ಅಗೌರವ ಎಂದೇ ನಾನು ನಂಬಿದ್ದೇನೆ... ಕೇರಳದ ಕಮ್ಯುನಿಸ್ಟ್ ಚಳುವಳಿ ನಾರಾಯಣ ಗುರು ಚಳುವಳಿಯ ವಿಸ್ತರಣೆಯೆಂದೇ ನಾನು ನಂಬಿದವನು.

ಜನಾರ್ಧನ ಪೂಜಾರಿಯವರೇ, ನಿಜವಾಗಿ ಕುದ್ರೋಳಿಗೆ ಬರಮಾಡಿಕೊಳ್ಳಬೇಕಾಗಿರುವುದು ವರ್ಣಾಶ್ರಮ ವ್ಯವಸ್ಥೆಯ ಪ್ರತಿಪಾದಕರಾದ ಶೃಂಗೇರಿ ಮಠದ ಸ್ವಾಮಿಗಳು ಇಲ್ಲವೇ ಪ್ರಭಾಕರ ಭಟ್ಟರನ್ನಲ್ಲ, ನಾರಾಯಣ ಗುರುಗಳ ತತ್ವಗಳನ್ನು ರಾಜಕೀಯ ಅಧಿಕಾರದ ಮೂಲಕ ಅನುಷ್ಠಾನಕ್ಕೆ ತಂದು ಕೇರಳವನ್ನು ಸಾಕ್ಷರತೆಯಲ್ಲಿ, ಉದ್ಯಮಶೀಲತೆಯಲ್ಲಿ, ಪ್ರಗತಿಪರ ಧೋರಣೆಯಲ್ಲಿ ಮುಂಚೂಣಿ ಸ್ಥಾನದಲ್ಲಿ ತಂದು ನಿಲ್ಲಿಸಿರುವ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿರುವ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರನ್ನು

ಈ ಮೂಲಕ ಮಂಗಳೂರಿಗೆ ಆಗಮಿಸುತ್ತಿರುವ ಕೇರಳದ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರಿಗೆ ನನ್ನದೊಂದು ಸಣ್ಣ ಸ್ವಾಗತ.

–ದಿನೇಶ್ ಅಮಿನ್ ಮಟ್ಟು
(ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ)



ಕೋಟಿ ಚೆನ್ನಯ, ಕೋರ್ದಬ್ಬು ತನ್ನಿಮಾನಿಗ, ಕೊರಗತನಿಯದಂತ ದೈವಗಳ ಜೊತೆಗೆ ಆಲಿ ಭೂತ, ಬಬ್ಬರ್ಯದಂತ ಮುಸ್ಲಿಂ ದೈವಗಳನ್ನೂ ಸೇರಿಸಿಕೊಂಡು ಬೆಳೆದ ತುಳುನಾಡು ಒಂದು ಕಾಲಕ್ಕೆ ಸಹಬಾಳ್ವೆಗೆ ಹೆಸರಾದ ನೆಲ. ಆದರೆ ಅದೀಗ ತನ್ನ ಮೂಲ ಉದ್ದೇಶದಿಂದ ದೂರ ಸರಿಯುತ್ತಿದೆ. ಇಂಥ ಸಂದರ್ಭದಲ್ಲಿ ಗೆಳೆಯರೆಲ್ಲಾ ಐಕ್ಯತಾ ನಡೆಯೊಂದನ್ನು ಇದೇ ಫೆಬ್ರವರಿ 25 ಕ್ಕೆ ಮಂಗಳೂರಿನಲ್ಲಿ ಆಯೋಜಿಸುತ್ತಿದ್ದಾರೆ. ಕರಾವಳಿಯ ಮಾತ್ರವಲ್ಲ, ದೇಶದ ಉಳಿವಿಗೆ ಇಂಥ ನಡಿಗೆ ಅಗತ್ಯ. ಇದು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

– ಶ್ರೀ ಪುರುಷೋತ್ತಮ ಬಿಳಿಮಲೆ,
– ಪ್ರೊ. ಜೆಎನ್‌ಯು ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರು

ಬಿಲ್ಲವರು ಸೇರಿದಂತೆ ಶೋಷಿತ ಹಿಂದುಳಿದ ಸಮಾಜಗಳ ಪ್ರತಿನಿಧಿಯಾಗಿರುವ ಪಿಣರಾಯಿ ವಿಜಯನ್ ಅವರ ಆಗಮನ ವಿರುದ್ಧ ಸಂಘ ಪರಿವಾರ ಪ್ರತಿಭಟನೆಗೆ ಕರೆ ನೀಡಿರುವುದು ಸಾಮಾಜಿಕ ನ್ಯಾಯದ ವಿರೋಧಿ ಯಾಗಿದೆ. ಹಿಂದುಳಿದ ವರ್ಗಗಳು ಉನ್ನತ ಸ್ಥಾನಕ್ಕೇರುವುದನ್ನು ಸಹಿಸದ ಸಂಘ ಪರಿವಾರವು ಕಳೆದ ಒಂದು ದಶಕದಲ್ಲಿ ಕರಾವಳಿ ಕರ್ನಾಟಕದಲ್ಲಿ ಬಿಲ್ಲವರ ಯುವಕರನ್ನು ಜೈಲಿಗಟ್ಟಿದ್ದೇ ಅದರ ಸಾಧನೆ. ಈ ಮೂಲಕ ಬಿಲ್ಲವ ಸಮಾಜದ ಉತ್ತಮ ಭವಿಷ್ಯವನ್ನು ಹೊಸಕಿ ಹಾಕುತ್ತಿರುವ ಸಂಘ ಪರಿವಾರವು ಇದೀಗ ಪಿಣರಾಯಿ ವಿಜಯನ್ ಅವರ ಮಂಗಳೂರು ಭೇಟಿಗೆ ಅಡ್ಡಿಪಡಿಸುತ್ತಿರುವುದು ಅಕ್ಷಮ್ಯ ಅಪರಾಧವಾಗಿದೆ. ಫೆ.25ರಂದು ಮಂಗಳೂರು ನೆಹರು ಮೈದಾನದಲ್ಲಿ ನಡೆಯುತ್ತಿರುವ ಸಮಾವೇಶವು ಬಿಲ್ಲವರ ಸ್ವಾಭಿಮಾನದ ಸಮಾವೇಶವಾಗಿದ್ದು, ಬಿಲ್ಲವರು ಸಕ್ರಿಯವಾಗಿ ಇದರಲ್ಲಿ ಪಾಲ್ಗೊಂಡು ಸಾಮಾಜಿಕ ನ್ಯಾಯದ ವಿರೋಧಿಗಳಿಗೆ ತಕ್ಕ ಪಾಠ ಕಲಿಸಬೇಕು

– ರಕ್ಷಿತ್ ಸುವರ್ಣ ಕೈಕಂಬ
ದ.ಕ. ಜಿಲ್ಲಾ ಬಿಲ್ಲವ ಯೂನಿಯನ್ ಮುಖಂಡ

> ಕೋಮುವಾದದ ವಿರುದ್ಧ ಹೋರಾಟ ಯಾರೇ ಮಾಡಲಿ ಅದನ್ನು ನಾವು ಬೆಂಬಲಿಸುತ್ತೇವೆ. ಕರಾವಳಿಯಲ್ಲಿ ಕಮ್ಯುನಿಸ್ಟರು ಕೋಮುವಾದ ಮತ್ತು ಬಂಡವಾಳಶಾಹಿ ವಿರೋಧಿ ಹೋರಾಟಗಳನ್ನು ರಾಜಿಯಿಲ್ಲದೆ ನಡೆಸುತ್ತಾ ಬಂದಿದ್ದಾರೆ. ಸದಾ ಶೋಷಿತರ ಪರ ಇರುವ ಸಿಪಿಐ(ಎಂ) ಹಮ್ಮಿಕೊಂಡಿರುವ ಸೌಹಾರ್ದ ರ್‍ಯಾಲಿ ಮತ್ತು ಅದರಲ್ಲಿ ಕೇರಳ ಮುಖ್ಯಮಂತ್ರಿ ಬರುವುದನ್ನು ಬಂದ್ ಮೂಲಕ ಸಂಘಪರಿವಾರ ತಡೆಯಲೆತ್ನಿಸುವುದು ಖಂಡನೀಯ. ಇದು ಸಂವಿಧಾನದ ಆಶಯಗಳಿಗೆ ಧಕ್ಕೆ ತರುವಂತದ್ದು. ಇಂತಹ ಬೆದರಿಕೆಗಳನ್ನು ಜಿಲ್ಲೆಯ ಜನ ಒಗ್ಗಟ್ಟಿನಲ್ಲಿ ಹಿಮ್ಮೆಟ್ಟಿಸಬೇಕು. ಕೋಮುಶಕ್ತಿಗಳ ವಿರುದ್ಧ ಐಕ್ಯತೆಯನ್ನು ಕಾಪಾಡಬೇಕು.
>
> **ಎಂ. ದೇವದಾಸ್, ಹಿರಿಯ ದಲಿತ ಮುಖಂಡರು**

ಕರೆಕೊಟ್ಟಿರುವ ಸಂಘಟನೆಗಳು ಲಗಾಯ್ತಿನಿಂದ ವರ್ತಿಸಿರುವುದನ್ನು ನೋಡಿದರೆ, ಬಲವಂತದಿಂದಲೇ ಬಂದ್ ಮಾಡಿಸಲಾಗುವುದೆಂದು ಅರ್ಥಮಾಡಿಕೊಳ್ಳಬಹುದು.

ಜಿಲ್ಲಾಡಳಿತ ಮತ್ತು ರಾಜ್ಯ ಸರಕಾರದ ಪಾತ್ರ ಏನಿರಬೇಕು?

ಕರಾವಳಿ ಸೌಹಾರ್ದ ರ್‍ಯಾಲಿಯ ಸಿದ್ಧತೆಗಳೂ, ಅದನ್ನು ತಡೆಯಲು ಸಂಘಪರಿವಾರ ಮಾಡುತ್ತಿರುವ ಸಿದ್ಧತೆಗಳೂ ಜಿಲ್ಲಾಡಳಿತ ಹಾಗೂ ಗೃಹ ಇಲಾಖೆಯ ಗಮನಕ್ಕೆ ಬಂದಿವೆ. ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ, ಗೃಹಸಚಿವ ಜಿ.ಪರಮೇಶ್ವರ, ದ.ಕ.ಜಿಲ್ಲಾ ಉಸ್ತುವಾರಿ ಮಂತ್ರಿ ರಮಾನಾಥ ರೈ ಅವರ ಗಮನಕ್ಕೂ ತರಲಾಗಿದೆ. ಬೇರೆ ರಾಜ್ಯದ ಮುಖ್ಯಮಂತ್ರಿಯೊಬ್ಬರು ನಮ್ಮ ರಾಜ್ಯಕ್ಕೆ ಯಾವುದೇ ಕಾರ್ಯಕ್ರಮಕ್ಕೆ ಭೇಟಿಯಿತ್ತಾಗ ಅವರಿಗೆ ಭದ್ರತೆ ನೀಡುವುದು ಮತ್ತು ಅವರ ಕಾರ್ಯಕ್ರಮವನ್ನು ಜರಗಿಸಲು ಅವಕಾಶ ಕೊಡುವುದು ಜಿಲ್ಲಾಡಳಿತ, ಗೃಹ ಇಲಾಖೆ ಮತ್ತು ಸರ್ಕಾರದ ಕರ್ತವ್ಯವಾಗಿದೆ. ಇದರಲ್ಲಿ ಸರಕಾರ ಹಿಂದುಳಿಯಲೇ ಬಾರದು.

ರ್‍ಯಾಲಿಗಾಗಿ ಮಂಗಳೂರಿಗೆ ಬರುತ್ತಿರುವ ಪಿನರಾಯಿ ವಿಜಯನ್ ಅವರು 'ವಾರ್ತಾಭಾರತಿ' ಪತ್ರಿಕೆಯ ಕಚೇರಿ ಕಟ್ಟಡ ಶಂಕುಸ್ಥಾಪನಾ ಸಮಾರಂಭದಲ್ಲೂ, ಪ್ರಥಮ ಬಾರಿಗೆ ಮಂಗಳೂರಿನಲ್ಲಿ ಆರಂಭವಾಗಲಿರುವ ಸಹಕಾರಿ ಆರೋಗ್ಯ ಮತ್ತು ಸಂಶೋಧನಾ ಆಸ್ಪತ್ರೆಯ ಚಾಲನಾ ಕಾರ್ಯಕ್ರಮದಲ್ಲಿಯೂ ಭಾಗವಹಿಸುವವರಿದ್ದಾರೆ.

> #ದುಡಿಯುವ ಜನರ
> ವಿಜಯದ ಸಂಕೇತ
> ಪಿಣರಾಯ್ ವಿಜಯನ್
> ಮಂಗಳೂರು
> ಭೇಟಿ
> ನಡದೇ ತೀರುತ್ತದೆ.
> ಬೆಂಕಿ ಹಚ್ಚಿದರೂ
> ಪ್ಲೆಕ್ಸ್ ಕಿತ್ತು ಹಾಕಿದರೂ
> ಸೌಹಾರ್ದ ಐಕ್ಯತಾ ಸಮಾವೇಶ
> ಯಶಸ್ವಿಯಾಗಲಿದೆ
> ಯಾವ ಬೆದರಿಕೆಗೂ
> ಜಗ್ಗದೇ
> ಜನ ಸಾಗರ ಹರಿದು ಬರಲಿದೆ.

ರ್‍ಯಾಲಿಯನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ಸಿದ್ಧತೆಗಳು:

ಕರಾವಳಿ ಜಿಲ್ಲೆಗಳಲ್ಲಿ ಹಿಂದೂತ್ವವಾದದ ದಾಂದಲೆಗಳು ಕಾಸರಗೋಡಿನಿಂದ ಹಿಡಿದು ಭಟ್ಕಳದವರೆಗೂ ಚಾಚಿದೆ. ಅದಕ್ಕೆ ಪ್ರತಿಯಾಗಿ ಇತ್ತೀಚೆಗೆ ಮುಸ್ಲಿಂ ಕೋಮುವಾದಿ ಸಂಘಟನೆಗಳು ಹಲವು ರೂಪಗಳಲ್ಲಿ ಬೆದರಿಕೆಯೊಡ್ಡುತ್ತಿವೆ. ಹಾಗಾಗಿ ಮಂಗಳೂರಿನಲ್ಲಿ ನಡೆಯುತ್ತಿರುವ ರ್‍ಯಾಲಿಯನ್ನು ಯಶಸ್ವಿಗೊಳಿಸಲು ಕೇರಳದ ಕಾಸರಗೋಡು, ಕರ್ನಾಟಕದ ದ.ಕ., ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಂದಲೂ ಸಿಪಿಐ(ಎಂ) ಬೆಂಬಲಿಗರು ಭಾಗವಹಿಸುವುದೆಂದು ತೀರ್ಮಾನಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರಚಾರಗಳೂ ನಡೆದಿವೆ. ರ್‍ಯಾಲಿಯ ಪೂರ್ವಭಾವಿಯಾಗಿ ಫೆಬ್ರವರಿ 20ರ ಸಂಜೆ ಮಂಗಳೂರು ನಗರದಲ್ಲಿ 50 ಮಂದಿ ಯುವಕರು ಬೈಕ್‌ರ್‍ಯಾಲಿ ನಡೆಸಿದರು. ಜಿಲ್ಲಾಧಿಕಾರಿಗಳ ಕಚೇರಿಯಿಂದ ಆರಂಭವಾದ ಬೈಕ್ ರ್‍ಯಾಲಿಯನ್ನು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯಾದವ ಶೆಟ್ಟಿ ಉದ್ಘಾಟಿಸಿದರು. ದ.ಕ.ಜಿಲ್ಲೆಯಲ್ಲಿ ವ್ಯಾಪಕವಾಗಿ ಕರಪತ್ರ ಹಂಚಲಾಗಿದೆ. ಇತರ ಕರಾವಳಿ ಜಿಲ್ಲೆಗಳಲ್ಲೂ ವಿತರಣೆಯಾಗಿದೆ. ಮಲಯಾಳಿ ಭಾಷೆಯಲ್ಲಿ ಸಿದ್ಧಪಡಿಸಿದ ಕರಪತ್ರವನ್ನು ಕಾಸರಗೋಡಿನಲ್ಲಿ ಹಂಚಲಾಗಿದೆ. ಪೋಸ್ಟರುಗಳನ್ನು ಮಂಗಳೂರು ಮತ್ತು ಜಿಲ್ಲೆಯ ಊರುಗಳಲ್ಲಿ ಪ್ರದರ್ಶಿಸಲಾಗಿದೆ. ಹಿಂದೂತ್ವದ ಪಡೆಗಳು ಹರಿದು ಹಾಕಬಹುದೆಂಬ ಕಾರಣದಿಂದ ಕ್ಯಾಲೆಂಡರ್ ಹಾಗೂ ಪ್ಲೆಕ್ಸ್ ಭಿತ್ತಿಪತ್ರಗಳನ್ನು ಎರಡು ದಿನ ಮುಂಚೆ ಮಂಗಳೂರು ನಗರದಲ್ಲಿ ಪ್ರದರ್ಶಿಸಿ, ಕಾವಲು ನಡೆಸಲಾಗುವುದು. ಫೆಬ್ರವರಿ 23 ರಂದು ಪ್ರಚಾರಾರ್ಥವಾಗಿ ಮಂಗಳೂರು ನಗರದಲ್ಲಿ ಸಮವಸ್ತ್ರದಳದ ಮಾರ್ಚ್ ನಡೆಯಲಿರುವುದು.

ಸಂಘಪರಿವಾರದ ಪಡೆಗಳು ವಾಹನ ಸಂಚಾರ ಇಲ್ಲವಾಗಿಸಿದಲ್ಲಿ ಸೌಹಾರ್ದದ ಬೆಂಬಲಿಗರು ಕಾಲ್ನಡೆಯಲ್ಲೂ ಹೊರವಲಯದಿಂದ ಮಂಗಳೂರು ನಗರಕ್ಕೆ ಸಾಗಿ ಬರಲು ಸ್ವಯಂ ಸೇವಕರು ವ್ಯವಸ್ಥೆ ಮಾಡಲಿದ್ದಾರೆ. ದೂರದ ಊರುಗಳಿಂದ ಪಕ್ಷದ ಕಾರ್ಯಕರ್ತರು ವಾಹನ ಗೊತ್ತುಮಾಡಿಕೊಂಡೇ ರ್‍ಯಾಲಿ ಹಾಗೂ ಸಾರ್ವಜನಿಕ ಸಭೆಗೆ ಬರಲು ಸಕಲ ಸಿದ್ಧತೆಗಳು ನಡೆದಿವೆ. ನೆಹರೂ ಮೈದಾನ ಮತ್ತು ನಗರ ಕೇಂದ್ರವನ್ನು ಕೆಂಬಾವುಟಗಳಿಂದ ಆಲಂಕರಿಸಿ ರ್‍ಯಾಲಿಯನ್ನು ಸ್ವಾಗತಿಸಲಾಗುವುದು.

ಹಿಂದೂತ್ವದಿಂದ ಮತ್ತೆ ಗೂಂಡಾಗಿರಿ – ಉಳ್ಳಾಲ ಸಿಪಿಐ(ಎಂ) ಕಚೇರಿಗೆ ಅಗ್ನಿಸ್ಪರ್ಶ:

ಈ ವರದಿ ಸಿದ್ಧಪಡಿಸುವ ಹಂತದಲ್ಲಿ ಬಂದ ವರದಿ ಇದು. ಫೆಬ್ರವರಿ 22ರ ರಾತ್ರಿ ತೊಕ್ಕೋಟಿನಲ್ಲಿರುವ ಸಿಪಿಐ(ಎಂ) ಉಳ್ಳಾಲ ವಲಯ ಕಚೇರಿ ಬಾಗಿಲನ್ನು ಮುರಿದು ಒಳಹೊಕ್ಕ ದುಷ್ಕರ್ಮಿಗಳು ಸೌಹಾರ್ದ ರ್‍ಯಾಲಿಯ ಪ್ರಚಾರಕ್ಕಾಗಿ ಸಿದ್ಧಪಡಿಸಿದ ಪಿಣರಾಯಿ ವಿಜಯನ್ ಅವರ ಚಿತ್ರವನ್ನೊಳಗೊಂಡ ಪ್ಲೆಕ್ಸ್ ಬ್ಯಾನ್ನರುಗಳಿಗೆ ಪೋಸ್ಟರುಗಳಿಗೆ ಬೆಂಕಿ ಹಚ್ಚಿ ನಾಶ ಮಾಡಿರುತ್ತಾರೆ. ಕಚೇರಿಯ ಪೀಠೋಪಕರಣಗಳಿಗೂ ಬೆಂಕಿಯಿಂದ ಹಾನಿಯುಂಟಾಗಿದೆ. ಮರುದಿನ ಫೆಬ್ರವರಿ 23ರ ಬೆಳಿಗ್ಗೆ ಎಲ್ಲರ ಗಮನಕ್ಕೆ ಬಂದಿದೆ. ಈ ಬಗ್ಗೆ ಸ್ಥಳೀಯ ಪೋಲೀಸ್ ಠಾಣೆಗೂ ಮಂಗಳೂರು ಪೋಲೀಸ್ ಕಮಿಷನ್‌ರವರಿಗೂ ದೂರು ಸಲ್ಲಿಸಲಾಗಿದೆ. ಸಂಘಪರಿವಾರದ ಕಾಲಾಳುಗಳು ಎಂಥ ಕೇಡಿಗಳು ಎಂದು ಇದರಿಂದ

ಪುಟ 10 ಕ್ಕೆ



> ಮಂಗಳೂರಿನಲ್ಲಿ ಪ್ರಗತಿಪರ ಪಕ್ಷಗಳು ಏರ್ಪಡಿಸಿರುವ ಸೌಹಾರ್ದತಾ ರ್‍ಯಾಲಿಯನ್ನು ಬಲಪಂಥೀಯ ಸಂಘಟನೆಗಳು ವಿರೋಧಿಸುತ್ತಿರುವುದು ನಿರೀಕ್ಷಿತವೇ ಆಗಿದೆ. ಏಕೆಂದರೆ ದಶಕದಿಂದ ಮಂಗಳೂರು ಹಾಗೂ ಕರಾವಳಿಯನ್ನೂ ಇನ್ನೊಂದು ಗುಜರಾತ್ ಮಾಡಲು ನಿರಂತರವಾಗಿ ಅವು ಪ್ರಯತ್ನ ಮಾಡುತ್ತಲೇ ಬಂದಿವೆ. ಆದರೆ ನೆರೆ ರಾಜ್ಯದ ಮುಖ್ಯಮಂತ್ರಿಯವರು ಬರುವುದನ್ನು ವಿರೋಧಿಸುತ್ತಿರುವುದು ಮಾತ್ರವಲ್ಲ ಈಗಾಗಲೇ ದೊಂಬಿ, ಹಿಂಸೆಯನ್ನು ಆರಂಭಿಸಿರುವುದು ಖಂಡನೀಯ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾದ ಭಾರತದ ರಾಷ್ಟ್ರದಲ್ಲಿ ಅಧಿಕಾರದಲ್ಲಿರುವ ಬಿ.ಜೆಪಿ. ವಿಶ್ವವು ತನಗೆ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇಲ್ಲವೆನ್ನುವುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ. ಕಳೆದ ವಾರದೊಳಗೆ ರಾಜಸ್ಥಾನದ ವಿಶ್ವವಿದ್ಯಾನಿಲಯ ಹಾಗೂ ದೆಹಲಿ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ತನ್ನ ಸಂಘಟನೆಯ ಮೂಲಕ ಹಲ್ಲೆ ಮಾಡಿಸಿದೆ. ಶಿಕ್ಷಕರ ಮೇಲೆ ದೈಹಿಕ ಹಿಂಸೆ ಮಾಡಿಸಿದೆ. ಒಂದು ಕಡೆಗೆ ಚುನಾವಣೆಗಳ ಮೂಲಕ ಪ್ರಜಾಪ್ರಭುತ್ವದಲ್ಲಿ ಅಧಿಕಾರ ಪಡೆಯಲು ಪ್ರಯತ್ನಿಸುತ್ತ ಇನ್ನೊಂದು ಕಡೆಗೆ ಅದೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹಿಂಸೆಯ ಮೂಲಕ ನಾಶಮಾಡುತ್ತಿರುವ ಈ ಪಕ್ಷವು ಮಂಗಳೂರಿನಲ್ಲಿ ಮತ್ತೆ ಹಿಂಸಾಚಾರದಲ್ಲಿ ತೊಡಗದಂತೆ ಸರಕಾರವು ನಿಗಾವಹಿಸಬೇಕಾಗಿದೆ.
>
> **– ರಾಜೇಂದ್ರ ಚೆನ್ನಿ**

'ಹಿಂದುಗಳ' ಕೊಲೆ ಮಾಡಿವರು ಯಾರು?

ಮಂಗಳೂರು ಬಂದ್ ಘೋಷಿಸಿರುವ ಸಂಬಂಧ ನಡೆಸಿದ್ದ ಪ್ರೆಸ್ ಮೀಟ್'ನಲ್ಲಿ ಶ್ರೀರಾಮ ಸೇನೆ ಆಡಿದ ಮಾತುಗಳನ್ನು ಗಮನಿಸಿದರೆ, ಇದು ಕೇವಲ ವಿರೋಧಿಸಲಿಕ್ಕಾಗಿ ವಿರೋಧ ಅನ್ನುವುದು ಸ್ಪಷ್ಟವಾಗುತ್ತದೆ. ಕಮ್ಯುನಿಸ್ಟರಿಂದ ತುಳುನಾಡಿನ ಜನಕ್ಕೆ ಹಲವು ಉಪಕಾರಗಳಾಗಿವೆ ಎಂದು ಪ್ರೆಸ್ ಮೀಟ್'ನಲ್ಲಿ ಸೇನೆಯ ಸದಸ್ಯರು ಒಪ್ಪಿಕೊಂಡಿದ್ದಾರೆ. ಗೇಣಿದಾರರಿಗೆ ಭೂಮಿ ಕೊಡಿಸಿದ್ದು, ಬೀಡಿ ಕಟ್ಟುವ ಮಹಿಳೆಯರಿಗೆ ಸವಲತ್ತುಗಳನ್ನು ಕೊಡಿಸಿದ್ದು ಇತ್ಯಾದಿ ಕ್ರೆಡಿಟ್ ಕಮ್ಯುನಿಸ್ಟರಿಗೇ ಸಲ್ಲಬೇಕೆಂದು ಅವರು ಹೇಳಿದ್ದಾರೆ. ಅಷ್ಟಾದರೂ ಅವರು ಕಮ್ಯುನಿಸ್ಟರ ಐಕ್ಯತಾ ರ್‍ಯಾಲಿಯನ್ನು ವಿರೋಧಿಸುತ್ತಾರಂತೆ!! ಯಾಕೆ ಅನ್ನುವ ಪ್ರಶ್ನೆಗೆ ಕೇರಳದಲ್ಲಿ ಹಿಂದೂಗಳ ಕೊಲೆಯಾಗಿದೆ, ಆ ರಾಜ್ಯದ ಮುಖ್ಯಮಂತ್ರಿಯ ಆಗಮನಕ್ಕೆ ನಮ್ಮ ವಿರೋಧವಿದೆ ಅನ್ನುತ್ತಾರೆ.

ಹೌದು. ಕೇರಳದಲ್ಲಿ ಹಿಂದೂಗಳ ಕೊಲೆಯಾಗಿದೆ. ಸಂಘಪರಿವಾರಿಗಳ ಕೈಲಿ ನೂರಾರು ಸಿಪಿಐ(ಎಂ) ಕಾರ್ಯಕರ್ತರ ಕೊಲೆಯಾಗಿದ್ದು, ಅವರಲ್ಲಿ ಶೇ.90ಕ್ಕಿಂತಲೂ ಹೆಚ್ಚು ಹಿಂದೂಗಳೇ ಜೀವತೆತ್ತವರಿದ್ದಾರೆ. ಹಾಗಾದರೆ ಇವರು ವಿರೋಧಿಸಬೇಕಿರುವುದು ಯಾರನ್ನು? ಅಷ್ಟನ್ನೂ ಯೋಚಿಸುವ ವ್ಯವಧಾನ ಇಲ್ಲದ ಶ್ರೀರಾಮ ಸೇನೆ ಮತ್ತಿತರ ಹಿಂದುತ್ವವಾದಿ ಸಂಘಟನೆಗಳು ಕುರುಡಾಗಿ ವರ್ತಿಸುತ್ತಿವೆ. (ಮಾಧ್ಯಮನೆಟ್ ಲೇಖನದಿಂದ)

ಸಂಘಪರಿವಾರ, ವಿಶ್ವ ಹಿಂದು ಪರಿಷತ್, ಭಜರಂಗದಳ, ಬಿಜೆಪಿ ಕಾರ್ಯಕರ್ತರಿಂದ ದಕ್ಷಿಣ ಕನ್ನಡ, ಉಡುಪಿಯಲ್ಲಿ

ಕೊಲೆಗೀಡಾದ 'ಹಿಂದುಗಳ' ಪಟ್ಟಿ

1. ವಿನಾಯಕ ಬಾಳಿಗಾ
(ಬಿಜೆಪಿ ಕಾರ್ಯಕರ್ತ, ಮಾಹಿತಿ ಹಕ್ಕು ಕಾರ್ಯಕರ್ತ, ಮಹಾನ್ ದೈವಭಕ್ತ)
2. ಪ್ರವೀಣ್ ಪೂಜಾರಿ ಉಡುಪಿ, (ಬಿಜೆಪಿಯ ಬೂತ್ ಪ್ರಮುಖ)
3. ಕೃಷ್ಣಯ್ಯ ಪಾಟಾಳಿ ಕುಂದಾಪುರ, (ದೇವಸ್ಥಾನದ ಪೂಜಾರಿ)
4.ಪ್ರತಾಪ್ ಮರೋಳಿ, (ಹಿಂದು ಜಾಗರಣಾ ವೇದಿಕೆ ಕಾರ್ಯಕರ್ತ)
5. ಭಾಸ್ಕರ್ ಕುಂಬ್ಳೆ, (dyfi ಕಾರ್ಯಕರ್ತ, ಕಾನೂನು ವಿದ್ಯಾರ್ಥಿ)
6. ಶ್ರೀನಿವಾಸ್ ಬಜಾಲ್, (dyfi ಕಾರ್ಯಕರ್ತ)
7. ಹರೀಶ್ ಭಂಡಾರಿ ಕುಳಾಯಿ
(ಅಮಾಯಕ ಯುವಕ, ಯಾವುದೇ ರಾಜಕೀಯ ಸಂಘಟನೆ ಕಾರ್ಯಕರ್ತನಲ್ಲ)
8. ಶಿವರಾಜ್ ಕೋಡಿಕೆರೆ, (ಹಿಂದು ಜಾಗರಣಾ ವೇದಿಕೆ ಕಾರ್ಯಕರ್ತ)
9. ಪ್ರಕಾಶ್ ಕುಳಾಯಿ, (ಹಿಂದು ಜಾಗರಣ ವೇದಿಕೆ ಕಾರ್ಯಕರ್ತ)
10. ಮಣಿಕಂಠ ಸುರತ್ಕಲ್, (ಹಿಂದು ಜಾಗರಣ ವೇದಿಕೆ ಕಾರ್ಯಕರ್ತ)
11. ಹೇಮಂತ್ ಸುರತ್ಕಲ್, (ಹಿಂದು ಜಾಗರಣ ವೇದಿಕೆ ಕಾರ್ಯಕರ್ತ)
12. ಕೇಶವ ಪೂಜಾರಿ ಸೂರಿಂಜೆ, (ಬಿಜೆಪಿ ಮುಖಂಡ)
13. ಹರೀಶ್ ಪೂಜಾರಿ ಬಂಟ್ವಾಳ, (ಅಮಾಯಕ ಯುವಕ)

(ಇದರಲ್ಲಿ ಕೆಲವು ಪಕ್ಷದೊಳಗಡೆ ತಮ್ಮ ಅಕ್ರಮಗಳನ್ನು ಪ್ರಶ್ನಿಸಿದ್ದಕ್ಕಾಗಿ ನಡೆದ ಕೊಲೆಗಳಾದರೆ, ಕೆಲವು ಸಂಘಟನೆಯ ಒಳಗಡೆ ಹಣ, ನಾಯಕತ್ವದ ಹಪಾಹಪಿಯಲ್ಲಿ ಪರಸ್ಪರ ನಡೆದ ಕೊಲೆ.)



ಬೆಂಕಿ ಹಚ್ಚಿದ್ದು ಕಛೇರಿಗಲ್ಲ ಜನ ಕನಸುಗಳಿಗೆ..*

ಇದೇನಾ ನಿಮ್ ಭಾರತೀಯ ಸಂಸ್ಕೃತಿಯ ಲಕ್ಷಣ. ನೀವು ಸುಟ್ಟು ಬೂದಿ ಮಾಡಿದ್ದು ಕೇವಲ ಕಛೇರಿಯಲ್ಲ. ನಿಮ್ಮ ಸರ್ಕಾರದ ಎದುರು ಬಡವರು ದೈನ್ಯದಿಂದ ಅರುಹಿಕೊಂಡ ಮನೆ ನಿವೇಶನ ಹಾಗೂ ಕಾರ್ಮಿಕರ ಮಕ್ಕಳ ಸ್ಕಾಲರ್ ಶಿಪ್ ಫಾರ್ಮ್ ಹಾಗೂ ಜನಚಳುವಳಿಯ ಮುನ್ನಡೆಯ ದಾಖಲೆಗಳು. ಕಛೇರಿ ಗೆ ಬೆಂಕಿ ಹಾಕಿದ್ದಾರೆಂದು ಸುದ್ದಿ ತಿಳಿಯುತ್ತಿದ್ದಂತೆ ನೂರಾರು ಜನ ರೈತ ಕಾರ್ಮಿಕರು ಅದರ ರಕ್ಷಣೆಗೆ ಧಾವಿಸಿದರು. ಅವರು ಹೇಳಿದ್ದಿಷ್ಟು ಕೇಳಿಸಿಕೊಳ್ಳಿ..."*ಅದು ಕಾರ್ಮಿಕರ ಪರ ಹೋರಾಟ ಮಾಡುವ ಪಕ್ಷ, ಆ ಕಛೇರಿಯಲ್ಲಿ ನಿವೇಶನ ರಹಿತರ ಎಷ್ಟೋ ಅರ್ಜಿಗಳಿತ್ತು, ವೃದ್ಧಾಪ್ಯದ ವೇತನ ಕ್ಕಾಗಿ ಅರ್ಜಿ ಸಲ್ಲಿಸಿದ ಅಮ್ಮಂದಿರ ಅರ್ಜಿಗಳಿತ್ತು,ಕಾರ್ಮಿಕರ ಸವಲತ್ತಿನ ಕಾಗದಗಳಿತ್ತು...

ಇವರು ಬೆಂಕಿ ಹಚ್ಚಿದ್ದು ಕಛೇರಿಗಲ್ಲ ಜನ ಕನಸುಗಳಿಗೆ..

*ಇವರು ಮನುಷ್ಯರಲ್ಲ ಎಂದು. ಆದರೂ ನಿಮ್ಮ ಅಸಹಿಷ್ಣುತೆಗೆ ಬೆದರಿಕೆಗೆ ಬೆಂಕಿಗೆ ಬೆಚ್ಚುವದಿಲ್ಲ. ನಮ್ಮ ಮನದಲ್ಲಿಯ ಬೆಂಕಿ ನಮ್ಮನ್ನು ಇನ್ನಷ್ಟು ಮನುಷ್ಯರನ್ನಾಗಿ ಮಾಡುತ್ತದೆ.



ಕರಾವಳಿ ಸೌಹಾರ್ದ ರ್‍ಯಾಲಿಗೆ ಭರದ ಸಿದ್ಧತೆ.......... ಪುಟ 9 ರಿಂದ

ಅರ್ಥವಾಗುವುದಿಲ್ಲವೇ?

ವಾಹನ ಪ್ರಚಾರ ಜಾಥಾ

ಫೆಬ್ರವರಿ 25 ರಂದು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಮಂಗಳೂರಿನ ನೆಹರೂ ಮೈದಾನಿನಲ್ಲಿ ಹಮ್ಮಿಕೊಂಡಿರುವ ಕರಾವಳಿ ಸೌಹಾರ್ದ ರ್‍ಯಾಲಿಯನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ಪಕ್ಷದ ವತಿಯಿಂದ ಮೂರು ದಿನಗಳ ವಾಹನ ಪ್ರಚಾರ ಜಾಥಾವನ್ನು ದ.ಕ.ಜಿಲ್ಲಾದ್ಯಂತ ಹಮ್ಮಿಕೊಂಡಿದ್ದು, ಫೆಬ್ರವರಿ 23ರಂದು ಮಂಗಳೂರಿನ ಸೆಂಟ್ರಲ್ ಮಾರ್ಕೆಟ್ ಬಳಿ ಉದ್ಘಾಟಿಸಲ್ಪಟ್ಟಿತು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್‍ಯದರ್ಶಿ ಮಂಡಲಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಜಾಥಾವನ್ನು ಉದ್ಘಾಟಿಸಿ ಮಾತನಾಡಿದರು. ನಮ್ಮ ಕರಾವಳಿ ಜಿಲ್ಲೆಗಳು ಶತಮಾನದಿಂದ ಶಾಂತಿ ಸೌಹಾರ್ದದ ಬೀಡಾಗಿ–ತ್ತು. ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ರೈತರು, ಕಾರ್ಮಿಕರು ಸಂಘಟನೆಗಳನ್ನು ಕಟ್ಟಿ ತಮ್ಮ ಹಕ್ಕು ಸವಲತ್ತುಗಳಿಗಾಗಿ ಹೋರಾಟಗಳನ್ನು ನಡೆಸುವುದರ ಮೂಲಕ ಜಿಲ್ಲೆಯ ಜನರಲ್ಲಿ ಐಕ್ಯತೆ ಇನ್ನಷ್ಟು ಬಲಿಷ್ಟಗೊಳ್ಳುತ್ತಾ ಹೋಯಿತು. ಜಾತಿಮತಗಳಲ್ಲಿ ದೇಶವನ್ನು ವಿಭಜಿಸಲು ನೋಡುವ ಕೋಮುವಾದಿ ಸಂಘಟನೆಗಳಿಗೆ ಇದನ್ನು ಸಹಿಸಲಿಕ್ಕಾಗಲಿಲ್ಲ. ಅವರು ಧರ್ಮದ ಹೆಸರಿನಲ್ಲಿ ಸಂಘಟನೆಗಳನ್ನು ಕಟ್ಟಿ ಕಾರ್‍ಯಕ್ರಮ ರೂಪಿಸಿ ಜನತೆಯನ್ನು ಹಿಂದೂ–ಮುಸ್ಲಿಂ–ಕ್ರೈಸ್ತ ಎಂದು ಒಡೆಯುತ್ತಿದ್ದಾರೆ. ಇದರಿಂದಾಗಿ ದ.ಕ.ಜಿಲ್ಲೆಯಲ್ಲಿ ಕೋಮುವಾದ ಹೆಚ್ಚಾಗುತ್ತಿದೆ; ಕೋಮುವಾದೀ ಘರ್ಷಣೆಗಳೂ ನಡೆದಿವೆ ಎಂದು ಅವರು ಹೇಳಿದರು.

ಉದ್ಘಾಟನಾ ಸಮಾರಂಭದಲ್ಲಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್‍ಯದರ್ಶಿ ವಸಂತ ಆಚಾರಿ, ಜಿಲ್ಲಾ ಸಮಿತಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು, ವಾಸುದೇವ ಉಚ್ಚಿಲ ಭಾಗವಹಿಸಿದ್ದರು. ಯುವಜನ ಮುಖಂಡರಾದ ಬಿ.ಕೆ.ಇಮ್ತಿಯಾಜ್, ಸಂತೋಷ್ ಶಕ್ತಿನಗರ, ಸಂತೋಷ್ ಬಜಾಲ್, ನವೀನ್ ಕೊಂಚಾಡಿ ಮತ್ತಿತರರು ಜಾಥಾ ತಂಡದಲ್ಲಿದ್ದರು.

ಸೌಹಾರ್ದ ರ್‍ಯಾಲಿಯ ಯಶಸ್ಸೊಂದೇ ಕರಾವಳಿಯ ಶಾಂತಿಯ ಭರವಸೆ:

ಸಂಘಪರಿವಾರದ ಹೇಳಿಕೆ ಐದಾರು ದಿನಗಳಿಂದ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದಂತೆಯೇ ಕರಾವಳಿಯ ಪ್ರಜ್ಞಾವಂತ ಜನ ಆತಂಕಕ್ಕೀಡಾಗಿದ್ದಾರೆ. ಈ ಹರತಾಳದ ಬೆದರಿಕೆ, ಮುಂದೆ ಕರಾವಳಿಯನ್ನು ಎಲ್ಲಿಗೆ ತಲುಪಿಸಲಿದೆ ಎಂದು ಪಕ್ಷದ ಮುಖಂಡರನ್ನೂ, ಚಳುವಳಿಗಾರರನ್ನೂ ಪ್ರಶ್ನಿಸುತ್ತಿದ್ದಾರೆ. ಸಿಪಿಐ, ದಲಿತ ಸಂಘರ್ಷ ಸಮಿತಿಗಳು, ಮಹಿಳಾ, ದಲಿತ, ಆದಿವಾಸಿ, ಯುವಜನ, ವಿದ್ಯಾರ್ಥಿ ಸಂಘಟನೆಗಳು ರ್‍ಯಾಲಿಗೆ ತಮ್ಮ ಸಂಪೂರ್ಣ ಬೆಂಬಲ ಘೋಷಿಸಿವೆ. ರೈತ ಕಾರ್ಮಿಕ ಸಂಘಟನೆಗಳೂ ಪಾಲ್ಗೊಳ್ಳುತ್ತಿವೆ.

ಕವಿ ಗೋಪಾಲಕೃಷ್ಣ ಅಡಿಗರ ಕವಿತೆಯ ಸಾಲುಗಳು ಹುಟ್ಟಿರುವ ಆವೇಶವನ್ನು ನೆನಪಿಸುತ್ತಿದೆ.

ಹೊಡೆಯುವವರು ಬನ್ನಿರೋ ತಡೆವವರು
ಬನ್ನಿರೋ
ಕೆಡೆ ನುಡಿವ ಕೆಡೆ ಬಗೆವ ಕೆಡುಕು ಜನರೇ ಬನ್ನಿ
ಕೊಟ್ಟೆವಿದೋ ವೀಳೆಯವನು
ನಿಮ್ಮೆಲರನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು ರಸದ
ಬೀಡೊಂದನು.

ಪಿಣರಾಯಿ ಭೇಟಿ ಬಗ್ಗೆ ಸಂಘಿಗಳಿಗೆ ಏಕಿಷ್ಟು ಭಯ?

ಕೇಸರಿ ಪಡೆಯ ಈ ಜಿದ್ದಿನ ಹಿಂದೆ ಸಂಘಪರಿವಾರದ ಹುನ್ನಾರವಿದೆ. ದಕ್ಷಿಣ ಕರಾವಳಿಯಲ್ಲಿ ಅದು ಹಿಂದುತ್ವದ ಅಫೀಮು ತಿನ್ನಿಸಿ ಬಿಲ್ಲವ ಸಮುದಾಯವೂ ಸೇರಿದಂತೆ ತಳಸುಮುದಾಯಗಳ ಯುವಕರನ್ನು ಬಲೆಗೆ ಹಾಕಿಕೊಂಡಿದೆ. ಆ ಯುವಕರು ಮೇಲ್ವರ್ಗದ ಮರ್ಜಿಗೆ ತಕ್ಕಂತೆ ಕುಣಿಯುತ್ತಾ ಹೊಡೆದಾಟಗಳಲ್ಲಿ ಮುನ್ನುಗ್ಗಿ ಬಲಿಯಾಗಿ ಹೋಗುತ್ತಿದ್ದಾರೆ. ಈ ಸಂದರ್ಭದಲ್ಲಿ ಬಿಲ್ಲವ ಸಮುದಾಯದ ಶ್ರೇಣಿಯಲ್ಲೇ ಬರುವ ಈಳವ ಸಮುದಾಯದಿಂದ ಮುಖ್ಯಮಂತ್ರಿಯಾಗಿ ಹೊಮ್ಮಿರುವ ಪಿಣರಾಯಿ ವಿಜಯನ್ ಪರಿವಾರಕ್ಕೆ ಪ್ರಮುಖ ಶತ್ರು. ಅವರ ಪ್ರಭಾವ, ವರ್ಚಸ್ಸುಗಳು ಕರಾವಳಿಯ ಬಿಲ್ಲವ ಯುವಕರನ್ನು ಸೆಳೆದರೆ ವೋಟ್ ಬ್ಯಾಂಕ್ ಮಾತ್ರವಲ್ಲ, ಗೂಂಡಾಗಿರಿಯಿಂದ ಕಾಯ್ದಿಟ್ಟುಕೊಳ್ಳಲು ಯತ್ನಿಸ್ತಿರುವ ಹಿಡಿತವೂ ತಪ್ಪುತ್ತದೆ. ಇದು ಸಂಘ ಪರಿವಾರದ ಬಹುಮುಖ್ಯ ಆತಂಕ. (ಮಾಧ್ಯಮನೆಟ್ ಲೇಖನದಿಂದ)

ರಾಜಕೀಯ ಆಟ ಮೇಲಾಟ, ಸಂಘರ್ಷ ಮತ್ತು ಕೋಮು ವೈಷಮ್ಯಗಳಲ್ಲಿ ಮಾತ್ರವೇ ಕಾಲಾಳುಗಳಾಗಿ ಬಳಕೆಯಾಗುತ್ತಿರುವ ಬಿಲ್ಲವ ಸಮುದಾಯಕ್ಕೆ ಪಿನರಾಯಿ ಭೇಟಿ ಅದರ ಅಗಾಧ ರಾಜಕೀಯ ಸಾಧ್ಯತೆಗಳ ದೃಷ್ಟಿಯಿಂದ ಬಹಳ ಮಹತ್ವದ್ದಾದದ್ದು. ಇದೇ ಕಾರಣಕ್ಕಾಗಿ ಸಂಘಪರಿವಾರ ಪಿನರಾಯಿ ವಿಜಯನ್ ಗೆ ಪ್ರತಿಭಟನೆಯ ಮೂಲಕ ಸ್ವಾಗತಕೋರಲು ಸಿದ್ಧತೆ ನಡೆಸಿದೆ.

ಬ್ಯಾಂಕ್, ಆಸ್ಪತ್ರೆ ಕಟ್ಟಿಸಿದ ಉಡುಪಿಯ ಹಾಜಿ
ಅಬ್ದುಲ್ಲಾ
ಬಪ್ಪನಾಡು ದೇವಸ್ಥಾನ ಕಟ್ಟಿಸಿದ ಮುಲ್ಕಿಯ
ಬಪ್ಪಬ್ಯಾರಿ
ಅಸ್ಪೃಶ್ಯ ಜನತೆಗೆ ಶಿಕ್ಷಣ ಕೊಡಿಸಿದ ಕುದ್ಮಲ್
ರಂಗರಾವ್...
ಇವರುಗಳು ಹುಟ್ಟಿದ ತುಳುನಾಡು, ಮತ
ಸೌಹರ್ದತೆಯ ಬೀಡು
ಬನ್ನಿ... ಐಕ್ಯತಾ ರ್‍ಯಾಲಿಯಲ್ಲಿ ಪಾಲ್ಗೊಳ್ಳುವ,
ಕೋಮುವಾದಿಗಳು ಕಟ್ಟಿರುವ ತಾರತಮ್ಯದ
ಗೋಡೆಯನ್ನು ಕೆಡವಿ ಹಾಕುವ.
ಪೆಬ್ರವರಿ 25, ಮಧ್ಯಾನ 3:00 ಗಂಟೆಗೆ.
ಅಂಬೇಡ್ಕರ್ (ಜ್ಯೋತಿ) ವೃತ್ತದಿಂದ ನೆಹರೂ
ಮೈದಾನಕ್ಕೆ. ಸಾವಿರಾರು ಮನುಜ ಪ್ರೇಮಿಗಳ
ಜೊತೆಗೆ ನಮ್ಮ ಕೈಗಳನ್ನು ಬೆಸೆಯುವ.

ನಾವು ಫ್ಲೆಕ್ಸ್ ಹಾಕಿದೆವು ನೀವು ಅಪಹರಿಸಿದಿರಿ.
ನಾವು ಪೋಸ್ಟರ್ ಅಂಟಿಸಿದೆವು ನೀವು ಹರಿದಿರಿ.
ಸಮ ಸಮಾಜದ ಕನಸು ಹೊತ್ತ ನಮ್ಮ ಯುವ
ಸಂಗಾತಿಗಳು ಈಗ ಗೋಡೆಗಳಲ್ಲಿ ಬರೆಯುತ್ತಿದ್ದಾರೆ.
ನೀವು ತಾರು ಬಳಿಯುತ್ತೀರಿ ಎಂದು ಗೊತ್ತು.
ಆದರೂ ನಾವು ನಿಮಗೆ ಪ್ರತಿಕ್ರಿಯಿಸಲಾರೆವು.
ನಿಮ್ಮದು ಕೆಡವುವ ದಾರಿ, ನಮ್ಮದು
ಕಟ್ಟುವ ಹಾದಿ. ಕಟ್ಟುವ ದಾರಿಯಲ್ಲಿ ನಾವು
ನಿಧಾನಕ್ಕೆ ನಡೆಯುತ್ತೇವೆ, ಅದೂ ದೃಢವಾಗಿ.
ಒಂದು ದಿನ ನಿಮಗೂ ಅರ್ಥ ಆಗುತ್ತದೆ
ಹುಡುಗರಾ... ನೀವಿಂದು ಸೂತ್ರಧಾರರ ಕೈಗಳಲ್ಲಿ
ಆಡಿಸಿಕೊಳ್ಳುತ್ತಿರುವ ಗೊಂಬೆಗಳಷ್ಟೆ. ಅರ್ಥವಾದ
ದಿನ ನೀವೂ ಬರುತ್ತೀರಿ. ಅವತ್ತು ಜೊತೆಯಾಗಿ
ನಡೆಯೋಣ.

ಸಂಘ ಗ್ಯಾಂಗಿನ ಕೋಮು ಹಿಂಸಾಚಾರದ ಅವತಾರಗಳು ಸ್ಯಾಂಪಲುಗಳು

ಸ್ವಜನರಿಂದಲೇ ಹತ್ಯೆಯಾದ ವಿನಾಯಕ ಬಾಳಿಗಾ



ಮಂಗಳೂರಿನ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ಸಂಘಪರಿವಾರಿಗಳ ವೈಷಮ್ಯಕ್ಕೆ ಬಲಿಯಾದ ಮತ್ತೊಂದು ಜೀವ. ಮಾರ್ಚ್ 21ರ ಬೆಳಗಿನ ಜಾವ ಬಾಳಿಗಾ ಅವರ ಮನೆಯ ಮುಂದೆಯೇ ದುಷ್ಕರ್ಮಿಗಳು ಅವರ ಹತ್ಯೆ ನಡೆಸಿದ್ದರು. ತಮ್ಮ ಅವ್ಯವಹಾರ ಬಯಲುಗೊಳಿಸುವರೆಂದು ಹೆದರಿದ ಕೇಸರಿ ಪಡೆಯ ಕವಲು ನವೊ ಬಿಗ್ರೇಡ್‌ನ ಮುಖ್ಯಸ್ಥ ಈ ಕೊಲೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದ. ಬಾಳಿಗಾ ಕೂಡ ಬಿಜೆಪಿ ಕಾರ್ಯಕರ್ತನಾಗಿದ್ದು, ಸ್ವಜನರಿಂದಲೇ ಹತ್ಯೆಯಾಗಿದ್ದು ಕೇಸರಿ ಭಯೋತ್ಪಾದಕರ ಕ್ರೌರ್ಯವನ್ನು ಬಿಂಬಿಸುತ್ತದೆ.



ಮತಾಂಧತೆಗೆ ತನ್ನವರನ್ನೂ ಬಲಿ ಪಡೆದರು...

ಕುಶಾಲನಗರದ ಆಟೋಚಾಲಕ ಪ್ರವೀಣ್ ಪೂಜಾರಿ ಬಿಜೆಪಿ ಜೊತೆ ಗುರುತಿಸಿಕೊಂಡಿದ್ದ ಯುವಕ. ಗೂಡ್ಸ್ ರಿಕ್ಷಾ ಚಲಾಯಿಸುತ್ತಿದ್ದ ಈತ ಚಿಕ್ಕ ಪುಟ್ಟ ವ್ಯವಹಾರಗಳನ್ನೂ ಕುಟುಂಬ ನಿರ್ವಹಿಸುತ್ತಿದ್ದಾಗ ಗೋರಕ್ಷಕ ಗೂಂಡಾಗಳ ಹಲ್ಲೆಗೆ ಒಳಗಾದರು. ತೀವ್ರ ಗಾಯ ಹಾಗೂ ರಕ್ತಸ್ರಾವದಿಂದ ಪ್ರವೀಣ್ ಪೂಜಾರಿ ತನ್ನ ಜನರಿಂದಲೇ ಪ್ರಾಣ ಕಳೆದುಕೊಂಡರು.

ಹೊಂಚು ಹಾಕಿ ಕಡಿದು ಕೊಂದರು....



ಕಾಮ್ರೇಡ್ ಶ್ರೀನಿವಾಸ್ ಬಜಾಲ್ ಕೋಮುವಾದಿ ಕ್ರಿಮಿನಲ್‌ಗಳ ಹೊಂಚು ದಾಳಿಯಲ್ಲಿ ಹತ್ಯೆಗೀಡಾಗಿ ಹದಿನಾಲ್ಕು ವರ್ಷಗಳು ಸಂದಿವೆ. ಜಾಗತೀಕರಣ ವಿರೋಧಿ ಹೋರಾಟದಿಂದ ಹಿಡಿದು ಕೋಮುವಾದಿ ವಿರೋಧಿ ಹೋರಾಟದವರೆಗೆ ಶ್ರೀನಿವಾಸ್ ಬಜಾಲ್ ಎಲ್ಲಾ ಹೋರಾಟಗಳಲ್ಲು ಮುಂಚೂಣಿಯಲ್ಲಿರುತ್ತಿದ್ದರು. ಉತ್ತಮ ನಾಯಕತ್ವದ ಗುಣ ಹೊಂದಿದ್ದ ಶ್ರೀನಿವಾಸ್ ಬಜಾಲ್ ಯುವಜನತೆಯ ದಂಡು ಕಟ್ಟಿ ಎಡ ಪಂಥೀಯ ಚಳವಳಿ ಬೆಳಸುವುದು ಹಿಂದುತ್ವದ ಶಕ್ತಿಗಳಿಗೆ ಸಹಿಸಲಾಗಲಿಲ್ಲ.

2002 ರ ಜೂನ್ 24ರ ಬೆಳ್ಳಿಗೆ ರಕ್ತದಾನಕ್ಕೆ ಮನೆಯಿಂದ ಹೊರಟಿದ್ದ ಸಂಗಾತಿಯನ್ನು ಊರ ದೇವಸ್ಥಾನದ ಮುಂದೆ ಹೊಂಚುಹಾಕಿ ಕಡಿದು ಕೊಂದುಹಾಕಿದರು.



ಗೋರಕ್ಷಣೆಯ ಹೆಸರಲ್ಲಿ ಗೂಂಡಾಗಿರಿ

2005ರ ಮಾರ್ಚ್ 3 ರಂದು ಆದಿಉಡುಪಿಯಲ್ಲಿ ಹಾಜಬ್ಬ, ಹಸನಬ್ಬ ಎಂಬ ತಂದೆ ಮಗನನ್ನು ಬೆತ್ತಲುಗೊಳಿಸಿ ಮೆರವಣಿಗೆ ಮಾಡಲಾಯ್ತು. ಜಾನುವಾರು ವ್ಯಾಪಾರಿಗಳಾಗಿದ್ದ ಈ ತಂದೆ ಮಗನನ್ನು ಸಂಘ ಪರಿವಾರದ ಕಾರ್ಯಕರ್ತರು ಹಿಡಿದು ಥಳಿಸಿದ್ದಲ್ಲದೆ, 'ಗೋಮಾತೆ'ಯ ವ್ಯವಹಾರ ಮಾಡುವ ಎಲ್ಲರಿಗೂ ಇದೇ ಶಿಕ್ಷೆ ಎಂದು ಘೋಷಿಸಿದ್ದರು.

ದಕ್ಷಿಣ ಕನ್ನಡದಲ್ಲಿ ಗೋವಿನ ಹೆಸರಿನಲ್ಲಿ ಹಿಂಸೆ ಅಧಿಕೃತವಾಗಿ ಆರಂಭಗೊಂಡಿದ್ದು ಅಲ್ಲಿಂದಲೇ...

ಗೆಳೆಯನನ್ನು ಉಳಿಸಲು ಬಲಿಯಾದ ತರುಣ



ಈ ತರುಣ ಹರೀಶ್ ಪೂಜಾರಿ. 2015ರಲ್ಲಿ ಟಿಪ್ಪು ದಿನಾಚರಣೆ ವಿರೋಧಿಸಿ ಸಂಘಪರಿವಾರ ನಡೆಸಿದ ಮತಾಂಧ ರಾಜಕಾರಣಕ್ಕೆ ಬಲಿಯಾದ ಅಮಾಯಕ. ಟಿಪ್ಪು ದಿನಾಚರಣೆಯನ್ನು ತನ್ನ ಮತಬ್ಯಾಂಕ್ ರಾಜಕಾರಣಕ್ಕೆ ಬಳಸಲು ಹೊರಟ ಸಂಘ ಪರಿವಾರ ಪ್ರಥಮ ಪ್ರಯತ್ನದಲ್ಲೇ ರಾಜ್ಯದಲ್ಲಿ ಒಟ್ಟು ಮೂರು ಜೀವಗಳನ್ನು ಬಲಿ ಪಡೆದಿತ್ತು. ಅದರಲ್ಲಿ ಒಂದು ಬಂಟ್ವಾಳದ ಹರೀಶ್ ಪೂಜಾರಿ. ತನ್ನ ಮುಸ್ಲಿಮ್ ಗೆಳೆಯನನ್ನು ರಕ್ಷಿಸಲು ಮುಂದಾದ ಹರೀಶ್ ಪೂಜಾರಿಯನ್ನು ನಿರ್ದಯವಾಗಿ ಕೊಂದುಹಾಕಿದ್ದು ಬಜರಂಗದಳದ ಭುವಿತ ಶೆಟ್ಟಿ ಮತ್ತವನ ಸಹಚರರು.

ಮನುಷ್ಯನನ್ನು ಜೀವಂತ ಶವವಾಗಿಸಿದ 'ಗೋರಕ್ಷಕರು'



ಇದು ಎರಡು ವರ್ಷಗಳ ಹಿಂದೆ ಮಂಗಳೂರಿನ ಗೋರಕ್ಷಕರಿಂದ ನಡು ಮಾರ್ಗದಲ್ಲಿ ಪೆಟ್ಟು ತಿಂದ ಕಾಸರಗೋಡಿನ ಸಮೀರ್‌ನ ದಾರುಣ ಚಿತ್ರ.

ಮೀನು ಸಾಗಾಣಿಕೆಯ ಲಾರಿ ಚಾಲಕ ಸಮೀರ್, ಮಳೆಗಾಲದ ಮೀನುಗಾರಿಕಾ ರಜೆಯ ಕಾರಣ ದನ ಸಾಗಾಟದ ಲಾರಿ ಚಾಲಕನಾಗಿ ದುಡಿಯಲು ಹೋಗಿದ್ದಾಗ ಮಂಗಳೂರಿನ ಪಂಪ್ ವೆಲ್ ಬಳಿ ಗೋರಕ್ಷಕರ ಹಲ್ಲೆಗೆ ಒಳಗಾದರು.

ಅವರ ಹೊಡೆತಗಳಿಂದ ತೀವ್ರವಾಗಿ ಗಾಯಗೊಂಡಿದ್ದ ಸಮೀರ್ ಈಗಲೂ ಜೀವಂತ ಶವದಂತೆ ಮನೆಯಲ್ಲಿ ಬದುಕುತ್ತಿದ್ದಾರೆ.

ಓಡಾಡಿದರೆ ಲವ್ ಜಿಹಾದ್! ಸ್ನೇಹಕ್ಕೆ ಸಂಸ್ಕೃತಿ ರಕ್ಷಕರ ಪಹರೆ...



ಮುಸ್ಲಿಮ್ ಯುವಕನೊಬ್ಬ ತನ್ನ ಹಿಂದೂ ಸಹೋದ್ಯೋಗಿಗೆ ಕಾರ್‌ನಲ್ಲಿ ಡ್ರಾಪ್ ಕೊಟ್ಟಿದ್ದಕ್ಕೆ ಅನುಭವಿಸಿದ ಶಿಕ್ಷೆ ಇದು. ಸಹೋದ್ಯೋಗಿಗಳು ಒಟ್ಟಿಗೆ ಓಡಾಡುವುದನ್ನು 'ಲವ್ ಜಿಹಾದ್' ಎಂದು ಆರೋಪಿಸಿದ 'ಸಂಸ್ಕೃತಿ ರಕ್ಷಕರು' ಮುಸ್ಲಿಮ್ ಯುವಕ ಶಾಕಿರ್‌ನನ್ನು ಅರೆನಗ್ನಗೊಳಿಸಿ ಕಂಬಕ್ಕೆ ಕಟ್ಟಿಹಾಕಿ ಥಳಿಸಿದ್ದಲ್ಲದೆ ವಿಡಿಯೋ ಚಿತ್ರೀಕರಿಸಿ ಸಾಮಾಜಿಕ ತಾಣಗಳಿಗೂ ಅಪ್ಲೋಡ್ ಮಾಡಿದ್ದರು. ಹಿಂಸೆಯನ್ನು ಆನಂದಿಸುವ ಕೇಸರಿ ಭಯೋತ್ಪಾದಕರ ಮನಸ್ಥಿತಿಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

"ಸಮಾನ ಶಿಕ್ಷಣ ಜಾರಿ, ಖಾಸಗಿ ರಂಗದಲ್ಲಿ ಮೀಸಲಾತಿಗಾಗಿ"



ಎಸ್‌ಎಫ್‌ಐ 14 ನೇ ರಾಜ್ಯ ಸಮ್ಮೇಳನ



ಸಮಾನ ಶಿಕ್ಷಣ ಜಾರಿ ಮತ್ತು ಖಾಸಗಿ ರಂಗದಲ್ಲಿ ಮೀಸಲಾತಿ ಇದು ಎಸ್‌ಎಫ್‌ಐನ 14ನೇ ಕರ್ನಾಟಕ ರಾಜ್ಯಸಮ್ಮೇಳನ ಚರ್ಚಿಸುವ ಮುಖ್ಯ ವಿಷಯಗಳು. ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಸಿಬಿಎಸ್ ಕಲ್ಯಾಣ ಮಂಟಪದಲ್ಲಿ ಫೆಬ್ರುವರಿ 23 ರಿಂದ 26 ವರೆಗೆ 4 ದಿನಗಳ ಕಾಲ ಈ ಸಮ್ಮೇಳನ ನಡೆಯುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ವಿಶ್ವವಿದ್ಯಾಲಯಗಳಿಂದ ವಿದ್ಯಾರ್ಥಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ.

ಸಮಾನ ಶಿಕ್ಷಣ ಜಾರಿ:

ಭಾರತ ಸ್ವಾತಂತ್ರ್ಯದ ಆರಂಭದ ವರ್ಷಗಳಲ್ಲಿ ಶಿಕ್ಷಣದ ಸುಧಾರಣೆಗಾಗಿ ಸಲಹೆಗಳನ್ನು ನೀಡಲು ಭಾರತ ಸರಕಾರವು ನೇಮಿಸಿದ್ದ ಕೊಠಾರಿ ಆಯೋಗವೆಂಬ ಹೆಸರಿನಲ್ಲಿ ಜನಪ್ರಿಯವಾಗಿರುವ ಶಿಕ್ಷಣ ಆಯೋಗವು ದೇಶದಲ್ಲಿ ಶಿಕ್ಷಣದ ಸ್ಥಿತಿ–ಗತಿಯ ಪರಾಮರ್ಶೆ ನಡೆಸಿತು. ಶಿಕ್ಷಣದ ಗುಣಮಟ್ಟವು ಗಮನಿಸಿದ ಆಯೋಗವು ಅದನ್ನು ಉತ್ತಮ ಪಡಿಸಲು ಹಲವು ಶಿಫಾರಸ್ಸುಗಳನ್ನು ನೀಡಿತು. ಸಮಾನಗುಣಮಟ್ಟದ ಶಿಕ್ಷಣ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಹೆಚ್ಚಿನ ಆದ್ಯತೆ, ಶಿಕ್ಷಣ ಕ್ಷೇತ್ರಕ್ಕಾಗಿ ದೇಶದ ಜಿಡಿಪಿಯ ಕನಿಷ್ಟ 6% ಹಣ ನೀಡಿಕೆ, ಬಜೆಟ್‌ನಲ್ಲಿ ಕೇಂದ್ರ ಸರಕಾರ 10% ರಷ್ಟು, ರಾಜ್ಯ ಸರಕಾರಗಳು 30% ಹಣ ಮೀಸಲಿಡಬೇಕು, ಜಾತಿ, ಮತ ಅಥವಾ ಲಿಂಗ, ಬಡವ–ಶ್ರೀಮಂತ ಅಥವಾ ಇನ್ಯಾವುದೇ ಆಧಾರದ ಮೇಲೆ ತಾರತಮ್ಯ ಮಾಡದೇ ಎಲ್ಲ ಮಕ್ಕಳಿಗೂ ಸಮಾನವಾದ ಅವಕಾಶ ದೊರಕಿಸುವಂಥ ರೀತಿಯಲ್ಲಿ ಸಾಮಾಜಿಕ ಮತ್ತು ರಾಷ್ಟ್ರೀಯ ಸಮನ್ವಯವನ್ನು ಸಾಧಿಸಬೇಕು ಎಂಬುದು ಕೊಠಾರಿ ಆಯೋಗದ ಪ್ರಮುಖ ಶಿಫಾರಸುಗಳು. ಹೇಳಲಾಗಿತ್ತು.

ಕೊಠಾರಿ ಆಯೋಗದ ಶಿಫಾರಸುಗಳ ಐದು ದಶಕಗಳ ನಂತರವೂ ಇದುವರೆಗೂ ಇವುಗಳ ಜಾರಿಗೆ ಯಾವುದೇ ಸರಕಾರ ಮುಂದಾಗಿಲ್ಲ. ಉಳ್ಳವರಿಗೆ ಒಂದು ಶಿಕ್ಷಣ ಇಲ್ಲದವರಿಗೊಂದು ಶಿಕ್ಷಣ ಎಂಬ ಪರಿಸ್ಥಿತಿ ದೇಶದಲ್ಲಿದೆ. ಇದನ್ನು ಹೋಗಲಾಡಿಸಿ ಸಮಾನ ಶಿಕ್ಷಣಕ್ಕಾಗಿ ಚಳುವಳಿ ಬಲಿಷ್ಠಪಡಿಸಬೇಕೆಂದು ಎಸ್‌ಎಫ್‌ಐ ಆಗ್ರಹಿಸುತ್ತಿದೆ.

ಈ ಸಂದರ್ಭದಲ್ಲಿ ಶಿಕ್ಷಣದ ಖಾಸಗೀಕರಣದ ಪ್ರಶ್ನೆಯೂ ಉದ್ಭವವಾಗಿದೆ.

ಶಿಕ್ಷಣದ ಖಾಸಗೀಕರಣ:

ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕಾಗಿದೆ, ಆದ್ದರಿಂದ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು ಸರಕಾರದ ಆದ್ಯ ಕರ್ತವ್ಯ. ಅದು ಆಯ್ದ ಕೆಲವರ ಸ್ವತ್ತಲ ಎಂಬುದನ್ನು ಸರಿಯಾಗಿಯೇ ಗುರುತಿಸಲಾಗಿದೆ. ಶಿಕ್ಷಣದ



ಸಾರ್ವತ್ರೀಕರಣಕ್ಕಾಗಿ ದೀರ್ಘಕಾಲದಿಂದ ಬೃಹತ್ ಹೋರಾಟಗಳು ನಡೆದಿವೆ. ಶಿಕ್ಷಣವನ್ನು ಸಾಮಾಜಿಕ ಸೌಕರ್ಯವನ್ನಾಗಿ ಅಷ್ಟೇ ಅಲ್ಲ, ಸಾಮಾಜಿಕ ಪರಿವರ್ತನೆಯ ಮತ್ತು ಸಾಮಾಜಿಕ ನ್ಯಾಯದ ಸಾಧನವನ್ನಾಗಿಯೂ ಗುರುತಿಸುವ ಪ್ರಯತ್ನ ನಿರಂತರವಾಗಿ ನಡೆದಿದೆ. ಭಾರತ ಸಂವಿಧಾನದ ಅನುಚ್ಛೇದ 41, 45 ಮತ್ತು 46ರಲ್ಲಿ ರಾಜ್ಯನೀತಿ ನಿರ್ದೇಶಕ ತತ್ವಗಳ ರೂಪದಲ್ಲಿ ಶಿಕ್ಷಣವನ್ನು ಸೇರಿಸಿರುವುದು ಈ ದಿಕ್ಕಿನಲ್ಲಿ ಮಹತ್ವದಕ್ರಮವಾಗಿದೆ. ಆದರೂ ಈ ನಿಬಂಧನೆಗಳು ರಾಜ್ಯದ ಆರ್ಥಿಕ ಸಾಮರ್ಥ್ಯಗಳಿಗೆ ಸೀಮಿತವಾಗಿದ್ದರಿಂದ, ಮಿಶಿನರಿಗಳು ಮತ್ತು ಲೋಕೋಪಕಾರಿ ಸಂಸ್ಥೆಗಳು ಶಿಕ್ಷಣವನ್ನು ನೀಡುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವು. ಭಾರತಕ್ಕೆ ಸ್ವಾತಂತ್ರ್ಯ ಬಂದ ಆರಂಭದ ವರ್ಷಗಳಲ್ಲಿ ಈ ಸಂಸ್ಥೆಗಳು ನೀಡಿದ ಕೊಡುಗೆಗಳು ಮನ್ನಣೆ ಮತ್ತು ಪ್ರಶಂಸೆಗೆ ಪಾತ್ರವಾದುವು. ಆದರೆ, ಕ್ರಮೇಣ ಈ ಸಂಸ್ಥೆಗಳು ಶಿಕ್ಷಣವನ್ನು ಒಂದು ವೃತ್ತಿ ಮತ್ತು ವ್ಯಾಪಾರವನ್ನಾಗಿ ಪರಿವರ್ತಿಸತೊಡಗಿದವು. ಇದ–ರಿಂದಾಗಿ ಕ್ಯಾಪಿಟೇಶನ್ ಮತ್ತು ದುಬಾರಿ ಶುಲ್ಕಗಳ ಹಾವಳಿ ಆರಂಭವಾಯಿತು. ಎದ್ದುಕಾಣುವ ತಾರತಮ್ಯ ಮತ್ತು ಪ್ರತ್ಯೇಕತೆಗೆ ಮತ್ತು ಆ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ಶ್ರೇಣಿಗಳ ಬೆಳವಣಿಗೆಗೆ ಇದು ದಾರಿ ಮಾಡಿಕೊಟ್ಟಿತು. ತತ್ಪರಿಣಾಮವಾಗಿ ಸಾಮಾಜಿಕ ಸೌಕರ್ಯ ಅಥವಾ ಸಾಮಾಜಿಕ ಪರಿವರ್ತನೆಯ ಸಾಧನವಾಗಬೇಕಾಗಿದ್ದ ಶಿಕ್ಷಣವು ಲಾಭವನ್ನು ಗಳಿಸುವ ಒಂದು ವ್ಯವಹಾರವಾಗಿ ಪರಿಣಮಿಸಿತು.

1983 ರಕರ್ನಾಟಕ ಶಿಕ್ಷಣ ಕಾಯಿದೆ ಅನ್ವಯ ಮತ್ತು 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಲಾಸಿಫಿಕೇಶನ್, ರೆಗ್ಯುಲೇಶನ್ ಮತ್ತು ಪ್ರಿಸ್ಕಿಪೇಶನ್ ಕರಿಕ್ಯುಲಂ) ಕಾಯಿದೆಯ ನಿಯಮಗಳು 28.10.1999 ರಂದು ಜಾರಿಗೆ ತರುವ ಮೂಲಕ ಶಿಕ್ಷಣದ ವ್ಯಾಪಾರೀಕರಣಕ್ಕೆ ಕಡಿವಾಣ ಹಾಕಲು ಉದ್ದೇಶಿಸಲಾಗಿತ್ತು. ಈ ನಿಯಮಗಳ ಪ್ರಕಾರ ಸರ್ಕಾರ ನಿಗದಿಪಡಿಸಿದಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳು 500 ರೂ. ಅನುದಾನರಹಿತ ಶಿಕ್ಷಣ ಸಂಸ್ಥೆಗಳು ರೂ.600 ಗಳನ್ನು ಮಾತ್ರ ಅಭಿವೃದ್ಧಿ ಶುಲ್ಕ (ಡೆವಲಪ್‌ಮೆಂಟ್ ಫೀ)ನ್ನು ಸಂಗ್ರಹಿಸಲು ಅವಕಾಶವಿದೆ. ಈ ಹಣವನ್ನು ಒತ್ತಾಯದ ಮೂಲಕ ಸಂಗ್ರಹಿಸುವಂತಿಲ್ಲ. ಇದಕ್ಕೂ ಹೆಚ್ಚು ಸಂಗ್ರಹಿಸುವುದು ಕಾನೂನಿನ ಪ್ರಕಾರ ಅಪರಾಧ. ಶಿಕ್ಷಣ ಕಾಯಿದೆಯನ್ವಯ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳು, ಪೋಷಕರು, ಶಿಕ್ಷಣ ತಜ್ಞರನ್ನೊಳಗೊಂಡಂತೆ ಸಮಿತಿ ರಚಿಸಿ ಅಲ್ಲಿ ಈ ಕುರಿತು ಚರ್ಚಿಸಬೇಕು. ಆದರೆ ಅದು ಎಲ್ಲಿಯೂ ಜಾರಿಯಾಗುತ್ತಿಲ್ಲ. ಡೊನೇಷನ್ (ವಂತಿಗೆ) ವಸೂಲಿಯನ್ನು ನಿಯಂತ್ರಿಸಲು ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರವನ್ನು ರಚಿಸಬೇಕೆಂಬ ನಿಯಮವಿದ್ದರೂ ಅದು ಕಾರ್ಯಸಾಧ್ಯವಾಗಿಲ್ಲ.

1995 ಮತ್ತು 1999 ರ ಶಿಕ್ಷಣ ಕಾಯ್ದೆಗಳು ಖಾಸಗಿ ಶಿಕ್ಷಣ ಸಂಸ್ಥೆಗಳು ಪಡೆಯಬಹುದಾದ ಶುಲ್ಕಗಳ ಮಾನದಂಡದ ಬಗ್ಗೆ ತಿಳಿಸಿದ್ದವು. ಪೋಷಕರಿಂದ ಹೆಚ್ಚುವರಿ ಹಣ ಪಡೆಯುವ ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮಜರುಗಿಸಬೇಕು ಹಾಗೂ ಹೆಚ್ಚುವರಿ ವಂತಿಗೆ, ಕಟ್ಟಡ ಶುಲ್ಕವನ್ನು ಪೋಷಕರಿಂದ ಪಡೆಯಬಾರದು ಎಂದು ಹೇಳಿವೆ. ಆದರೆ ಆ ಕಾಯೆಗಳನ್ನು ಜಾರಿ ಮಾಡದೇ ಶುಲ್ಕದ ವಿಚಾರವಾಗಿ ಮತ್ತೆ ರಾಜ್ಯ ಸರಕಾರ ಹೊಸ ಕರಡನ್ನು ರಚಿಸಿ ಶುಲ್ಕ ನಿಗದಿ ಮಾಡುವ ಸಂಪೂರ್ಣ ಜವಾಬ್ದಾರಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಲು ಪದೇ ಪದೇ ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾದ ಕಾನೂನನ್ನು ತಯಾರಿಸಲು ಮುಂದಾಗುತ್ತಿದೆ.

ಉನ್ನತ ಶಿಕ್ಷಣ:

ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳನ್ನು ಕಡೆಗಣಿಸಿದ ಜಗತ್ತಿನ ಯಾವುದೇ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಭಾರತ ದೇಶದ ಶಿಕ್ಷಣ ಕ್ಷೇತ್ರಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.6ರಷ್ಟು ಹಣವನ್ನು ಮೀಸಲಿಡಬೇಕೆಂಬ ಬೇಡಿಕೆ ಹಲವು ದಶಕಗಳಿಂದ ಈಡೇರದೇ ಉಳಿದಿದೆ. ಈ ಬೇಡಿಕೆಯು ವಿದ್ಯಾರ್ಥಿ ಸಮುದಾಯದ ಪ್ರಬಲ ಧ್ವನಿಯಾಗಿದೆಯಲ್ಲದೇ, ಮೇಲೆ ಹೇಳಿದಂತೆ, ಕೇಂದ್ರ ಸರ್ಕಾರ ನೇಮಿಸಿದ್ದ ಕೊಠಾರಿ ಆಯೋಗವೇ 1960ರ ದಶಕದಲ್ಲಿ ನೀಡಿದ ಒಂದು ಪ್ರಮುಖ ಶಿಫಾರಸು ಇದು. ಜಗತ್ತಿನ ಇತರ ಹಲವು ದೇಶಗಳಲ್ಲಿ ಇದಕ್ಕಿಂತ ಹೆಚ್ಚಿನ ಪ್ರಮಾನದಲ್ಲಿ ಶಿಕ್ಷಣಕ್ಕೆ ಖರ್ಚು ಮಾಡಲಾಗುತ್ತಿದೆ. ಉದಾ: **ಕ್ಯೂಬಾ** ತನ್ನ **ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ದ ಶೇ.18.7**ರಷ್ಟು ಹಣವನ್ನು ಶಿಕ್ಷಣಕ್ಕೆ ವ್ಯಯಿಸುತ್ತಿದೆ. ಅದೇ ರೀತಿ **ಕೀನ್ಯಾ ಶೇ.7, ಮಲೇಷ್ಯಾ ಶೇ.8.1, ದಕ್ಷಿಣ ಆಫ್ರಿಕಾ ಶೇ.5.3** ರಷ್ಟನ್ನು ವ್ಯಯಿಸುತ್ತಿವೆ. ಆದರೆ **ಭಾರತ** ಕೇವಲ **3%** ರಷ್ಟನ್ನು ಮಾತ್ರ ನೀಡುತ್ತಿದೆ. ಕಳೆದ ಎರಡು ವರ್ಷಗಳಿಂದ ಕೇಂದ್ರ ಸರಕಾರ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಹಣವನ್ನು ಕಡಿತಗೊಳಿಸುತ್ತಿದೆ. ಶಿಷ್ಯವೇತನ ಮತ್ತು ಫೆಲೊಶಿಪ್ ಕಡಿತಗೊಳಿಸುವ ಮೂಲಕ ಸಾರ್ವಜನಿಕ ಶಿಕ್ಷಣ ಕ್ಷೇತ್ರಕ್ಕೆ ಹಣಕಡಿತ ಮಾಡಿ ಶಿಕ್ಷಣವನ್ನು ನಿರ್ಲಕ್ಷಿಸಲಾಗುತ್ತಿದೆ. ಇದು ಕೂಡಲೇ ನಿಲ್ಲಬೇಕಿದೆ. ಕೊಠಾರಿ ಆಯೋಗದ ಶಿಫಾರಸ್ಸಿನಂತ ಜಿ.ಡಿ.ಪಿ ಯ 6%, ಕೇಂದ್ರ ಬಜೆಟ್ ನಲ್ಲಿ 10% ರಾಜ್ಯ ಬಜೆಟ್ ನಲ್ಲಿ 30% ಹಣವನ್ನು ಶಿಕ್ಷಣಕ್ಕೆ ಮೀಸಲಿಡುವ ಮೂಲಕ ಅವರ ಶಿಫಾರಸ್ಸನ್ನು ಜಾರಿಗೊಳಿಸಬೇಕು. ಫೆಲೊಶಿಪ್ ಹಣವನ್ನು ಹೆಚ್ಚಿಸಲು ಮತ್ತು ಅದನ್ನು ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಸ್ತರಣೆ ಮಾಡಬೇಕಿದೆ.

ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣ, ಕೇಂದ್ರೀಕರಣ ಹಾಗೂ ಕೋಮುವಾದೀಕರಣವನ್ನು ತಡೆಗಟ್ಟಬೇಕಿದೆ. ಸ್ವಾಯತ್ತ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ನೀತಿ ನಿಯಮಗಳನ್ನೆ ಗಾಳಿಗೆ ತೂರುತ್ತಿವೆ. ಖಾಲಿ ಇರುವ ಬೋಧಕೇತರ ಹುದ್ದೆ ಮತ್ತು ಬೋಧಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕಿದೆ. **ಹೊಸ ರಾಷ್ಟ್ರೀಯ ಶಿಕ್ಷಣ ನೀತಿ**ಯಲ್ಲಿರುವ ದೋಷಗಳನ್ನು ಸರಿ ಪಡಿಸಿ ಶಿಕ್ಷಣ ಉಳಿಸುವ ಮತ್ತು ಸಾರ್ವತ್ರಿಕರಣ ಗೊಳಿಸುವ ನೀತಿಯನ್ನು ಜಾರಿ ಮಾಡಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಾಪಾಡಬೇಕಿದೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ವಿದ್ಯಾರ್ಥಿ ಸಂಘಗಳನ್ನು ಸರ್ವಾಧಿಕಾರಿ ಧೋರಣೆಯ ಮೂಲಕ ವಿಸರ್ಜನೆಗೊಳಿಸಿರುವ ಹಲವು ಉದಾಹರಣೆಗಳಿವೆ. ಅಲ್ಲದೇ ಇತ್ತೀಚೆಗೆ ಜೆಎನ್‌ಯು ವಿವಿಯ ಘಟನೆ, ಹೈದ್ರಾಬಾದ್ ಕೇಂದ್ರೀಯ ವಿವಿಯ ಸಂಶೋಧನಾ ವಿದ್ಯಾರ್ಥಿ ರೋಹಿತ್ ಸಾಂಸ್ಥಿಕ ಹತ್ಯೆಗಳು ಇವುಗಳನ್ನು ಸಾಬೀತುಪಡಿಸುತ್ತಿವೆ. **ಕರ್ನಾಟಕದಲ್ಲಿ ವಿಶ್ವವಿದ್ಯಾಲಯ ಕಾಯ್ದೆ 2000**ಕ್ಕೆ ತಿದ್ದುಪಡಿ ತಂದು ರಾಜ್ಯದಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ರದ್ದುಗೊಳಿಸಲಾಗಿದೆ. ಈ ಮೂಲಕ ಪ್ರೊ॥ ಲಿಂಗ್ಡೋ ಸಮಿತಿಯು ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಬೇಕೆಂದು ನೀಡಿದ್ದ ಶಿಫಾರಸ್ಸನ್ನು ಹಾಗೂ ಸುಪ್ರೀಂಕೋರ್ಟ್ ನಿರ್ದೇಶನವನ್ನು ಧಿಕ್ಕರಿಸಲಾಗಿದೆ. ಆದ್ದರಿಂದ ಈ ಹಕ್ಕನ್ನು ಮತ್ತೆ ಪಡೆಯಲು, ವಿದ್ಯಾರ್ಥಿ ಸಂಘಟನೆಯ ಚುನಾವಣೆ ನಡೆಸುವಂತೆ ಮಾಡಲು ಕಾರ್ಯಕ್ರಮ ರೂಪಿಸಬೇಕಿದೆ.

ಖಾಸಗಿ ರಂಗದಲ್ಲಿ ಮೀಸಲಾತಿ:

ಸ್ವಾತಂತ್ರ್ಯ ನಂತರ ನಾವು ಅಂಗೀಕರಿಸಿದ ಸಂವಿಧಾನವು ದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನ ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗ ರಂಗಗಳಲ್ಲಿ ಮೀಸಲಾತಿಯನ್ನು ಖಚಿತಪಡಿಸಿದೆ. ಎಲ್ಲರಿಗೂ ಶಿಕ್ಷಣ ಹಾಗೂ ಎಲ್ಲರಿಗೂ ಉದ್ಯೋಗ ಒದಗಿಸುವುದು ಸಂವಿಧಾನದ ಆಶಯವಾಗಿದ್ದರೂ, ಅವಕಾಶಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಿಲ್ಲದಿರುವಾಗ ಲಭ್ಯವಿರುವ ಸೀಮಿತ ಅವಕಾಶಗಳಲ್ಲಿ ಕೆಲವು ಪ್ರಮಾಣದ ಅವಕಾಶಗಳನ್ನು ಪ.ಜಾತಿ ಮತ್ತು ಪ.ಪಂಗಡಗಳಿಗೆ ಮೀಸಲಿಡಲಾಗಿದೆ. ಈ ದೇಶದಲ್ಲಿ ಶತಮಾನಗಳಿಂದ ಅಸ್ತಿತ್ವದಲ್ಲಿರುವ ಶ್ರೇಣೀಕೃತ ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಯಿಂದಾಗಿ ಪ.ಜಾತಿ ಮತ್ತು ಪ.ಪಂಗಡಗಳಿಗೆ ಸೇರಿದ ದಲಿತರು ಆಸ್ತಿ ಮತ್ತು ಶಿಕ್ಷಣದ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಈ ಕಾರಣದಿಂದಾಗಿ ದಲಿತರು ಶತಮಾನಗಳಿಂದ ಆರ್ಥಿಕವಾಗಿ,

ಪುಟ 14 ಕ್ಕೆ



ನಮ್ಮ ಚುರು-ಟ್ವೀಟ್

ಅಮಿತ್ ಶಾ : 'ನೌಕರಿ' ಕೊಡುತ್ತೇವೆಂದು ಚುನಾವಣಾ ಭರವಸೆ ಕೊಟ್ಟಿಲ್ಲ..'ರೋಜಗಾರ್' ಕೊಡುತ್ತೇವೆಂದು ಹೇಳಿದ್ದು. ಎಲ್ಲರಿಗೂ ಉದ್ಯೋಗ ಕೊಡುವುದು ಅಸಾಧ್ಯ (ಟೈಮ್ಸ್ ನೌ ಸುದ್ದಿ ಟ್ವೀಟ್)

ಯೆಚುರಿ : ಮೋದಿ ಅವರ 10 ಕೋಟಿ ಉದ್ಯೋಗ ಎಂಬ ಚುನಾವಣಾ ಭರವಸೆ ಸಹ ಪ್ರತಿಯೊಬ್ಬರ ಅಕೌಂಟಿನಲ್ಲಿ 15 ಲಕ್ಷ ರೂ. ಹಾಕುವ ಭರವಸೆ ಥರ ಇನ್ನೊಂದು 'ಜುಮ್ಲಾ' (ಬೊಗಳೆ) ಎಂದು ಒಪ್ಪಿಕೊಂಡಂತಾಯ್ತು.

ಲಕ್ಷ ಕೋಟಿ ಕಾರ್ಪೋರೇಟ್ ಸಾಲಮನ್ನಾದ ನಂತರವೂ 'ಕೆಟ್ಟ ಸಾಲ'ಗಳ ಪ್ರಮಾಣ ಇಮ್ಮಡಿ

2016ರಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಸುಸ್ತಿಸಾಲಗಳಲ್ಲಿ 56.4ಶೇ.ದಷ್ಟು ತೀವ್ರ ಹೆಚ್ಚಳವಾಗಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' (ಫೆ.20) ವರದಿ ಮಾಡಿದೆ. ಡಿಸೆಂಬರ್ 2016ರಲ್ಲಿ ಅಂತ್ಯಗೊಂಡ 12 ತಿಂಗಳ ಅವಧಿಯಲ್ಲಿ 'ಕೆಟ್ಟ ಸಾಲಗಳು' ಅಂದರೆ ಹಿಂದಕ್ಕೆ ಬರುವ ನಿರೀಕ್ಷೆಯಿಲ್ಲದ ಸಾಲಗಳ ಮೊತ್ತ 6,14,872 ಕೋಟಿರೂ.ಗಳಿಗೆ ಏರಿದೆ–ಯಂತೆ. ಇದು ಈ ಬ್ಯಾಂಕುಗಳು ನೀಡಿದ ಒಟ್ಟು ಸಾಲಗಳ 11ಶೇ. ಆಗುತ್ತದೆ. 5 ಬ್ಯಾ ಕುಗಳ 'ಕೆಟ್ಟ ಸಾಲ'ಗಳ ಪ್ರಮಾಣ 15 ಶೇ,ವನ್ನೂ ದಾಟಿದೆಯಂತೆ. ಇದು ಮುಂದಿನ ಎರಡು ತ್ರೈಮಾಸಿಕಗಳಲ್ಲಿ ಇನ್ನೂ ಏರುವ ಭೀತಿ ಇದೆಯಂತೆ. ಏಕೆಂದರೆ ನೋಟುರದ್ಧತಿಯ ಪರಿಣಾಮವಾಗಿ ಹಲವಾರು ಉದ್ದಿಮೆ ಘಟಕಗಳು, ವಿಶೇಷವಾಗಿ ಮಧ್ಯಮ ಮತ್ತು ಸಣ್ಣ ಗಾತ್ರದ ಉದ್ದಿಮೆಗಳು ತಾವು ಪಡೆದ ಸಾಲಗಳನ್ನು ಹಿಂದಿರುಗಿಸಲಾರದೇ ಒದ್ದಾಡುತ್ತಿವೆ ಎನ್ನಲಾಗಿದೆ.

ಡಿಸೆಂಬರ್ 2012ರಿಂದ ಡಿಸೆಂಬರ್ 2016 ರ ವರೆಗೆ 24 ಸಾರ್ವಜನಿಕ ವಲಯದ ಬ್ಯಾಂಕುಗಳ 'ಕೆಟ್ಟ ಸಾಲ'ಗಳ ಮೊತ್ತ ಮತ್ತು ಪ್ರಮಾಣ ಈ ಕೆಳಗಿನಂತಿದೆ:

	ಒಟ್ಟು 'ಕೆಟ್ಟ ಸಾಲ'ಗಳು	ಒಟ್ಟು ಸಾಲಗಳಲ್ಲಿ ಪ್ರಮಾಣ
ಡಿಸೆಂಬರ್ 2012	ರೂ.1,57,784 ಕೊಟಿ	3.87
ಡಿಸೆಂಬರ್ 2013	ರೂ.2,18,579 ಕೋಟಿ	4.61
ಡಿಸೆಂಬರ್ 2014	ರೂ.2,61,843 ಕೋಟಿ	5.09
ಡಿಸೆಂಬರ್ 2015	ರೂ.3,93,047 ಕೋಟಿ	7.16
ಡಿಸೆಂಬರ್ 2016	ರೂ.6,14,872 ಕೋಟಿ	11.00

ಮೇಲಿನ ಕೋಷ್ಟಕದಲ್ಲಿ ನೋಡಬಹುದಾದಂತೆ 'ಅಚ್ಛೇ ದಿನ್' ಆರಂಭವಾಗುವ ಹಿಂದಿನ ಡಿಸೆಂಬರ್(2013)ನಲ್ಲಿ ಅದು ಸಾರ್ವಜನಿಕ ವಲಯದ 24 ಬ್ಯಾಂಕುಗಳು ನೀಡಿದ ಒಟ್ಟು ಸಾಲಗಳಲ್ಲಿ 4.61ಶೇ. ಸುಸ್ತಿಯಾಗಿದ್ದರೆ, ಈಗ ಅದು 11ಶೇ.ಕ್ಕೇರಿದೆ, ದುಪ್ಪಟ್ಟಿಗಿಂತಲೂ ಹೆಚ್ಚು! ಸುಸ್ತಿದಾರರಿಗೆ ನಿಜಕ್ಕೂ 'ಅಚ್ಛೇ ದಿನ್' ಮೇ 2014ರ್ಲಿ ಅಲ್ಲದಿದ್ದರೂ ಡಿಸೆಂಬರ್ 2014ರಿಂದಂತೂ ಖಂಡಿತಾ ಆರಂಭವಾಗಿದೆ, ನಂತರದ ಒಂದು ವರ್ಷದಲ್ಲಿ ಒಂದೂವರೆ ಪಟ್ಟಾದರೆ, ನಂತರದ ಒಂದು ವರ್ಷದಲ್ಲಿ ಎರಡುಪಟ್ಟಿಗಿಂತಲೂ ಹೆಚ್ಚಾಗಿದೆ!

ರಿಝರ್ವ್ ಬ್ಯಾಂಕ್ ಹಿಂದಿನ ಗವರ್ನರ್ ಅಡಿಯಲ್ಲಿ ಸುಸ್ತಿಸಾಲಗಳ 'ಪನರ್ರಚನೆ'ಯ ಹಲವು ಕ್ರಮಗಳನ್ನು ಕೈಗೊಂಡ ನಂತರವೂ ಈ ಮಟ್ಟದ ಏರಿಕೆ ಹಲವು ವಿಶ್ಲೇಷಕರನ್ನು ಆಶ್ಚರ್ಯಚಕಿತಗೊಳಿಸಿದೆ.

ಕಳೆದ 16 ವರ್ಷಗಳಲ್ಲಿ 4ಲಕ್ಷ ಕೋಟಿ ರೂ.ಗಳಷ್ಟು ಕಾರ್ಪೋರೇಟ್ ಸಾಲಗಳನ್ನು ಮನ್ನಾ ಮಾಡಲಾಗಿದ ಎಎಂಬುದನ್ನು ಲೆಕಲ್ಕ್ಕೆ ತಗೊಂಡರೆ ವಾಸ್ತವವಾಗಿ ಸುಸ್ತಿಯಾದ ಸಾಲಗಳ ಒಟ್ಟು ಮೊತ್ತ 10ಲಕ್ಷ ಕೋಟಿ ರೂ. ದಾಟುತ್ತದೆ ಎಂದು ರಿಝರ್ವ್ ಬ್ಯಾಂಕ್ ನ ನಿವೃತ್ತ ಡೆಪ್ಯುಟಿ ಗವರ್ನರ್ ಕೆ.ಸಿ.ಚಕ್ರವರ್ತಿ ಹೇಳುತ್ತಾರೆ.

ಇದರಲ್ಲಿ ರೂ.1.12ಲಕ್ಷ ಕೋಟಿಯನ್ನು ಪ್ರಸಕ್ತ ಸರಕಾರವೇ 2014 ಮತ್ತು 2015ರಲ್ಲಿ ಮನ್ನಾ ಮಾಡಿದೆ. 2016ರಲ್ಲಿ ಇನ್ನೂ ಎಷ್ಟು ಮನ್ನಾ ಮಾಡಲಾಗಿದೆ ಎಂದು ತಿಳಿದಿಲ್ಲ.

ಈ ಬಗ್ಗೆ ಸಿಪಿಐ(ಎಂ)ನ ಕೇಂದ್ರ ಸಮಿತಿ ಕಳೆದ ತಿಂಗಳು ನಡೆದ ಸಭೆಯ ವರದಿಯಲ್ಲಿ ಹೇಳಿರುವುದನ್ನು ಇಲ್ಲಿ ಗಮನಿಸಬಹುದು.

"ಈ ಬಿಜೆಪಿ ಸರಕಾರ ಪ್ರಧಾನ ಮಂತ್ರಿ ಮೋದಿಯ ಅಡಿಯಲ್ಲಿ ಪ್ರೊತ್ಸಾಹಿಸುತ್ತಿರುವ ಉನ್ನತ ಮಟ್ಟದ ಚಮಚಾ ಬಂಡವಾಳಶಾಹಿಯ ಕೃಪೆಯಿಂದ ಹೆಚ್ಚಿನ ಸರಕಾರೀ ಒಡೆತನದ ಬ್ಯಾಂಕುಗಳ ಕೆಟ್ಟ ಸಾಲಗಳ ಮೊತ್ತ ಇಮ್ಮಡಿಗೊಂಡಿತು, 2015–16ರಲ್ಲಿ ಕೆಲವು ಸಂದರ್ಭಗಳಲ್ಲಿ ಮೂರು ಪಟ್ಟು ಕೂಡ ಆಗಿದೆ. ಮಾರ್ಚ್ 2016ರ ವೇಳೆಗೆ 'ಆರ್‌ಬಿಐ ಆಸ್ತಿ ಗುಣಮಟ್ಟ ಪರಾಮರ್ಶೆ'ಯ ಅಂದಾಜಿನ ಪ್ರಕಾರ ನಮ್ಮ ಬ್ಯಾಂಕುಗಳು ನೀಡಿದ ಸಾಲಗಳಲ್ಲಿ 8.5ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚು ಮೊತ್ತವನ್ನು ಆ ಸಾಲಗಳನ್ನು ಪಡೆದವರು ಹಿಂದಿರುಗಿಸಿಲ್ಲ. ಹೀಗೆ ಹಿಂದಿರುಗಿಸದಿರುವವರು ಪ್ರಮುಖವಾಗಿ ದೊಡ್ಡ ಕಾರ್ಪೊರೇಟ್‌ಗಳು. ಮೇಲಿನ 10 ಕಾರ್ಪೊರೇಟ್ ಮನೆತನಗಳು ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ 7ಲಕ್ಷ ಕೋಟಿ ರೂ.ಗಳಷ್ಟು ಅಗಾಧ ಸಾಲಗಳನ್ನು ಬಾಕಿಯಿಟ್ಟುಕೊಂಡಿವೆ. ಈ ಬಾಕಿಗಳಲ್ಲಿ ಬಹುದೊಡ್ಡ ಭಾಗ ವಿದೇಶಗಳಿಗೆ ವರ್ಗಾಯಿಸಲ್ಪಟ್ಟಿದೆ, ಅದು ಎಂದೂ ವಸೂಲಿಯಾಗುವುದಿಲ್ಲ ಎಂದು ಜುಲೈ 2016ರಲ್ಲಿ ಸಿಎಜಿ(ಮಹಾ ಲೆಕ್ಕ ಪರಿಶೋಧಕರ ಕಚೇರಿ) ಹೇಳಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಬಾಕಿದಾರರ ವಿರುದ್ದ ಕ್ರಮ ಕೈಗೊಂಡು, ಕೋಟ್ಯಂತರ ಭಾರತೀಯ ಜನರು ನಮ್ಮ ಬ್ಯಾಂಕುಗಳಲ್ಲಿ ವಿಶ್ವಾಸವಿಟ್ಟು ಠೇವಣಿಯಿಟ್ಟ ತಮ್ಮ ಜೀವನಪರ್ಯಂತದ ಉಳಿತಾಯಗಳ ಈ ಮೊತ್ತಗಳನ್ನು ಆ ಕಾರ್ಪೊರೇಟ್‌ಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ವಸೂಲಿ ಮಾಡುವ ಬದಲು ಈ ಸರಕಾರ 2014 ಮತ್ತು 2015ರಲ್ಲಿ ಒಟ್ಟು ರೂ.1,12,078 ಕೋಟಿ ಕಾರ್ಪೊರೇಟ್ ಸಾಲಗಳನ್ನು ಮನ್ನಾ ಮಾಡಿದೆ. ಇದು ನಡೆದಿರುವುದು, ಇದೇ ಸರಕಾರ ಸಂಕಟಗಳಿಗೀಡಾಗಿ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿರುವ ನಮ್ಮ ರೈತರ ಸಾಲಗಳನ್ನು ಮನ್ನಾ ಮಾಡಲು ನಿರಾಕರಿಸುತ್ತಿರುವಾಗ".

ಈ 6ಲಕ್ಷ ಕೊಟಿ ರೂ.ಗಳ 'ಕೆಟ್ಟ ಸಾಲ'ಗಳು ಕಾರ್ಪೊರೇಟ್‌ಗಳಿಗೆ ನಿಜವಾಗಿ ಕೋಟ್ಯಂತರ ಭಾರತೀಯರ ಜಿವಮಾನದ ಉಳಿತಾಯಗಳಲ್ಲಿ ಎಷ್ಟು ಕೋಟಿ ರೂ.ಗಳನ್ನು ಲೂಟಿ ಮಾಡಲು ಬಿಡಲಾಗಿದೆ ಎಂಬುದರ ಒಂದು ಸಂಕೇತವನ್ನು ಕೊಡುತ್ತವಷ್ಟೇ, ನಿಜಪ್ರಮಾಣ ರಿಝರ್ವ್ ಬ್ಯಾಂಕಿನ ನಿವೃತ್ತ ಡೆಪ್ಯುಟಿ ಗವರ್ನರ್ ಹೇಲಿದ್ದಕ್ಕಿಂತಲೂ ಹೆಚ್ಚಿರುವ ಸಾಧ್ಯತೆಯೇ ಹೆಚ್ಚು ಎಂದು ವಿಶ್ಲೇಷಕರು ಹೇಳುತ್ತಾರೆ.



ಫೆಬ್ರುವರಿ 28: ಜನ–ವಿರೋಧಿ 'ಆರ್ಥಿಕ ಸುಧಾರಣೆ'ಗಳ ವಿರುದ್ಧ 10ಲಕ್ಷ ಬ್ಯಾಂಕ್ ನೌಕರರು,ಅಧಿಕಾರಿಗಳ ಮುಷ್ಕರ

ಕಳೆದ ಎರಡು ದಶಕಗಳಿಂದ ದೇಶದ, ಜನತೆಯ ಮತ್ತು ದುಡಿಯುವ ಜನಗಳ ಹಿತಗಳಿಗೆ ವಿರುದ್ಧವಾಗಿರುವ 'ಆರ್ಥಿಕ ಸುಧಾರಣೆ'ಗಳ ವಿರುದ್ಧ ಹೋರಾಟ ನಡೆಸುತ್ತಿರುವ ಬ್ಯಾಂಕ್ ನೌಕರರು ಇದರ ಮುಂದುವರಿಕೆಯಾಗಿ ಫೆಬ್ರುವರಿ 28ರಂದು ಒಂದು ದಿನದ ದೇಶವ್ಯಾಪಿ ಮುಷ್ಕರವನ್ನು ನಡೆಸಲಿದ್ದಾರೆ. ಸುಮಾರು 10ಲಕ್ಷ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳನ್ನು ಪ್ರತಿನಿಧಿಸುವ ಸಂಘಟನೆಗಳ ಐಕ್ಯ ವೇದಿಕೆಯಾದ ಯುಎಫ್‌ಬಿಯು ಈ ಮುಷ್ಕರಕ್ಕೆ ಕರೆ ನೀಡಿದೆ. ಈಗಲೂ ಜನಗಳನ್ನು ಹಿಂಡುತ್ತಿರುವ ನೊಟು ರದ್ಧತಿ ಮತ್ತು ಹೆಚ್ಚೆಚ್ಚು ಗಂಭೀರಗೊಳ್ಳುತ್ತಿರುವ ಬ್ಯಾಂಕುಗಳ ಸುಸ್ತಿಸಾಲಗಳ ಪರಿಸ್ತಿತಿಯ ಹಿನ್ನೆಲೆಯಲ್ಲಿ ಈ ಮುಷ್ಕರ ನಡೆಯುತ್ತಿದೆ.


ನೋಟುರದ್ಧತಿಯ 50 ದಿನಗಳಲ್ಲಿ ಬ್ಯಾಂಕ್ ನೌಕರರು ಹಗಲು ರಾತ್ರಿಯೆನ್ನದೆ ಕೆಲಸ ಮಾಡಿದ್ದಾರೆ. ಆದರೆ ಅವರ ಈ ಪಾತ್ರವನ್ನು ಗುರುತಿಸಲು ಸರಕಾರ ಮತ್ತು ಆಡಳಿತ ಮಂಡಳಿಗಳು ನಿರಾಕರಿಸುತ್ತಿವೆ. ಕಾನೂನಿನ ಪ್ರಕಾರ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಸೂಕ್ತ ಪರಿಹಾರ ಕೊಡಲು ನಿರಾಕರಿಸುತ್ತಿವೆ ಮಾತ್ರವಲ್ಲ, ಈ ಕ್ರಮದ ನಿರ್ವಹಣೆಯ ಖರ್ಚುಗಳ ಹೊರೆ ಬ್ಯಾಂಕುಗಳ ಮೇಲೆಯೇ ಬರಲಿದ್ದು ಅದು ಬ್ಯಾಂಕುಗಳ ಬ್ಯಾಲನ್ಸ್ ಶೀಟಿನ ಮೇಲೆ ದುಷ್ಪರಿಣಾಮ ಬೀರಲಿದೆ.

ಕಾರ್ಪೊರೇಟ್‌ಗಳು ಸಾಲಗಳನ್ನು ಹಿಂದಿರುಗಿಸದೆ ಉಂಟಾಗಿರುವ 'ಕೆಟ್ಟ ಸಾಲ'ಗಳು ಬ್ಯಾಂಕುಗಳನ್ನು ಪಿಡಿಸುತ್ತಿದ್ದರೂ ಅಂತಹ ಕಾರ್ಪೊರೇಟ್‌ಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳದೆ, ಅದನ್ನು ನಿರ್ಲಕ್ಷಿಸಿ ಸರಕಾರ ತನ್ನ 'ಸುಧಾರಣೆ'ಗಳನ್ನು ನೌಕರ–ವಿರೋಧಿ ಕ್ರಮಗಳನ್ನು ಮುಂದುವರೆಸಲು ಟೊಂಕ ಕಟ್ಟಿದೆ. ಇದನ್ನು ವಿರೋಧಿಸಿ ಈ ಮುಷ್ಕರವನ್ನು ನಡೆಸಲಾಗುತ್ತಿದೆ ಎಂದು ಯುಎಫ್‌ಬಿಯು ತನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಎಟಿಎಂಗಳು ಈಗಲೂ ಖಾಲಿಯಾಗಿರುವುದಕ್ಕೆ ಸರಕಾರ ಹೊಣೆಯಲ್ಲ, ಜನಗಳೇ ಕಾರಣ!

ನೋಟುರದ್ದತಿಯಾಗಿ ನೂರು ದಿನಗಳು ದಾಟಿವೆ. ಈ ವೇಳೆಗೆ ರಿಝರ್ವ್ ಬ್ಯಾಂಕ್ ಸಾಕಷ್ಟು ಪ್ರಮಾಣದಲ್ಲಿ ಹೊಸ ನೊಟುಗಳನ್ನು ಪೂರೈಸಲಾಗಿದೆ, ನಗದು ಹಿಂತೆಗೆದುಕೊಳ್ಳುವುದರ ಮೇಲಿನ ನಿರ್ಬಂಧಗಳನ್ನು 'ಮತ್ತಷ್ಟು' ಸಡಿಲಿಸಲಾಗಿದೆ ಎಂದು ಪ್ರಕಟಿಸಿತು. ಕಳೆದ ವಾರ ಹಣಕಾಸು ಮಂತ್ರಿಗಳಂತೂ ಇನ್ನೂ ಮುಂದೆ ಹೋಗಿ ಎಟಿಎಂಗಳಲ್ಲಿ ಸಾಕಷ್ಟು ನೋಟುಗಳಿಲ್ಲದ ದಿನಗಳೇ ಈಗ ಇಲ್ಲ ಎಂದರು.

ಆದರೆ ಒಂದೆರಡು ದಿನಗಳ ನಂತರ ಅವರ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಎಟಿಎಂಗಳು ಈಗಲೂ 'ನೋ ಕ್ಯಾಷ್' 'ನಗದು ಇಲ್ಲ' ಎನ್ನುತ್ತಿವೆ ಎಂಬುದನ್ನು ಪರೋಕ್ಷವಾಗಿಯಾದರೂ ಒಪ್ಪಿಕೊಂಡರು. ಆದರೆ ಅವರ ಪ್ರಕಾರ ಇದಕ್ಕೆ ಸರಕಾರ ಅಥವ ಬ್ಯಾಂಕ್ ಕಾರಣವಲ್ಲ, ಸ್ವತಃ ಖಾತೆದಾರರೇ ಕಾರಣವಂತೆ. ಶಬ್ದಗಳೊಡನೆ ಆಟವಾಡುವುದರಲ್ಲಿ ನಿಸ್ಸೀಮರೆನಿಸಿರುವ ಪ್ರಧಾನ ಮಂತ್ರಿಗಳನ್ನು ಅನುಸರಿಸಿ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿಗಳು ಇದಕ್ಕೆ ಹೊಸದೊಂದು ಪದವನ್ನು ಸೃಷ್ಟಿಸಿದ್ದಾರಂತೆ–'ಓವರ್‌ಡ್ರಾಯಲ್' ಎಂದು .ಈ ಮೂಲಕ ಜನಗಳು ಇತರರಿಗೆ ಪಡೆಯಲು ನಗದು ಇಲ್ಲದಂತೆ ಮಾಡುತ್ತಿದ್ದಾರೆ ಎಂಬುದು ಅವರ ಆಪಾದನೆ!



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಬ್ಯಾಂಕುಗಳಲ್ಲಿ 'ಓವರ್‌ಡ್ರಾಫ್ಟ್' ಎಂಬ ಪದ ಇದೆ. ಅಂ–ದರೆ ಖಾತೆದಾರನ ಖಾತೆಯಲ್ಲಿ ಇರುವುದಕ್ಕಿಂತ ಹೆಚ್ಚು ಹಣವನ್ನು ಸಾಲವಾಗಿ ಪಡೆಯುವುದು ಎಂದು. ಆದರೆ ಇದೀಗ ತನ್ನದೇ ಹಣವನ್ನು ಸರಕಾರ ಬಯಸುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪಡೆಯುವುದು ಎಂದು ಅರ್ಥೈಸಬೇಕಾಗಿದೆ. ಅಂದರೆ ತೋರಿ–ಕೆಗಾಗಿ ಮಾತ್ರ ನಿರ್ಬಂಧವನ್ನು ಸಡಿಲಿಸಲಾಗಿದೆ, ಆದರೆ ಜನಗಳು ತಮ್ಮದೇ ಹಣವನ್ನು ಆ ಮಿತಿಯೊಳಗೂ ಪಡೆಯಬಾರದು ಎಂಬುದು ಸರಕಾರದ ಆಶಯವಿರಬಹುದೇ?

ಒಟ್ಟಿನಲ್ಲಿ ನಿಜಸಂಗತಿಯೆಂದರೆ

* ಪರಿಸ್ಥಿತಿ ಇನ್ನೂ ಸರಕಾರ ಹೇಳುವಂತೆ ಸಾಮಾನ್ಯವಾಗಿಲ್ಲ
* ಸರಕಾರ/ಬ್ಯಾಂಕ್ ನಿಜ ಹೇಳುತ್ತಿಲ್ಲ– ಬೇಕಾದಷ್ಟು ನಗದು ಇನ್ನೂ ಇಲ್ಲ
* ಜನಗಳಿಗೆ ತಾನು ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ನಗದು ಬೇಕಿಲ್ಲ ಎಂದು ಸರಕಾರ ಹೇಳುವುದನ್ನು ಒಪ್ಪಿಕೊಳ್ಳಲು ಜನಗಳಿಗೆ ಆಗುತ್ತಿಲ್ಲ.

ಆದರೂ ಶಬ್ದಗಳ ಕಸರತ್ತಿನಲ್ಲಿ ಇನ್ನೂ ಎಷ್ಟು ದಿನಗಳನ್ನು ಕಳೆಯಬಹುದು ಎಂದು ಈ ಸರಕಾರ ಲೆಕ್ಕ ಹಾಕಿರಬಹುದು ಎಂದು ಒಬ್ಬ ವಿಶ್ಲೇಷಕರು ಪ್ರಶ್ನಿಸಿದ್ದಾರೆ.

ಪ್ರಧಾನ ಮಂತ್ರಿಗಳು ಚುನಾವಣಾ ಪ್ರಚಾರ ಸಭೆಯಲ್ಲಿ ಮಾತಾಡುತ್ತ ಹಳ್ಳಿಯಲ್ಲಿ ಕಬ್ರಿಸ್ತಾನ್ ಇದ್ದರೆ ಸ್ಮಶಾನವೂ ಇರಬೇಕು ಎಂದರು


–ಸುದ್ದಿ



ಕಬ್ರಿಸ್ತಾನ್‌ಗಳು ಮತ್ತು ಸ್ಮಶಾನಗಳ ಬಗ್ಗೆ ನಿಮ್ಮ ಕಾಳಜಿಯೇನೋ ಒಳ್ಳೆಯದೇ. ಆದರೆ ಬದುಕಿರುವವರ ಬಗ್ಗೆಯೂ ಸ್ವಲ್ಪ ಯೋಚಿಸಿ ಮಾರಾಯ್ರೆ!

ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಹಣಕಾಸು ಬಂಡವಾಳ ಮತ್ತು ಅದರ ಬಹಿರಂಗ



ಕೆ.ಎಂ.ನಾಗರಾಜ್

ಹಣಕಾಸು ಬಂಡವಾಳವು ಸಾಮಾಜಿಕ ಬಂಡವಾಳದ ಮೇಲೆ ಅಷ್ಟೇ ಅಲ್ಲ, ಔದ್ಯಮಿಕ ಬಂಡವಾಳದ ಮೇಲೂ ಈಗ ದಬ್ಬಾಳಿಕೆ ಮಾಡುತ್ತಿದೆ. ಉತ್ಪಾದನೆ ಅಥವಾ ಸೇವಾ ಕ್ಷೇತ್ರಗಳಲ್ಲಿ ಬಂಡವಾಳ ಹೆಚ್ಚಾಗಿ ಹೂಡಿಕೆಯಾಗುತ್ತಿಲ್ಲ. ಬಂಡವಾಳದ ಹೆಚ್ಚಿನ ಪಾಲು ಸಟ್ಟಾ ವ್ಯವಹಾರಗಳಲ್ಲಿ ಹೂಡಿಕೆಯಾಗುತ್ತಿದೆ. ಅದು ಚಾಣಾಕ್ಷ ರೀತಿಯಲ್ಲಿ ಅತ್ತಿಂದಿತ್ತ ಚಲಿಸಬಲ್ಲದು. ಅಂಕಿಗಳ ರೂಪದಲ್ಲಿ ಅದು ಚಲಿಸುತ್ತದೆ, ನಗದು ರೂಪದಲ್ಲಲ್ಲ. ಅಂದರೆ, ಡಿಜಿಟಲ್ ಹಣವೂ ಸೇರಿದಂತೆ, ಹಲವು ಪ್ರಕಾರದ ಡೆಬಿಟ್, ಕ್ರೆಡಿಟ್ ರೂಪದಲ್ಲಿ ಅದು ಚಲಿಸುತ್ತದೆ.

ಅಮೆರಿಕಾದ ಅಧ್ಯಕ್ಷರಾಗಿ ಆಯ್ಕೆಯಾದ ಡೊನಾಲ್ಡ್ ಟ್ರಂಪ್ ಅವರ ವಿಜಯವು, ಸಾಮಾಜಿಕ ಬಂಡವಾಳದ ಮೇಲೆ ಮಾತ್ರವಲ್ಲದೆ ಔದ್ಯಮಿಕ ಬಂಡವಾಳದ ಮೇಲೆಯೂ ಹಣಕಾಸು ಬಂಡವಾಳವು ನಡೆಸುವ ಹಲ್ಲೆಯಾಗಿದೆ ಎನ್ನುತ್ತಾರೆ **ತಬೀಶ್ ಖೈರ್**.

ಭಾರತ ಮೂಲದ ಇವರು ಡೆನ್ಮಾರ್ಕಿನಲ್ಲಿ ಉಪನ್ಯಾಸಕರಾಗಿದ್ದಾರೆ. ಅವರೊಬ್ಬ ಕಾದಂಬರಿಕಾರ ಮತ್ತು ಅಧ್ಯಯನಕಾರ. 'The Hindu' ಪತ್ರಿಕೆ ಪ್ರಕಟಿಸಿರುವ ತಬೀಷ್ ಖೈರ್ ಅವರ Finance and Façade ಲೇಖನದ ಭಾವಾನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.

ಫ್ರೆಂಚ್ ಲೇಖಕನೊಬ್ಬ ಬರೆದಿರುವ **ಪುಟ್ಟ ರಾಜಕುಮಾರ** ಎಂಬ ಪುಸ್ತಕವಿದೆ. ಮಕ್ಕಳಿಗಾಗಿ ಬರೆದದ್ದೆಂದು ಹೇಳಿದ್ದರೂ ಅದು ಎಲ್ಲ ವಯಸ್ಸಿನವರನ್ನೂ ಉದ್ದೇಶಿಸಿದೆ. ಅದರ ಸಾರಾಂಶ ಹೀಗಿದೆ:

ಒಬ್ಬ ಹವ್ಯಾಸಿ ವಿಮಾನ ಚಾಲಕನ ವಿಮಾನವು ಸಹಾರಾ ಮರುಭೂಮಿಯಲ್ಲಿ ನೆಲಕ್ಕೆ ಬೀಳುತ್ತದೆ. ಅದನ್ನು ರಿಪೇರಿಮಾಡುತ್ತಿದ್ದಾಗ ಒಬ್ಬ ಪುಟ್ಟ ಬಾಲಕ ಅಲ್ಲಿಗೆ ಬರುತ್ತಾನೆ. ತಾನು ಒಂದು ಕ್ಷುದ್ರ ಗ್ರಹದಿಂದ ಬಂದಿರುವುದಾಗಿಯೂ ಮತ್ತು ದಾರಿಯಲ್ಲಿ ಅನೇಕ ಗ್ರಹಗಳನ್ನು ನೋಡಿರುವುದಾಗಿಯೂ ಆ ಬಾಲಕ ಹೇಳುತ್ತಾನೆ. ಅಲ್ಲಿ ಕಂಡ ವಿಚಿತ್ರ ವ್ಯಕ್ತಿಗಳನ್ನು ವರ್ಣಿಸುತ್ತಾನೆ. ಆ ಪುಟ್ಟ ರಾಜಕುಮಾರ ನೋಡಿದ್ದ ಪ್ರತಿಯೊಂದು ಗ್ರಹವೂ ಮನುಷ್ಯ ಸ್ವಭಾವಗಳ ಸಂಕೇತಗಳು. ಭೂ ಗ್ರಹ ತಲುಪಿದ ಬಳಿಕ ನರಿಯೊಂದು ತನಗೆ ಕಲಿಸಿದ ಪಾಠವನ್ನು ಆ ಬಾಲಕ ತಿಳಿಸುತ್ತಾನೆ: 'ಯಾರನ್ನಾದರೂ ಅರ್ಥಮಾಡಕೊಳ್ಳುವ ಮುನ್ನ ಅವರನ್ನು ಪಳಗಿಸಬೇಕು'.

ಗೋಡೆಗೆ ಕಿಟಕಿ–ಬಾಗಿಲುಗಳಿವೆ;
ತಲೆಯ ಮೇಲೆ ಚಾವಣಿಯೇ ಇಲ್ಲದ ಗ್ರಹ

ಈ ನಮ್ಮ ಪುಟ್ಟ ರಾಜಕುಮಾರ ಭೇಟಿಮಾಡಿರದ ಒಂದು ಗ್ರಹ ಇದೆ ಎಂದು ಊಹಿಸಿಕೊಳ್ಳಿ. ಅದನ್ನು ಸಾವಿರದ ಒಂದು ಖಂಡಗಳಾಗಿ ಭಾಗ ಮಾಡಲಾಗಿದೆ. ಆ ಖಂಡಗಳ ನಡುವೆ ಗೋಡೆಗಳಿವೆ. ಆ ಗೋಡೆಗಳಿಗೆ ಕಿಟಕಿ ಬಾಗಿಲುಗಳೂ ಇವೆ. ಆದರೆ, ಆ ಖಂಡದ ಗೋಡೆಗಳ ಮೇಲೆ ಚಾವಣಿಯೇ ಇಲ್ಲ. ಹಾಗಾಗಿ, ಬಿರುಗಾಳಿ ಬೀಸಿದಾಗ ಒಂದಲ್ಲ ಒಂದು ಖಂಡ ಹಾನಿಗೊಳಗಾಗುತ್ತದೆ. ಕೆಲವೊಮ್ಮೆ ಅದು ಎಲ್ಲ ಖಂಡಗಳಲ್ಲೂ ಒಂದೊಂದು ರೀತಿಯಲ್ಲಿ ಹಾನಿ ಉಂಟುಮಾಡುತ್ತದೆ: ಒಂದು ಪ್ರದೇಶದಲ್ಲಿ ನೆರೆಯ ಹಾವಳಿ, ಇನ್ನೊಂದರಲ್ಲಿ ಆಲಿಕಲ್ಲಿನ ಸುರಿಮಳೆ, ಮತ್ತೊಂದು ಕಡೆ ನೆಲ ಕುಸಿತ, ಇನ್ನೂ ಒಂದೆಡೆ ಪ್ರಚಂಡ ಚಂಡಮಾರುತ, ಹೀಗೆ ಎಲ್ಲ ಪ್ರದೇಶಗಳಲ್ಲೂ ಹಾನಿಯೇ.

ಮಾನವ ನಿರ್ಮಿತ ಬಿರುಗಾಳಿ

ಈ ಭೂಖಂಡದಲ್ಲಿ ನೆಲಸಿರುವವರು ವಿಚಿತ್ರ ಪ್ರಾಣಿಗಳು. ಅವರು ಏನನ್ನೂ ತಲೆ ಎತ್ತಿ ನೋಡಲಾರರು. ಹಾಗಾಗಿ, ಬಿರುಗಾಳಿ ಎದ್ದಾಗ ಹೆಚ್ಚಿನ ಮಂದಿಗೆ ಗೊತ್ತಾಗುವುದೇ ಇಲ್ಲ. ಕೆಲವೇ ಮಂದಿ ಅದನ್ನು ಗಮನಿಸುತ್ತಾರೆ. ಅವರು ಅಸಹಾಯಕರು. ಬಿರುಗಾಳಿ ಎದ್ದಾಗ ಅವರೇನು ಮಾಡಬಲ್ಲರು? ಈ ಭೂ ಗ್ರಹದ ಬೇರೆ ಬೇರೆ ಖಂಡಗಳಲ್ಲಿ ಆಡಳಿತ ನಡೆಸುವ ಅಧ್ಯಕ್ಷ, ಪ್ರಧಾನ ಮಂತ್ರಿ, ದೊರೆ, ಅಥವಾ ಸರ್ವಾಧಿಕಾರಿ, ಇವರುಗಳ ಪರಿಸ್ಥಿತಿಯೂ ಹೀಗೆಯೇ. ಕೆಲವರಂತೂ ಬಿರುಗಾಳಿ ಬೀಸಿದರೆ ಅನುಕೂಲವಾಗುತ್ತದೆ ಎನ್ನುತ್ತಾರೆ. ಅವರೆಲ್ಲರೂ ಮಾಡುವ ಒಂದೇ ಕೆಲಸವೆಂದರೆ, ಅವರವರ ಖಂಡದ ಕಿಟಕಿ, ಬಾಗಿಲು ಮತ್ತು ಜನರನ್ನು ನಿಯಂತ್ರಣದಲ್ಲಿಡುವುದು.

ನಾವೀಗ ಭೂಮಿಯ ಮೇಲೆ ವಾಸಿಸುತ್ತಿರುವೆವು. ಇಲ್ಲೊಂದು ವ್ಯತ್ಯಾಸವಿದೆ. ನಮ್ಮನ್ನು ಆವರಿಸಿರುವ ಬಿರುಗಾಳಿ ಮಾನವ ನಿರ್ಮಿತ.

ಹಣಕಾಸು ಬಂಡವಾಳವೇ ಆ ಬಿರುಗಾಳಿ. ಅದರಿಂದ ರಕ್ಷಿಸಿಕೊಳ್ಳಲು ನಮ್ಮ ಸರ್ಕಾರಗಳು ಏನೂ ಮಾಡುತ್ತಿಲ್ಲ. ಏನೂ ಮಾಡಲಾರವು. ಪ್ರಧಾನ ಶಕ್ತಿ ಕೇಂದ್ರವಾಗಿರುವ ಹಣಕಾಸು ಬಂಡವಾಳವನ್ನು ಮತ್ತು ಅದರ ಜೂಜುಕೋರ ಹೂಡಿಕೆಗಳನ್ನು ನಿಯಂತ್ರಿಸಲಾರದ ಸ್ಥಿತಿಯಲ್ಲಿ ರಾಷ್ಟ್ರೀಯ ಸರ್ಕಾರಗಳಿರುವಾಗ, ನೀವೇನು ಮಾಡಲು ಸಾಧ್ಯ? ಈ ಸರ್ಕಾರಗಳು ಜನರನ್ನು ನಿಯಂತ್ರಿಸುತ್ತವೆ–ನಾಗರೀಕರು ಮತ್ತು ವಿದೇಶೀಯರನ್ನು, ಅಷ್ಟೇ. ಪ್ರಪಂಚದ ಎಲ್ಲ ದೇಶಗಳಲ್ಲೂ ಈ ಹೊತ್ತಿನ ಪರಿಸ್ಥಿತಿ ಹೆಚ್ಚು ಕಡಿಮೆ ಹೀಗೆಯೇ.

ಉದಾರ ಬಂಡವಾಳದ ಅವಸಾನ

1980ರ ದಶಕದಲ್ಲಿ, ಸಾಂಪ್ರದಾಯಿಕ ಬಂಡವಾಳಶಾಹಿಗೆ ಸಂಬಂಧಿಸಿದಂತೆ ಒಂದು ವಿಚಿತ್ರ ವಿದ್ಯಮಾನ ಘಟಿಸಿತು. ಅದನ್ನು ಕೊಲೆ ಮಾಡಲಾಯಿತು. ಆ ಪಾತಕವನ್ನು ಯಾರೂ ಗಮನಿಸಲಿಲ್ಲ. ತೆರೆದ ಮನಸ್ಸಿನ ಸಂಪ್ರದಾಯ ಹೊಂದಿದ್ದ ಬಂಡವಾಳಶಾಹಿಯ ಮೃತ ದೇಹದ ಜೊತೆಯಲ್ಲಿಯೇ ನಾವು ಈಗ ವ್ಯವಹರಿಸುತ್ತಿದ್ದೇವೆ. ಅದರಿಂದಾಗಿಯೇ ಎಡಪಂಥೀಯ ವಿಮರ್ಶೆಗಳು ಸೋಲುತ್ತಿವೆ. ಈ ಮೃತ ಬಂಡವಾಳಶಾಹಿಯನ್ನೇ ನಾವು ಈಗ 'ನವ–ಉದಾರವಾದ' ಎಂದು ಕರೆಯುತ್ತೇವೆ. ಆದರೆ, ನವ–ಉದಾರಿ ಬಂಡವಾಳಶಾಹಿಗೂ ಮತ್ತು ಸಾಂಪ್ರದಾಯಿಕ ಬಂಡವಾಳಶಾಹಿಗೂ ಇರುವ ವ್ಯತ್ಯಾಸವು ಹಗಲು ರಾತ್ರಿಗಳ ನಡುವೆ ಇರುವ ವ್ಯತ್ಯಾಸದಷ್ಟಿದೆ. ನವ–ಉದಾರವಾದ ಎಂಬ ಪದದ ಬಳಕೆಯೇ ಒಂದು ಅಪಪ್ರಯೋಗ. ನವ–ಉದಾರಿ ಬಂಡವಾಳಶಾಹಿಗೆ ಮುಕ್ತ ಆರ್ಥಿಕ ಚಿಂತನೆಗಳೊಂದಿಗೆ ಯಾವ ಸಂಬಂಧವೂ ಇಲ್ಲ.

ಪ್ರಭುತ್ವದೊಂದಿಗೆ ಮಾರುಕಟ್ಟೆಗಳು ಹೊಂದಿರುವ ಸಂಬಂಧಗಳು ಪ್ರತ್ಯೇಕಗೊಳ್ಳಬೇಕೆಂದು ಉದಾರವಾದಿ ಆರ್ಥಿಕ ಚಿಂತನೆಯು ಪಟ್ಟು ಹಿಡಿದಿತ್ತು. ಮಾರುಕಟ್ಟೆಗಳ ವ್ಯವಹಾರಗಳಲ್ಲಿ ಸರ್ಕಾರಗಳ ಹಸ್ತಕ್ಷೇಪವನ್ನು ಅದು ಹೀಯಾಳಿಸಿತ್ತು. ಆದರೆ, ಸರ್ಕಾರಗಳು ಮಾರುಕಟ್ಟೆಗಳ ವ್ಯವಹಾರಗಳಲ್ಲಿ ಮಧ್ಯವರ್ತಿಯಾಗಿ ಉಳಿಯುವಂತೆ ನವ–ಉದಾರವಾದ ಬಯಸುತ್ತದೆ–ಅದೇನಿದ್ದರೂ ಹಣಕಾಸು ಬಂಡವಾಳ ಮತ್ತು ಬ್ಯಾಂಕ್‌ಗಳ ಪರವಾಗಿ ಮಾತ್ರವೇ. ಹಣಕಾಸು ಬಂಡವಾಳದ ಜೂಜುಕೋರ ಹೂಡಿಕೆಗಳಿಂದಾಗಿ ಉಂಟಾದ ಬಿಕ್ಕಟ್ಟಿನ ಪ್ರತಿ ಸಂದರ್ಭದಲ್ಲಿಯೂ, ಬ್ಯಾಂಕ್‌ಗಳು ಮತ್ತು ಇತರ ಹಣಕಾಸು ಸಂಸ್ಥೆಗಳನ್ನು ಬಚಾವ್ ಮಾಡಲು, ಸರ್ಕಾರವು ಜನಸಾಮಾನ್ಯರಿಂದ ವಸೂಲುಮಾಡಿದ ತೆರಿಗೆ ಹಣವನ್ನು ಬಳಸುತ್ತದೆ. ಉದಾರವಾದಿ ಬಂಡವಾಳಶಾಹಿಯನ್ನು ಸ್ವಲ್ಪ ಮಟ್ಟಿನ 'ಪ್ರಭುತ್ವ ಬಂಡವಾಳಶಾಹಿ' ಎಂದು ಕೆಲವರು ಕರೆಯುವುದೇ ಒಂದು ಮಹತ್ತರ ಬದಲಾವಣೆಯ ಸೂಚನೆ.

ಹತ್ತೊಂಭತ್ತನೇ ಶತಮಾನದಿಂದಲೂ, ಉತ್ಪಾದನೆ ಅಥವಾ ಸೇವೆಗಳಿಗಿಂತಲೂ ಹಣವೇ ಮುಖ್ಯವಾದ ಅಂಶ ಎಂದು ಬಂಡವಾಳಶಾಹಿ ಸಮಾಜಗಳು ಪರಿಗಣಿಸಿವೆ. ಸರಕು, ಸೇವೆಗಳ ಮೇಲಿನ ಬೇಡಿಕೆಯಲ್ಲಿ ಏರಿಳಿತಗಳಿರುತ್ತವೆ. ಮಾರಾಟಕ್ಕಿರುವುದು ಒಂದು ಸರಕೇ ಇರಬಹುದು ಅಥವಾ ಒಂದು ಸೇವೆಯೇ ಇರಬಹುದು, ಅದೇನಿದ್ದರೂ, ಕೊಳ್ಳಲು ಹಣ ಬಳಕೆಮಾಡಲೇಬೇಕು. ಹಾಗಾಗಿ, ಅತ್ತಿಂದಿತ್ತ ಹಣ ಹರಿದಾಡಿಸುವ ಕೆಲಸವೇ ಮುಖ್ಯವಾಗುತ್ತದೆ.

ಸಟ್ಟಾ ವ್ಯವಹಾರಗಳಲ್ಲಿ ಹಣಕಾಸಿನ ಹೂಡಿಕೆ 1980ರ ದಶಕದಲ್ಲಿ ಆರಂಭವಾಯ್ತು. ಈ ಪ್ರವೃತ್ತಿಯು ಬಂಡವಾಳಶಾಹಿಯ ಹುಟ್ಟು ಗುಣ. ಸಟ್ಟಾ ಹೂಡಿಕೆಗಳೇ ಮೇಲುಗೈ ಪಡೆದಾಗ, ಪರಿಣಾಮ ಬೇರೆಯದೇ ಆಗುತ್ತದೆ. ಈ ಹೊತ್ತಿನಲ್ಲಿ, ಸಟ್ಟಾ ವ್ಯವಹಾರಗಳಲ್ಲಿ ಹೂಡಿಕೆಯಾಗಿರುವ ಹಣದ ಮೊತ್ತವು ವಿಶ್ವದ ಒಟ್ಟು ವ್ಯಾಪಾರದ ಮೊತ್ತಕ್ಕಿಂತಲೂ ಅಧಿಕವಾಗಿದೆ. ಹಾಗಾಗಿ, ಹಣಕಾಸು ಬಂಡವಾಳವು ಸಾಮಾಜಿಕ ಬಂಡವಾಳದ ಮೇಲೆ ಅಷ್ಟೇ ಅಲ್ಲ, ಔದ್ಯಮಿಕ ಬಂಡವಾಳದ ಮೇಲೂ ಈಗ ದಬ್ಬಾಳಿಕೆ ಮಾಡುತ್ತಿದೆ. ಉತ್ಪಾದನೆ ಅಥವಾ ಸೇವಾ ಕ್ಷೇತ್ರಗಳಲ್ಲಿ ಬಂಡವಾಳ ಹೆಚ್ಚಾಗಿ ಹೂಡಿಕೆಯಾಗುತ್ತಿಲ್ಲ. ಬಂಡವಾಳದ ಹೆಚ್ಚಿನ ಪಾಲು ಸಟ್ಟಾ ವ್ಯವಹಾರಗಳಲ್ಲಿ ಹೂಡಿಕೆಯಾಗುತ್ತಿದೆ. ಅದು ಚಾಣಾಕ್ಷ ರೀತಿಯಲ್ಲಿ ಅತ್ತಿಂದಿತ್ತ ಚಲಿಸಬಲ್ಲದು. ಅಂಕಿಗಳ ರೂಪದಲ್ಲಿ ಅದು ಚಲಿಸುತ್ತದೆ, ನಗದು ರೂಪದಲ್ಲಲ್ಲ. ಅಂದರೆ, ಡಿಜಿಟಲ್ ಹಣವೂ ಸೇರಿದಂತೆ, ಹಲವು ಪ್ರಕಾರದ ಡೆಬಿಟ್, ಕ್ರೆಡಿಟ್ ರೂಪದಲ್ಲಿ ಅದು ಚಲಿಸುತ್ತದೆ.

ಅಮೆರಿಕಾದ ಅಧ್ಯಕ್ಷರಾಗಿ ಆಯ್ಕೆಯಾದ ಡೊನಾಲ್ಡ್ ಟ್ರಂಪ್ ಅವರ ವಿಜಯವು, ಸಾಮಾಜಿಕ ಬಂಡವಾಳದ (ಅಂದರೆ, ಜನ ಕಲ್ಯಾಣ ಯೋಜನೆಗಳು, ಸಾರ್ವಜನಿಕ ಸೌಲಭ್ಯಗಳು) ಮೇಲೆ ಮಾತ್ರವಲ್ಲದೆ ಔದ್ಯಮಿಕ ಬಂಡವಾಳದ ಮೇಲೆಯೂ ಹಣಕಾಸು ಬಂಡವಾಳವು ನಡೆಸುವ ಹಲ್ಲೆಯಾಗಿದೆ. ಬಹಳ ದಿನಗಳಿಂದಲೂ ಮೇಲಿಂದ ಮೇಲೆ ದಾಳಿಗೆ ಒಳಗಾಗಿರುವ ಜನಕಲ್ಯಾಣ ಯೋಜನೆಗಳು, ಸಾರ್ವಜನಿಕ ಸೌಲಭ್ಯಗಳು, ಜಜ್ಜಿದ ನುಗ್ಗೆಕಾಯಿ ಆಗಿವೆ. ಹಣಕಾಸು ಬಂಡವಾಳದ ಈ ದಾಳಿ ಈಗ ಔದ್ಯಮಿಕ ಬಂಡವಾಳದ ಮೇಲೆಯೂ ನಡೆದಿದೆ. ದೇಶದಿಂದ ಪಲಾಯನವಾಗಿರುವ ಉದ್ಯೋಗಗಳನ್ನು ಟ್ರಂಪ್ ಮರಳಿ ಮನೆಗೆ ತರುವ ಪ್ರಯತ್ನದಲ್ಲಿ ಯಶಸ್ವಿಯಾಗಬಹುದು. ಆಗ, ಹಣಕಾಸು ಬಂಡವಾಳಕ್ಕೆ ಇನ್ನೂ ಹೆಚ್ಚಿನ ಸ್ವಾತಂತ್ರ್ಯ ಸಿಗುತ್ತದೆ ಮತ್ತು ಔದ್ಯಮಿಕ ಬಂಡವಾಳದ ಮೇಲೆ ವಿಧಿಸುವ ನಿರ್ಬಂಧಗಳು ಹೆಚ್ಚುತ್ತವೆ. ಸರ್ಕಾರದ ಉನ್ನತ ಹುದ್ದೆಗಳಿಗೆ ವಾಲ್ ಸ್ಟ್ರೀಟ್ ಪ್ರಮುಖರನ್ನು ಟ್ರಂಪ್ ನೇಮಕ ಮಾಡಿದ್ದಾರೆ. ಇದು, ಉದ್ಯಮಪತಿಗಳು ತಮ್ಮ ಔದ್ಯಮಿಕ ಬಂಡವಾಳವನ್ನು ಸಟ್ಟಾ ವ್ಯವಹಾರಗಳಿಗೆ ಹೂಡಿಕೆಯಾಗುವ ಹಣಕಾಸು ಬಂಡವಾಳವಾಗಿ ಪರಿವರ್ತಿಸುವ ಬದಲಾವಣೆಯನ್ನು ಸೂಚಿಸುತ್ತದೆ. ಭಾರತದಲ್ಲಿ ನೋಟು ರದ್ದತಿಯು ಭ್ರಷ್ಟಾಚಾರದ ವಿರುದ್ಧ ಹೋರಾಡುವ ಒಂದು ಪ್ರಾಮಾಣಿಕ ಪ್ರಯತ್ನವೇ ಆಗಿರಬಹುದು. ಸರ್ಕಾರದ ನಿರೀಕ್ಷೆ ಏನಾದರೂ ಇರಬಹುದು, ನೋಟು ರದ್ದತಿಯ ಪ್ರಕ್ರಿಯೆಯು, ಹಣಕಾಸು ಬಂಡವಾಳದ ಏರುಗತಿಯನ್ನು ಬಲಪಡಿಸುತ್ತದೆ.

ಫ್ರೆಂಚ್ ಸಮಾಜಶಾಸ್ತ್ರಜ್ಞ ಮೌರಿಝಿಯೊ ಲಝರಾಟೊ ಬರೆದಿರುವ Governing by Debt ಎಂಬ ಪುಸ್ತಕದಲ್ಲಿ ಪ್ರಸ್ತಾಪಿಸಿರುವಂತೆ, ಎಲ್ಲ ರಾಷ್ಟ್ರೀಯ ಸರ್ಕಾರಗಳೂ ಮೂಲಭೂತವಾಗಿ ತೊಡಗಿಕೊಂಡಿರುವ ಚಾಕರಿ ಯಾವುದೆಂದರೆ, ತಾವು ಎತ್ತಿರುವ ರಾಷ್ಟ್ರೀಯ ಸಾಲ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ತೀರಿಸುವ ಸಲುವಾಗಿ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚ ಕಡಿಮೆಮಾಡುವುದು ಮತ್ತು ನಾಗರೀಕರಿಂದ ಹೆಚ್ಚಿನ ತೆರಿಗೆ ವಸೂಲುಮಾಡುವುದು. 'ಅರ್ಥಶಾಸ್ತ್ರ'ವು ರಾಜಕೀಯದಿಂದ ಬಹಳ ದೂರದಲ್ಲಿದೆ ಮತ್ತು ಅದಕ್ಕಿಂತ ಬೇರೆಯಾಗಿದೆ ಎಂದು ರಾಷ್ಟ್ರೀಯ ನಾಯಕರು ನಂಬುತ್ತಾರೆ. ಆದರೆ, ನವ–ಉದಾರ ಬಂಡವಾಳಶಾಹಿಯ ರಾಜಕೀಯದ ಹೊಸ ರೂಪವೇ ಅರ್ಥಶಾಸ್ತ್ರ. ಹಾಗಾಗಿಯೇ, ನಾಗರೀಕರ ಮೇಲೆ ತೆರಿಗೆ ಹೇರಿ ಸಾಲ ತೀರಿಸುವುದು ಮತ್ತು ಸಟ್ಟಾ ವ್ಯವಹಾರಗಳಿಗೆ ಹಣ ಹೂಡಿಕೆಮಾಡುವ ಹಾದಿಯನ್ನು ಸುಗಮಗೊಳಿಸುವ ಕೆಲಸಗಳಲ್ಲಿ ತೊಡಗಿಕೊಂಡಿರುವುದೇ ಸರ್ಕಾರಗಳ ಮುಖ್ಯ ಚಟುವಟಿಕೆ.

ಬಹಿರಂಗ ತೋರಿಸಿಕೊಳ್ಳುವ ಅವಶ್ಯಕತೆ

ಈ ಸನ್ನಿವೇಶದಲ್ಲಿ, ವಿದೇಶಿ ವಲಸೆಗಾರರ ಮೇಲೆ ತಾವು ನಿಯಂತ್ರಣ ಹೇರುವುದಾಗಿ ತೋರಿಸಿಕೊಳ್ಳುವುದು ರಾಷ್ಟ್ರವಾದಿಗಳಿಗೆ ಅವಶ್ಯವಾಗುತ್ತದೆ. ಏಕೆಂದರೆ, ಅವರು ಜಾಗತಿಕ ಹಣಕಾಸು ಬಂಡವಾಳದ ವೈಫಲ್ಯ ಯಾರಿಗೂ ಅರ್ಥವಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಹಾಗಾಗಿ, ಅವರು ವಿದೇಶಿಯರ ಬಗ್ಗೆ ದ್ವೇಷ ಕಾರುವುದು ಅನಿವಾರ್ಯವಾಗುತ್ತದೆ. ಏಕೆಂದರೆ, ದಿಟವಾದ ಬಿರುಗಾಳಿಯ ಬಗ್ಗೆ ಅಂದರೆ, ಅಗೋಚರ ಹಣಕಾಸು ಬಂಡವಾಳದ ಬಗ್ಗೆ, ಈ ರಾಷ್ಟ್ರೀಯ ನಾಯಕರು ಮಾತನಾಡಲಾರರು. ಅವರು ವ್ಯಕ್ತಿಗಳ ಶರೀರಗಳನ್ನು ಮಾತ್ರ ನಿಯಂತ್ರಿಸಬಲ್ಲರು. ರಾಜಕಾರಣಿಗಳು ಮಾಡುತ್ತಿರುವ ಈ ಕೆಲಸದಿಂದಾಗಿಯೇ ಜನ ಅವರನ್ನು ಅನುಮಾನದಿಂದ ನೋಡುತ್ತಾರೆ. ಅಮೆರಿಕಾದಲ್ಲಿ ಡೊನಾಲ್ಡ್ ಟ್ರಂಪ್, ಟರ್ಕಿಯಲ್ಲಿ ರೆಸಿಪ್ ಎರ್ಡೊಗನ್ ಮತ್ತು ಬೇರೆ ದೇಶಗಳಲ್ಲಿಯೂ ಇದೇ ಮನೋಭಾವ ಉಳ್ಳ ಅನೇಕರು, ಜನರು ರಾಜಕಾರಣಿಗಳ ಬಗ್ಗೆ ಹೊಂದಿರುವ ಸಂಶಯದ ಲಾಭ ಪಡೆದಿದ್ದಾರೆ. ಈ ರಾಜಕಾರಣಿಗಳೂ ಜಾಗತಿಕ ಹಣಕಾಸು ಬಂಡವಾಳವನ್ನು ನಿಯಂತ್ರಿಸಲಾರರು. ಬದಲಾಗಿ, ಹಣಕಾಸು ಬಂಡವಾಳವೇ ಅವರನ್ನು ನಿಯಂತ್ರಿಸುತ್ತದೆ.

ನೈಜ ರಾಜಕೀಯ ನಿರ್ವಹಿಸುವ ಬಹುಪಾಲು ಅಂಶಗಳನ್ನು ರಾಜಕಾರಣಿಗಳೇ ಕೈಬಿಟ್ಟಿದ್ದಾರೆ. ಅದನ್ನು ನವ–ಉದಾರ ಆರ್ಥಿಕ ಸಿದ್ಧಾಂತಿಗಳಿಗೆ ಬಿಟ್ಟುಕೊಟ್ಟಿದ್ದಾರೆ. ಜನಸಾಮಾನ್ಯರ ಮುಂದೆ ಈ ತಪ್ಪನ್ನು ಒಪ್ಪಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ, ರಾಜಕಾರಣಿಗಳು.

'ಅರ್ಥಶಾಸ್ತ್ರ'ವು ರಾಜಕೀಯದಿಂದ ಬಹಳ ದೂರದಲ್ಲಿದೆ ಮತ್ತು ಅದಕ್ಕಿಂತ ಬೇರೆಯಾಗಿದೆ ಎಂದು ರಾಷ್ಟ್ರೀಯ ನಾಯಕರು ನಂಬುತ್ತಾರೆ. ಆದರೆ, ನವ–ಉದಾರ ಬಂಡವಾಳಶಾಹಿಯ ರಾಜಕೀಯದ ಹೊಸ ರೂಪವೇ ಅರ್ಥಶಾಸ್ತ್ರ. ಹಾಗಾಗಿಯೇ, ನಾಗರೀಕರ ಮೇಲೆ ತೆರಿಗೆ ಹೇರಿ ಸಾಲ ತೀರಿಸುವುದು ಮತ್ತು ಸಟ್ಟಾ ವ್ಯವಹಾರಗಳಗೆ ಹಣ ಹೂಡಿಕೆಮಾಡುವ ಹಾದಿಯನ್ನು ಸುಗಮಗೊಳಸುವ ಕೆಲಸಗಳಲ್ಲಿ ತೊಡಗಿಕೊಂಡಿರುವುದೇ ಸರ್ಕಾರಗಳ ಮುಖ್ಯ ಚಟುವಟಿಕೆ.
ನೈಜ ರಾಜಕೀಯ ನಿರ್ವಹಿಸುವ ಬಹುಪಾಲು ಅಂಶಗಳನ್ನು ರಾಜಕಾರಣಿಗಳೇ ಕೈಬಿಟ್ಟಿದ್ದಾರೆ. ಅದನ್ನು ನವ–ಉದಾರ ಆರ್ಥಿಕ ಸಿದ್ಧಾಂತಿಗಳಗೆ ಬಿಟ್ಟುಕೊಟ್ಟಿದ್ದಾರೆ, ಅವರುಜನಸಾಮಾನ್ಯರ ಮುಂದೆ ಈ ತಪ್ಪನ್ನು ಒಪ್ಪಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ.

ಭ್ರಷ್ಟರ ಬೇಟೆ:ಅಕ್ರಮ ಆಸ್ತಿ ಪ್ರಕರಣದ ಬಗೆಗಿನ ನ್ಯಾಯಾದೇಶವು ಭ್ರಷ್ಟ ರಾಜಕಾರಣಿಗಳಿಗೆ ಕಡಿವಾಣ ಹಾಕುತ್ತದೆಯೇ?

ಇದು ಗಂಭೀರ ಆರ್ಥಿಕ ವಿಶ್ಲೇಷಣೆಗಳಿಗೆ ಹೆಸರಾದ ವಾರಪತ್ರಿಕೆ 'ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಇಪಿಡಬ್ಲ್ಯು) ಸಂಪಾದಕೀಯ ಲೇಖನದಲ್ಲಿ ಕೇಳಿರುವ ಪ್ರಶ್ನೆ. ಎರಡು ದಶಕಗಳಷ್ಟು ಹಳೆಯದಾದ ಜಯಲಲಿತ ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ತೀರ್ಪು ತಾವು ಪಡೆದುಕೊಳ್ಳುವ "ಉಡುಗೊರೆ"ಗೆ ಪ್ರತಿಯಾಗಿ ಅವರ ಪರವಾಗಿ ಕೆಲಸಗಳನ್ನು ಮಾಡಿಕೊಡುವುದು ಈ ದೇಶದ ಸಹಸ್ರಾರು "ಸಾರ್ವಜನಿಕ ಸೇವಕರ" ಅಘೋಷಿತ ಪದ್ಧತಿಯಾಗಿರುವಾಗ ಮತ್ತು ತೆರಿಗೆ ಅಧಿಕಾರಿಗಳ ಗಮನದಿಂದ ತಮ್ಮ ಅಕ್ರಮ ಆಸ್ತಿಪಾಸ್ತಿಗಳನ್ನು ಬಚ್ಚಿಟ್ಟುಕೊಳ್ಳುವಲ್ಲಿ ಅಂಥವರು ಈಗಾಗಲೇ ಹಲವಾರು ಸೃಜನಶೀಲ ಮಾರ್ಗಗಳನ್ನು ಕಂಡುಕೊಂಡಿರುವಾಗ, ಈ ತೀರ್ಪು ಅವರ ಭ್ರಷ್ಟಾಚಾರಕ್ಕೆ ನಿಜಕ್ಕೂ ಕಡಿವಾಣ ಹಾಕಬಹುದೇ ಎಂಬುದನ್ನು ಕಾದು ನೋಡಬೇಕು. ಎಂದಿದೆ.

ಅನುವಾದ ಕೃಪೆ: ಶಿವಸುಂದರ್

ಆಕೆ ಇನ್ನೇನು ತಮಿಳುನಾಡಿನ ಮುಖ್ಯಮಂತ್ರಿಯೇ ಆಗಿಬಿಡುತ್ತಿದ್ದರು; ಈಗ ಆಕೆ ಸೆರೆಮನೆಯಲ್ಲಿ ಸರಳುಗಳ ಹಿಂದಿದ್ದಾರೆ. ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂನ (ಎಐಎಡಿಎಂಕೆ) ಅಧಿನಾಯಕಿ ಜೆ. ಜಯಲಲಿತಾ ಅವರು 2016ರ ಡಿಸೆಂಬರ್ 5 ರಂದು ಚೆನ್ನೈನಲ್ಲಿ ನಿಧನರಾದ ನಂತರದಲ್ಲಿ ಅವರ ಕೃಪಾಶ್ರಯದಲ್ಲೇ ಬೆಳೆದ ವಿ.ಕೆ.ಶಶಿಕಲಾ ಭವಿಷ್ಯವೇನಾಗುತ್ತದೆಂಬ ಪ್ರಶ್ನೆ ತಮಿಳುನಾಡಿನ ಜನತೆ ಮತ್ತು ಮಾಧ್ಯಮಗಳನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ಆದರೆ ಇದರ ಬಗೆಗಿನ ಎಲ್ಲಾ ಊಹಾಪೋಹಗಳಿಗೂ ಸುಪ್ರಿಂ ಕೋರ್ಟಿನ ಫೆಬ್ರವರಿ 14ರ ಆದೇಶದ ಮೂಲಕ ನಾಟಕೀಯವಾದ ತೆರೆ ಬಿದ್ದಿದೆ. ವಿವರಿಸಲಸಾಧ್ಯವಾದಷ್ಟು ವಿಳಂಬದ ನಂತರ ದೇಶದ ವರಿಷ್ಠ ನ್ಯಾಯಾಲಯವು ಎರಡು ದಶಕಗಳಷ್ಟು ಹಳೆಯದಾದ ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಜಯಲಲಿತಾ, ಶಶಿಕಲ ಮತ್ತವರ ಇಬ್ಬರು ಸಬಂಧಿಕರಾದ ವಿ.ಎನ್. ಸುಧಾಕರನ್ ಮತ್ತು ಜೆ. ಇಳವರಸಿಯವರುಗಳು, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–1988 ರಡಿಯಲ್ಲಿ ಅಪರಾಧವೆಸಗಿದ್ದಾರೆ ಎಂದು ತೀರ್ಪನ್ನಿತ್ತಿದೆ. ಆದರೆ ಮಾಧ್ಯಮಗಳು ತಮಿಳುನಾಡಿನ ಆಡಳಿತ ಚುಕ್ಕಾಣಿಯನ್ನು ಹಿಡಿಯಲು ತನಗೆ ನಿಷ್ಠರಾಗಿದ್ದ ಶಾಸಕರೊಂದಿಗೆ ಶಶಿಕಲಾ ಅವರು ವಿಶ್ರಾಂತಿ ಧಾಮದಲ್ಲಿ ರಚಿಸುತ್ತಿದ್ದ ರಾಜಕೀಯ ತಂತ್ರಗಳ ರೋಚಕ ರಾಜಕೀಯ ನಾಟಕಗಳನ್ನು ವರದಿ ಮಾಡುವದರಲ್ಲಿ ಸಂಪೂರ್ಣವಾಗಿ ತೊಡಗಿದ್ದರಿಂದ, ಅಕ್ರಮ ಆಸ್ತಿ ಗಳಿಕೆಯ ನಿಯಂತ್ರಣದ ಮೇಲೆ ಈ ತೀರ್ಪಿನ ಮಹತ್ವದ ಪರಿಣಾಮಗಳೇನೆಂಬುದು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳಲಿಲ್ಲ. ವರಿಷ್ಠ ನ್ಯಾಯಾಲಯವು ಈ ತೀರ್ಪನ್ನು ಘೋಷಿಸಿದ ಸಮಯ– ಸಂದರ್ಭದ ಕುರಿತು ಪ್ರಶ್ನೆಗಳು ಕೇಳಿಬರುತ್ತಿರುವುದು ನಿಜವೇ ಆದರೂ ಈ ಆದೇಶಕ್ಕೆ ತನ್ನದೇ ಆದ ಮಹತ್ವವಿದೆ.

2014ರ ಸೆಪ್ಟೆಂಬರ್‌ನಲ್ಲಿ ಕರ್ನಾಟಕ ರಾಜ್ಯದ ವಿಶೇಷ ಸೆಷನ್ ಕೋರ್ಟು ಜಯಲಲಿತಾ ಅವರು ತಮ್ಮ ಘೊಷಿತ ಆದಾಯ ಮೂಲಗಳಿಗಿಂತ ಹೆಚ್ಚಿನ ಆದಾಯವನ್ನು ಹೊಂದಿರುವ ಅಪರಾಧವನ್ನು ಎಸಗಿದ್ದಾರೆಂದು ತೀರ್ಪು ನೀಡಿತು. ಜೊತೆಗೆ ಈ ಅಕ್ರಮ ಆಸ್ತಿಯನ್ನು ಗಳಿಸಲು ಮತ್ತು ಬಚ್ಚಿಡಲು ಜಯಲಲಿತಾರೊಂದಿಗೆ ಶಶಿಕಲಾ ಮತ್ತು ಅವರ ಇಬ್ಬರು ಸಂಬಂಧಿಕರು ಸಹಕರಿಸುವ ಅಪರಾಧವನ್ನೆಸಗಿದ್ದಾರೆಂದೂ ಘೋಷಿಸಿತು. ಈ ಆದೇಶವನ್ನು ಕರ್ನಾಟಕ ಹೈಕೋರ್ಟು 2015ರ ಮೇ 15ರಂದು ರದ್ದುಗೊಳಿಸಿತು. ಹೈಕೋರ್ಟಿನ ಈ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನು ವರಿಷ್ಠ ನ್ಯಾಯಾಲಯವು ತನ್ನ ಫೆಬ್ರವರಿ 14ರ ಆದೇಶದಲ್ಲಿ ಪುರಸ್ಕರಿಸಿದೆ. ಮತ್ತು ಜಯಲಲಿತಾ ಮತ್ತವರ ಸಂಗಡಿಗರನ್ನು ದೋಷಿಗಳೆಂದು ಘೋಷಿಸಿದ ಸೆಷನ್ ಕೋರ್ಟು ನೀಡಿದ ಆದೇಶವನ್ನು ಸಂಪೂರ್ಣವಾಗಿ ಎತ್ತಿಹಿಡಿದಿದೆ. ಈ ಪ್ರಕರಣದಲ್ಲಿ ಮೊದಲ ಆರೋಪಿ ಜಯಲಲಿತಾ ನಿಧನರಾಗಿದ್ದರೂ ಶಶಿಕಲಾ ಅವರನ್ನು ಒಳಗೊಂಡಂತೆ ಉಳಿದ ಮೂವರು ಅಪರಾಧಿಗಳು ಸೆಷನ್ ನ್ಯಾಯಾಲಯವು ವಿಧಿಸಿದಂತೆ ತಲಾ 10 ಕೋಟಿ ದಂಡವನ್ನು ತೆರಬೇಕು ಮತ್ತು ನಾಲ್ಕು ವರ್ಷಗಳ ಜೈಲುಶಿಕ್ಷೆಯನ್ನು ಅನುಭವಿಸಬೇಕೆಂದು ಸುಪ್ರೀಂ ಕೋರ್ಟು ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಪಿನಾಕಿ ಚಂದ್ರ ಘೋಷ್ ಮತ್ತು ಅಮಿತಾವ್ ರಾಯ್ ರವರ ಪೀಠವು ನೀಡಿರುವ ಈ ಬೃಹತ್ 570 ಪುಟಗಳ ಆದೇಶವು ಅಕ್ರಮ ಆಸ್ತಿಯ ಗಳಿಕೆಯನ್ನು ಹೇಗೆ ಬಚ್ಚಿಡಬೇಕೆಂಬ ಬಗ್ಗೆ ಒಂದು ಮೂಲಪಾಠದಂತಿದೆ. ಮತ್ತು ಸೆಷನ್ ಕೋರ್ಟಿನ ನ್ಯಾಯಾಧೀಶ ಜಾನ್ ಮೈಕೆಲ್ ಡಿ'ಕುನ್ಹಾ ಅವರ ಮುಂದಿದ್ದ ಸಾಕ್ಷ್ಯಗಳು ಹೇಗೆ ತಮ್ಮ ಅಕ್ರಮ ಆಸ್ತಿಯನ್ನು ಬಚ್ಚಿಟ್ಟುಕೊಳ್ಳಲು ಜಯಲಲಿತಾ ಅವರು ಶಶಿಕಲಾ ಮತ್ತವರ ಸಂಬಂಧಿಗಳ ಸಹಾಯವನ್ನು ಪಡೆದುಕೊಂಡಿದ್ದರೆಂಬ ಬಗ್ಗೆ ಖಚಿತ ತೀರ್ಮಾನಕ್ಕೆ ಬರುವಂತೆ ಮಾಡಿತೆಂಬುದನ್ನು ವಿವರಿಸುತ್ತದೆ. ಅಕ್ರಮ ಆಸ್ತಿಯನ್ನು ಬಚ್ಚಿಡಲು ಬಳಸಿದ ವಿಧಾನಗಳು ಹೊಸತೂ ಅಲ್ಲ. ಸ್ವಂತದ್ದೂ ಅಲ್ಲ; ಸಾರ್ವಜನಿಕವಾಗಿ ಮತ್ತು ಖಾಸಗಿಯಾಗಿ ಅಕ್ರಮ ಆಸ್ತಿಯನ್ನು ಮುಚ್ಚಿಟ್ಟುಕೊಳ್ಳಲು ಹೆಚ್ಚೂಕಡಿಮೆ ಎಲ್ಲರೂ ಇದೇ ವಿಧಾನಗಳನ್ನು ಬಳಸುತ್ತಾರೆ. ಈ ಪ್ರಕರಣದಲ್ಲಿ ಒಂದೇ ವಿಳಾಸವನ್ನು ಹೊಂದಿರುವ 34 ಶೆಲ್ (ನಕಲಿ) ಕಂಪನಿಗಳನ್ನು ನೊಂದಾಯಿಸಲಾಗಿತ್ತು; ಅದರಲ್ಲಿ 10 ಕಂಪನಿಗಳನ್ನು ಒಂದೇ ದಿನ ಮತ್ತು ಆರು ಕಂಪನಿಗಳು ಮತ್ತೊಂದು ದಿನ ಏಕಕಾಲದಲ್ಲಿ ನೊಂದಾವಣೆಗೊಂಡಿದ್ದವು. ಈ ಕಂಪನಿಗಳ ವ್ಯವಹಾರಕ್ಕೆಂದೇ 50 ಬ್ಯಾಂಕು ಖಾತೆಗಳನ್ನು ತೆರೆಯಲಾಗಿತ್ತು. ಅವುಗಳಲ್ಲಿ 47 ಖಾತೆಗಳಿದ್ದದ್ದು ಒಂದೇ ಬ್ಯಾಂಕಿನಲ್ಲಿ. ಇವುಗಳಲ್ಲಿ ಬಹುಪಾಲು ಕಂಪನಿಗಳು ಮಾಡುತ್ತಿದ್ದ ಏಕೈಕ ವ್ಯವಹಾರವೆಂದರೆ ಉದ್ದೇಶಪೂರ್ವಕವಾಗಿ ಅಪಮೌಲ್ಯೀಕರಿಸಿದ ಆಸ್ತಿಪಾಸ್ತಿಗಳನ್ನು ಕೊಳ್ಳುವುದು. ಇವುಗಳಿಗಾಗಿ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ಹರಿದಾಡುತ್ತಿತ್ತು. ಬ್ಯಾಂಕುಗಳಿಂದ ಸಾಲವನ್ನು ಪಡೆದುಕೊಳ್ಳುವುದು. ಮತ್ತು ಸಾಲದ ಮೊತ್ತ ಸಂಪೂರ್ಣವಾಗಿ ಬಿಡುಗಡೆಯಾಗದಿದ್ದರೂ ಅಷ್ಟೂ ಮೊತ್ತವನ್ನು ಕಂಪನಿಯು ತೀರಿಸಬೇಕಿರುವ "ಹೊಣೆಗಾರಿಕೆ" (Liability)ಯೆಂದು ತೋರಿಸುವುದು. ಈ ಕೆಲವು ವ್ಯವಹಾರಗಳಲ್ಲಿರುವ ಲಜ್ಜೆಗೇಡಿತನವು ಇದರಲ್ಲಿ ತೊಡಗಿದವರಿಗೆ ತಮ್ಮ ಕಪಟ ಎಂದಿಗೂ ಪತ್ತೆಯಾಗಲಾರದೆಂಬ ಬಗ್ಗೆ ಇದ್ದ ವಿಶ್ವಾಸವನಷ್ಟೇ ಸೂಚಿಸುತ್ತದೆ.

ಸ್ವೇಚ್ಚಾ ಪ್ರವೃತ್ತಿಯ ರಾಜಕಾರಣಿಯಾದ ಸುಬ್ರಮಣಿಯನ್ ಸ್ವಾಮಿಯವರು 1996ರ ಜೂನ್ ನಷ್ಟು ಹಿಂದೆ ಹೂಡಿದ ಈ ದಾವೆಯ ಅಂತಿಮ ತೀರ್ಮಾನ ಹೊರಬರಲು ಸಾಕಷ್ಟು ವಿಳಂಬವಾಗಿದೆ. ಆದರೂ ವಿಚಾರಣಾ ನ್ಯಾಯಾಲಯ ಮತ್ತು ವರಿಷ್ಠ ನ್ಯಾಯಾಲಯಗಳೆರಡೂ ಆರೋಪಿಗಳ ಈ ಅಕ್ರಮಗಳನ್ನು ಅಪರಾಧವೆಂದು ತೀರ್ಪಿತ್ತಿರುವುದು ಮಹತ್ವದ ಪೂರ್ವನಿದರ್ಶನವನ್ನು ಹಾಕಿಕೊಟ್ಟಿದೆ. ಜಯಲಲಿತಾ ಅವರನ್ನು ದೋಷಮುಕ್ತಗೊಳಿಸಿದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಕುಮಾರ ಸ್ವಾಮಿಯವರ ಆದೇಶವನ್ನು ವರಿಷ್ಠ ನ್ಯಾಯಾಲಯವು ತಿರಸ್ಕರಿಸಿದೆ. ಮತ್ತು ಆ ಆದೇಶವು "ದಾಖಲಾಗಿದ್ದ ಸಾಕ್ಷ್ಯಗಳ ತಪ್ಪು ಗ್ರಹಿಕೆ" ಮತ್ತು ಆರೋಪಿಗಳ ಆದಾಯ, ಆಸ್ತಿ ಪಾಸ್ತಿ ಮತ್ತು ಹೊಣೆಗಾರಿಕೆಗಳ ಲೆಕ್ಕಾಚಾರದ "ಕೂಡುಕಳೆಯುವಿಕೆಗಳನ್ನು ತಪ್ಪಾಗಿ ಮಾಡಿದೆಯೆಂದು" ಟೀಕಿಸಿದೆ. ಸಾಮಾನ್ಯವಾಗಿ ವರಿಷ್ಠ ನ್ಯಾಯಾಲಯಗಳು ಕೆಳಹಂತದ ಕೋರ್ಟುಗಳ ವಿಶ್ವಾಸಾರ್ಹತೆಯನ್ನು ಎತ್ತಿಹಿಡಿಯುವುದು ಅಪರೂಪ.

1991ರ ಜುಲೈ 1 ಮತ್ತು 1996ರ ಏಪ್ರಿಲ್ 30 ರ ನಡುವಿನ ಅವಧಿಯಲ್ಲಿ ಜಯಲಲಿತಾ ಸಂಪಾದಿಸಿದ ಆಸ್ತಿಪಾಸ್ತಿಗಳು ಮತ್ತು ಅವರ ಆದಾಯ ಮೂಲಗಳ ಬಗ್ಗೆ ವಿಶೇಷ ವಿಚಾರಣಾ ನ್ಯಾಯಾಲಯವು ಅತ್ಯಂತ ಸಣ್ಣಪುಟ್ಟ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿತ್ತು. ಆಕೆಯ ಆಸ್ತಿ 1991ರಲ್ಲಿ 2.01 ಕೋಟಿಯಿದ್ದದ್ದು 1996ರಲ್ಲಿ 64.44 ಕೋಟಿಯಷ್ಟಾದದ್ದು ಅಕ್ರಮ ವ್ಯವಹಾರಗಳ ಮೂಲಕವೇ ಎಂದು ಅದು ಸ್ಪಷ್ಟವಾಗಿ ನಿರೂಪಿಸಿತು. ವರಿಷ್ಠ ನ್ಯಾಯಾಲಯವು ವ್ಯಾಖ್ಯಾನಿಸಿದಂತೆ ವಿಚಾರಣಾ ನ್ಯಾಯಾಲಯದ ಈ "ಕರಾರುವಕ್ಕಾದ, ಸೂಕ್ಷ್ಮತೆಯಿಂದ ಕೂಡಿತ, ವಿವೇಚನಾ ಪೂರ್ಣ" ತೀರ್ಪು ಅಪರೂಪವೂ ಮತ್ತು ಸ್ವಾಗತಾರ್ಹವೂ ಆಗಿದೆ. "ಸಾರ್ವಜನಿಕ ಸೇವಕ"ರೆಂದು ಕರೆಸಿಕೊಳ್ಳಲ್ಪಡುವ ಪ್ರಬಲರು ಮಾಡುವ ಕಾನೂನು ಉಲ್ಲಂಘನೆಯನ್ನು ಬಯಲುಮಾಡಲು ನ್ಯಾಯಾಂಗ ಏನು ಮಾಡಬಹುದೆನ್ನುವುದಕ್ಕೆ ಇದು ಒಂದು ಉದಾಹರಣೆಯಾಗಿದೆ. ಈ ಏಕಸದಸ್ಯ ನ್ಯಾಯಾಧೀಶರು ತಾವು ವಿಚಾರಣೆ ನಡೆಸುತ್ತಿದ್ದ ಪ್ರಬಲ ರಾಜಕಾರಣಿಯಿಂದ ಯಾವುದೇ ರೀತಿ ಪ್ರಭಾವಕ್ಕೊಳಗಾಗದಿದ್ದದ್ದು ಮತ್ತು ಪ್ರತಿಯೊಂದು ಆರೋಪಗಳನ್ನು ಮತ್ತದರ ಸಮರ್ಥನೆಗಳನ್ನು ಪ್ರಬಲವಾಗಿ ಮಂಡಿಸಿರುವುದು ಅಧ್ಯಯನಕ್ಕೆ ಯೋಗ್ಯವಾದ ವಿಷಯವಾಗಿದೆ.


ಪ್ರಕರಣವನ್ನು ತಮಿಳುನಾಡಿನಿಂದ ಕರ್ನಾಟಕಕ್ಕೆ ವರ್ಗಾಯಿಸಿದ್ದೂ ಕೂಡಾ ಸಹಾಯಕ್ಕೆ ಬಂದಿರುವುದು ಸ್ಪಷ್ಟವಾಗಿದೆ. ಜಯಲಲಿತಾ ಅವರು ತನ್ನ ಆದಾಯದ ಕೆಲವನ್ನು ತನಗೆ ನೀಡಲಾದ "ಉಡುಗೊರೆ" ಯೆಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದರು. ಆದರೆ ಈ ತೀರ್ಪು, ಸಾರ್ವಜನಿಕ ಸೇವಕರು ಪಡೆಯುವ "ಉಡುಗೊರೆ"ಯು ಪರೋಕ್ಷ ರೂಪದ ಲಂಚವೇ ಆಗುತ್ತದಾದ್ದರಿಂದ ಅವುಗಳನ್ನು ಕಾನೂನು ಬದ್ಧ ಆದಾಯ ಮೂಲವೆಂದು ಪರಿಗಣನೆ ಮಾಡಲಾಗದೆಂದು ಸ್ಪಷ್ಟೀಕರಿಸುತ್ತದೆ. ಇದು ಮತ್ತೊಂದು ಮಹತ್ವದ ಸಂಗತಿಯಾಗಿದೆ. ನಗದು ಅಥವಾ ವಸ್ತುಗಳ ರೂಪದಲ್ಲಿ ಪಡೆದ ಅಂಥ ಉಡುಗೊರೆಗಳನ್ನು ಕೇವಲ ಘೋಷಿಸಿಕೊಂಡ ಮಾತ್ರಕ್ಕೆ ಅವುಗಳು "ಕಾನೂನುಬದ್ಧ ಆದಾಯದ ಹಂತಕ್ಕೆ ಏರುವುದಿಲ್ಲವೆಂದು" ಕೂಡಾ ಈ ತೀರ್ಪು ಸೂಚಿಸುತ್ತದೆ.

ತಾವು ಪಡೆದುಕೊಳ್ಳುವ "ಉಡುಗೊರೆ"ಗೆ ಪ್ರತಿಯಾಗಿ ಅವರ ಪರವಾಗಿ ಕೆಲಸಗಳನ್ನು ಮಾಡಿಕೊಡುವುದು ಈ ದೇಶದ ಸಹಸ್ರಾರು "ಸಾರ್ವಜನಿಕ ಸೇವಕರ" ಅಘೋಷಿತ ಪದ್ಧತಿಯಾಗಿರುವಾಗ ಮತ್ತು ತೆರಿಗೆ ಅಧಿಕಾರಿಗಳ ಗಮನದಿಂದ ತಮ್ಮ ಅಕ್ರಮ ಆಸ್ತಿಪಾಸ್ತಿಗಳನ್ನು ಬಚ್ಚಿಟ್ಟುಕೊಳ್ಳುವಲ್ಲಿ ಅಂಥವರು ಈಗಾಗಲೇ ಹಲವಾರು ಸೃಜನಶೀಲ ಮಾರ್ಗಗಳನ್ನು ಕಂಡುಕೊಂಡಿರುವಾಗ, ಈ ತೀರ್ಪು ಅವರ ಭ್ರಷ್ಟಾಚಾರಕ್ಕೆ ನಿಜಕ್ಕೂ ಕಡಿವಾಣ ಹಾಕಬಹುದೇ ಎಂಬುದನ್ನು ಕಾದು ನೋಡಬೇಕು. ಆದರೆ ಅದು ಒಂದನ್ನಂತೂ ಸಾಬೀತುಪಡಿಸುತ್ತದೆ. ಭ್ರಷ್ಟಾಚಾರ ನಿಗ್ರಹ ಕಾಯಿದೆ ಮತ್ತು ಅದರಂಥ ಇತರ ಕಾಯಿದೆಗಳಲ್ಲಿರುವ ಕಠಿಣ ಕ್ರಮಗಳನ್ನು ಭ್ರಷ್ಟ ವ್ಯಕ್ತಿಗಳ ವಿರುದ್ಧ ಬಳಸಲು ನಾಗರಿಕರು ಎಷ್ಟು ಸಮರ್ಥರಿರುತ್ತಾರೋ, ಕಾಯಿದೆಯೂ ಅಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿರುತ್ತದೆ. ದುರದೃಷ್ಟವಶಾತ್, ಕಾನೂನು ವ್ಯವಸ್ಥೆಯ ಸುದೀರ್ಘ ಪ್ರಕ್ರಿಯೆ ಮತ್ತು ಅಂತಿಮ ತೀರ್ಪು ನೀಡಲು ಅದು ತೆಗೆದುಕೊಳ್ಳುವ ದೀರ್ಘ ಕಾಲಾವಧಿಗಳು ಭ್ರಷ್ಟಾಚಾರ ವಿರೋಧಿ ಕಾನೂನುಗಳು ಅನುಷ್ಠಾನಕ್ಕೆ ಬರಬೇಕೆಂದು ಬಯಸುವವರ ಬದ್ಧತೆಗೆ ತಣ್ಣೀರೆರಚುತ್ತದೆ.

ಕೃಪೆ: Economic and Political Weekly
www.epw.in
February 18, 2017. Vol 52. No. 7

ಕಾಂ.ರಘುಬೀರ್ ಸಿಂಗ್ ಹೂಡ

ಈ ಹಿಂದೆ ಸಿಪಿಐ(ಎಂ) ಹರ್ಯಾಣ ರಾಜ್ಯ ಕಾರ್ಯದರ್ಶಿಯಾಗಿದ್ದ ರಘುಬೀರ್ ಸಿಂಗ್ ಹೂಡ ಫೆಬ್ರುವರಿ 21ರಂದು ನಿಧನರಾಗಿದ್ದಾರೆ. ಪ್ರಸಿದ್ಧ ವಕೀಲರೂ ಆಗಿದ್ದ ಅವರು ಹರ್ಯಾಣದ ಒಬ್ಬ ಪ್ರಮುಖ ಎಡಪಂಥೀಯ ನಾಯಕರಾಗಿದ್ದರು. ರೈತರು, ಕಾರ್ಮಿಕರು, ವಕೀಲರು ಮತ್ತಿತರ ಜನವಿಭಾಗಗಳ ಸಂಘಟನೆಗಳಲ್ಲಿ ದುಡಿದ ಅವರು ಹಲವು ಬಾರಿ ಪೋಲೀಸ್



ದಮನವನ್ನು ಎದುರಿಸಿದವರು. ತುರ್ತುಪರಿಸ್ಥಿತಿ ಕಾಲದಲ್ಲಿ ಅವರು ಕರಾಳ ಮೀಸಾ ಕಾಯ್ದೆಯ ಅಡಿಯಲ್ಲಿ ಬಂಧನದಲ್ಲಿದ್ದರು.

ಕಾಮ್ರೇಡ್ ಹೂಡ ತಮ್ಮನ್ನು ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಪರ ಮೌಲ್ಯಗಳಿಗೆ ಅರ್ಪಿಸಿಕೊಂಡಿದ್ದವರು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಕಾಂ.ಆರ್.ಗೋವಿಂದರಾಜನ್



ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿಯ ಸೈದ್ಧಾಂತಿಕ ಪತ್ರಿಕೆ 'ಮಾರ್ಕ್ಸಿಸ್ಟ್'(ತಮಿಳು) ಸಂಪಾದಕ ಮಂಡಳಿಯ ಸದಸ್ಯರೂ, ದೇಶದ ವಿಮಾ ನೌಕರರ ಆಂದೋಲನದ ಹಿರಿಯ ಮುಖಂಡರೂ ಆಗಿದ್ದ ಆರ್.ಗೋವಿಂದರಾಜನ್ ಫೆಬ್ರುವರಿ 18ರಂದು ನಿಧನರಾಗಿದ್ದಾರೆ.

ಅಖಿಲ ಭಾರತ ವಿಮಾನೌಕರರ ಸಂಘದ ಜಂಟಿ ಕಾರ್ಯದರ್ಶಿ ಯಾಗಿ ದೇಶದೆಲ್ಲೆಡೆ ಸಂಚರಿಸಿದ್ದ ಇವರು ಸಂಘಟನೆಯ ಕಾರ್ಯಕರ್ತರ ನಡುವೆ ಸಾಮಾಜಿಕ ಸ್ಪಂದನೆಯನ್ನು ಸೃಷ್ಟಿಸುವಲ್ಲಿ ಮಹತ್ವದ ಕೊಡುಗೆ ನೀಡಿದ್ದವರು. ಇವರು ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿಗೆ ಖಾಯಂ ಆಹ್ವಾನಿತರಾಗಿದ್ದರು ಹಾಗೂ ಪಕ್ಷದ ಕೇಂದ್ರೀಯ ಹತೋಟಿ ಆಯೋಗದ ಸದಸ್ಯರ ಹುದ್ದೆಗೆ ಆಯ್ಕೆಯಾಗಿದ್ದರು.

ಎಸ್.ಸಿ/ಎಸ್.ಟಿ ನೌಕರರ ..... ಪುಟ 6 ರಿಂದ

ಹೊಂದಿದೆ. ತಲೆ-ತಲಾಂತರಗಳಿಂದ ಜಮೀನುದಾರಿ ಪದ್ಧತಿಯ ಭಾಗವಾಗಿ, ಜಾತಿ-ತಾರತಮ್ಯ, ಅಸ್ಪೃಶ್ಯತಾ ಆಚರಣೆಗಳನ್ನು ಅಮಾನವೀಯತೆಗೆ, ಸಾಮಾಜಿಕ-ಶೈಕ್ಷಣಿಕ ಅಸಮಾನತೆಗೆ ತುತ್ತಾಗಿರುವ ಪರಿಶಿಷ್ಟ ಜಾತಿ/ಪಂಗಡದ ಸಮುದಾಯಗಳಿಗೆ ಎಲ್ಲಾ ಹಂತಗಳಲ್ಲಿಯೂ ಸಮಾನ ಪ್ರಾತಿನಿಧ್ಯ ಒದಗಿಸಿ ಕೊಡುವ ಮೂಲ ಉದ್ದೇಶವೇ ಮೀಸಲಾತಿ ಮತ್ತು ಇದೇ ಸಂವಿಧಾನದ ಮೂಲ ಆಶಯವಾಗಿದೆ ಎಂದು ಒತ್ತಿ ಹೇಳಿದರು.

ತೀರ್ಪಿನ ಹಿನ್ನೆಲೆ :- ದೇವರಾಜ ಅರಸು ರವರು ಮುಖ್ಯ ಮಂತ್ರಿಯಾಗಿದ್ದಾಗ 1978 ರಲ್ಲಿ ಕ್ಲಾಸ್ - 1 ಅಧಿಕಾರಿ ಹುದ್ದೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಡ್ತಿಯಲ್ಲಿಯೂ ಮೀಸಲಾತಿ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿದ್ದರು. ಇದರ ಫಲದಿಂದಾಗಿ ಸಹಾಯಕ ಎಂಜಿನಿಯರ್ ಹುದ್ದೆಯಿಂದ ಮುಖ್ಯ ಎಂಜಿನಿಯರ್ ಹುದ್ದೆಯವರೆಗೂ ಬಡ್ತಿ ಹೊಂದುವ ಅವಕಾಶ ಒದಗಿ ಬಂದಿತ್ತು.

ಈ ಬಡ್ತಿ ಮೀಸಲಾತಿ ಆದೇಶ ಪ್ರಶ್ನಿಸಿ 1995 ರಲ್ಲಿ ಎಂ.ಜಿ. ಬಡಪ್ಪನವರ್ ಮತ್ತು ಲೋಕೋಪಯೋಗಿ, ಇಂಧನ ಮತ್ತು ನೀರಾವರಿ ಇಲಾಖೆಯ ಪರಿಶಿಷ್ಟ ಜಾತಿ/ ಪಂಗಡಕ್ಕೆ ಸೇರಿದ ಎಂಜಿನಿಯರ್‌ಗಳು ಈ ಸಂಬಂಧ ಕೋರ್ಟುಗಳಲ್ಲಿ ಹೋರಾಟ ನಡೆಸಿದರು. ಸರ್ಕಾರದ ಆದೇಶವನ್ನು ಸುಪ್ರೀಂ ಕೋರ್ಟು ರದ್ದುಪಡಿಸಿತ್ತು. ಇದರಿಂದಾಗಿ 1978 ರಿಂದ 1995ರ ವರೆವಿಗೂ ಬಡ್ತಿ ಮೀಸಲಾತಿಯ ಆದೇಶದಿಂದಾಗಿ, ಮುಂಬಡ್ತಿ ಹೊಂದಿದ್ದ 226 ಅಧಿಕಾರಿಗಳಿಗೆ ಹಿಂಬಡ್ತಿ ಮಾಡಲಾಗಿತ್ತು.

ಮತ್ತೆ 2002 ರಲ್ಲಿ ಬಡ್ತಿ ಮೀಸಲಾತಿ ಕಾಯ್ದೆಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿತು. ಇದರಿಂದ 1978 ರಿಂದ ಪೂರ್ವಾನ್ವಯವಾಗುವಂತೆ ಮತ್ತೆ ಮೀಸಲಾತಿ ಕಲ್ಪಿಸಿತು. ಹಿಂಬಡ್ತಿಗೊಳಿಸಿದವರಿಗೆ ಮುಂಬಡ್ತಿ ನೀಡಿತ್ತು. ಇದನ್ನು ಪ್ರಶ್ನಿಸಿ ಎಂ. ನಾಗರಾಜು ಮತ್ತು ಇತರರು ಸುಪ್ರೀಂ ಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಇದು ಕರ್ನಾಟಕದ ಹೈಕೋರ್ಟಿಗೆ ವರ್ಗಾವಣೆಯಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ್ದ ಹೈಕೋರ್ಟು, ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು.

ಆನಂತರ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ, ಬಿ.ಕೆ. ಪವಿತ್ರಾ ಮತ್ತು ಕೇಂದ್ರ ಇತರರು 2011 ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಇದೀಗ ಫೆಬ್ರವರಿ 9, 2017 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು 2002 ರ ಬಡ್ತಿ ಮೀಸಲಾತಿ ಕಾಯಿದೆಯನ್ನು ರದ್ದು ಪಡಿಸುವ ತೀರ್ಪನ್ನು ನೀಡಿದೆ. ಈ ತೀರ್ಪಿನಲ್ಲಿ ಪ್ರಮುಖವಾಗಿ, ಗುರುತಿಸಿರುವ ಅಂಶಗಳೆಂದರೆ ಆಡಳಿತದಲ್ಲಿ ದಕ್ಷತೆಗೆ ಧಕ್ಕೆ ಬರುತ್ತದೆ, ಅವರು ಹಿಂದುಳಿದಿದ್ದಾರೆ. ಉನ್ನತ ಹುದ್ದೆಗಳಲ್ಲಿ ಅವರ ಪ್ರಾತಿನಿಧ್ಯದ ಕೊರತೆಯಿದೆ ಎಂಬ ಜಾತಿಯ ಆಧಾರ ಇಲ್ಲಿಗೆ ಅನ್ವಯಿಸುವುದಿಲ್ಲ ಎಂಬ ಅಂಶಗಳನ್ನು ಸಾಭೀತು ಪಡಿಸಲು ರಾಜ್ಯ ಸರ್ಕಾರ ಯಾವ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿಲ್ಲ ಎಂದು ಸುಪ್ರೀಂ ಕೋರ್ಟು ನೀಡಿದೆ.

ಈ ತೀರ್ಪಿನಿಂದ ಮೀಸಲಾತಿ ಆಶಯಕ್ಕೆ ಧಕ್ಕೆಯುಂಟಾಗುವುದು ಖಂಡಿತ. ಮುಂದಿನ ದಿನಗಳು ಘೋರ ಅಪಾಯಕಾರಿಯಾದ ಗಂಭೀರ ದುಷ್ಪರಿಣಾಮ ಎಸ್.ಸಿ/ಎಸ್.ಟಿ.ಗಳ ಮೇಲೆ ಬೀರಲಿದೆ.

ಈ ತೀರ್ಪಿನಿಂದಾಗಿ ರಾಜ್ಯದ ವಿವಿಧ 36 ಇಲಾಖೆಗಳಲ್ಲಿನ ಸುಮಾರು 15,000 ಕ್ಕೂ ಹೆಚ್ಚು ಅಧಿಕಾರಿಗಳು ಹಿಂಬಡ್ತಿ ಹೊಂದುತ್ತಾರೆ. ಈ ತೀರ್ಪು ಹೊರಬಿದ್ದ 90 ದಿನಗಳೊಳಗೆ ಮುಂಬಡ್ತಿ ಪಡೆದಿರುವವರ ಪಟ್ಟಿ ಸಿದ್ಧಪಡಿಸಿ ಮರು ಪರಿಶೀಲಿಸಬೇಕು ಎಂಬ ಆದೇಶವಿದೆ.

ಹೋರಾಟ ಅನಿವಾರ್ಯ :- ನಿರ್ಣಯ ಅಂಗೀಕಾರ

ದುಂಡು ಮೇಜಿನ ಚರ್ಚೆಯಲ್ಲಿ ಒಮ್ಮತದಿಂದ ಮೂಡಿಬಂದ ಕರೆ, ತೀರ್ಪಿನ ವಿರುದ್ಧ ಹೋರಾಟ ಅನಿವಾರ್ಯವೆಂದು ನಿರ್ಣಯ ಮಂಡಿಸಿ, ಕೆಳಕಂಡ ಅಂಶಗಳಿರುವ ನಿರ್ಣಯವನ್ನು ಅಂಗೀಕರಿಸಲಾಯಿತು.

1. ಕೇಂದ್ರ ಸರ್ಕಾರವು ಬಡ್ತಿ ಮೀಸಲಾತಿಯ ಕಾಯಿದೆಯನ್ನೂ ಶಾಸನ ಬದ್ಧಗೊಳಿಸಬೇಕು. ಸಂವಿಧಾನದ 117ನೇ ತಿದ್ದುಪಡಿ ವಿದೇಯಕವನ್ನು ಅಂಗೀಕರಿಸಬೇಕು. ಮೀಸಲಾತಿಯನ್ನು ರಕ್ಷಿಸಲು, ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಬೇಕು.
2. ರಾಜ್ಯ ಸರ್ಕಾರವು ಈ ಕೂಡಲೇ ಸುಪ್ರೀಂ ಕೋರ್ಟ ಮುಂದೆ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿ, ಆಡಳಿತದಲ್ಲಿ ದಕ್ಷತೆಗೆ ಧಕ್ಕೆಯಾಗುವುದಿಲ್ಲ; ಅವರು ಹಿಂದುಳಿದಿದ್ದಾರೆ, ಮತ್ತು ಉನ್ನತ ಹುದ್ದೆಗಳಲ್ಲಿ ಅವರ ಪ್ರಾತಿನಿಧ್ಯದ ಕೊರತೆಯಿದೆ" ಎಂದು ಅಗತ್ಯ ಮಾಹಿತಿಗಳೊಂದಿಗೆ ಕೋರ್ಟಿಗೆ ತಿಳಿಸಬೇಕು.
3. ಸಾಮಾಜಿಕ ಬದ್ಧತೆಯಿರುವ ಉತ್ತಮ ವಕೀಲರ ತಂಡವನ್ನೂ ವಾದಿಸಲು ಗೊತ್ತುಪಡಿಸಬೇಕು.
4. ಮೀಸಲಾತಿ ಬಿಕ್ಷೆಯಲ್ಲ; ಡಾ॥ ಬಿ.ಆರ್ ಅಂಬೇಡ್ಕರ್ ರವರ ಸಂವಿಧಾನದ ಆಶಯದಂತೆ - ಇದು ಸಂವಿದಾನದ ಹಕ್ಕು, ಸಂವಿಧಾನದ ಆಶಯದಂತೆ ಸಮಾನತೆ, ಸಾಮಾಜಿಕ ನ್ಯಾಯ ಬರುವವರೆಗೂ - ಮೀಸಲಾತಿ ನಮ್ಮ ಹಕ್ಕು ಎಂಬ ಬೇಡಿಕೆಯ ಆಧಾರದಲ್ಲಿ "ರಾಜ್ಯಾದ್ಯಂತ ಸಹಿ ಸಂಗ್ರಹಣೆ' ನಡೆಸಲು, ಆ ನಂತರ, ಒಂದು ಲಕ್ಷಕ್ಕೂ ಹೆಚ್ಚು ನೌಕರರನ್ನು ಸೇರಿಸಿ, ಪ್ರತಿಭಟನೆ ಆಯೋಜಿಸುವ ಆಶಯವು ಇದರಲ್ಲಿ ಇತ್ತು.

ರೇಗಾ ಜಾರಿಗಾಗಿ ಖಜೂರಿ ..... ಪುಟ 4 ರಿಂದ

ಹೇಳಿದರು. ಮುಂದಿನ ವಾರದಲ್ಲಿ ರೇಗಾ ಕೆಲಸ ಸಮರ್ಪಕವಾಗಿ ಎಲ್ಲ ಕಡೆಗೆ ಜಾರಿ ಮಾಡುವುದಾಗಿ ಭರವಸೆ ಇತ್ತರು.

ಸಮಾವೇಶದಲ್ಲಿ ಕಿಣ್ಣಿ ಸುಲ್ತಾನದ ಯುವಸಂಘಟನೆಯ ಮುಖಂಡರಾದ ಮಹಾಂತಪ್ಪ ಇವರು ನಿರ್ವಹಣೆ ಮಾಡಿದರು. ಯುವ ಸಂಘಟನೆಯ ಸಂತೋಷ ಬಾವಿ, ಶರಣು ಸಾಲೆಗಾಂವ್, ವಿಶ್ವನಾಥ, ಕಲಾವತಿ, ಬಲಭೀಮ ಪಾಟಿಲ, ರಮೇಶ ಬಿರಾದಾರ, ಲಕ್ಷ್ಮಿಕಾಂತ ಕೋರೆ, ಶಿವಾನಂದ ಹಿರನಾಯಕ ಮುಂತಾದವರು ಖಜೂರಿ ವ್ಯಾಪ್ತಿಯಲ್ಲಿ ಮೂರು ದಿನಗಳ ಕಾಲ ರೇಗಾ ಅಭಿಯಾನಕ್ಕೆ ನೇತೃತ್ವ ಕೊಟ್ಟಿರುವರು. ಹಾಗೂ ಇಂದಿನ ಸಮಾವೇಶದಲ್ಲಿ ಭಾಗವಹಿಸಿರುವರು.

ಕಡಗಂಚಿಯಲ್ಲಿ ಜನಾಂದೋಲನ ಸಮಾವೇಶ

ದಿನಾಂಕ 22.2.2017ರಂದು ಕಡಗಂಚಿಯಲ್ಲಿ ಉದ್ಯೋಗ ಖಾತ್ರಿಯ ಅನುಷ್ಠಾನಕ್ಕಾಗಿ ಬೃಹತ್ ಜನಾಂದೋಲನ ಸಮಾವೇಶ ನಡೆಯಿತು. ಏಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಂದ ಬಂದ ನೂರಾರು ಜನರು ರೇಗಾ ಯಶಸ್ಸಿಗಾಗಿ ಇರುವ ಅಡೆತಡೆಗಳನ್ನು ಪ್ರಸ್ತಾಪಿಸಿದರು. ಕಡಗಂಚಿಯಲ್ಲಿ ಇನ್ನೂ 73 ಜನರ ಕೂಲಿಯು ತಾಂತ್ರಿಕ ದೋಷದ ಕಾರಣವಾಗಿ ನಿಂತಿರುವುದನ್ನು ಕೂಡಲೇ ಬಗೆಹರಿಸಿ ಕೂಲಿ ಪಾವತಿಸುವಲ್ಲಿ ಕ್ರಮ ಕೈಗೊಂಡಿರುವುದಾಗಿ ಕಡಗಂಚಿಯ ಪಿಡಿಓ ಹೇಳಿದರು. ಕೊಡಲಹಂಗರಗಾದಲ್ಲಿ ರೇಗಾ ಕೆಲಸದಲ್ಲಿ ಇನ್ನೂ ಬಾಕಿ ಇರುವವರನ್ನು ತೊಡಗಿಸಿ ಕೂಡಲೇ ಎನ್.ಎಂ.ಆರ್. ಜನರೇಟ್ ಮಾಡುವಂತೆ ಸೂಚಿಸಲಾಯಿತು. ನರೋಣಾದಲ್ಲಿ ಜನರು ಫಾರಂ ನಂ 6 ಈಗಾಗಲೇ ತುಂಬಲಾಗಿದ್ದು ರೇಗಾ ಕೆಲಸ ಆರಂಭಿಸುವಂತೆ ಆಗ್ರಹಿಸಿದರು. ಅಂತೆಯೇ ಸುಂಟನೂರ ಗ್ರಾಮ ಪಂಚಾಯತನಲ್ಲಿನ ಎಲ್ಲ ಗ್ರಾಮಗಳಲ್ಲಿ ಹಿಂದೆ ಮಾಡಿದ ಕೆಲಸಗಳ ಕೂಲಿ ಪಾವತಿಯಾಗಿದ್ದು ಬರಗಾಲದ ಹಿನ್ನೆಲೆಯಲ್ಲಿ ಇರುವ ನೂರೈವತ್ತು ದಿನಗಳನ್ನು ಮಾರ್ಚ 31ರೊಳಗೆ ಸಂಪೂರ್ಣ ಪ್ರಯೋಜನ ಪಡೆಯುವಂತಾಗಬೇಕೆಂದು ಹೇಳಲಾಯಿತು. ಇನ್ನುಳಿದ ಗ್ರಾಮಗಳಲ್ಲಿ ಇರುವ ರೈತರು ಮತ್ತು ಕೂಲಿಕಾರರನ್ನು ರೇಗಾ ಕಾಮಗಾರಿಯಲ್ಲಿ ಉದ್ಯೋಗ ದೊರೆಯುವಂತೆ ಮಾಡುವಲ್ಲಿ ಗ್ರಾಮ ಪಂಚಾಯತನಿಂದ ಪ್ರತಿ ಎರಡು ದಿನಕ್ಕೊಮ್ಮೆ ಡಂಗುರ ಸಾರಿ ಎಲ್ಲರಿಗೂ ಕೆಲಸ ಕೊಡುವ ದಿಕ್ಕಿನಲ್ಲಿ ಕ್ರಮ ವಹಿಸುವುದಾಗಿ ಆಳಂದ ತಾಲ್ಲೂಕು ಸಹಾಯಕ ನಿರ್ದೇಶಕರಾದ ಶ್ರೀ ರೇವಣಸಿದ್ದಪ್ಪ ಹೇಳಿದರು. ರೇಗಾ ಅಡಿಯಲ್ಲಿ ಹೊಲದೊಳಗಿನ ಕಲ್ಲು ಆಯುವ ಕಾಮಗಾರಿಯನ್ನೂ ತೆಗೆದುಕೊಳ್ಳಲು ಸಾಧ್ಯವಿದೆ, ಕೆಲವು ಕಡೆ ತಾಂತ್ರಿಕ ದೋಷದ ಕಾರಣವಾಗಿ ತಡೆಹಿಡಿಯಲ್ಪಟ್ಟ ವೇತನವನ್ನು ಈ ವಾರದಲ್ಲಿ ಪಾವತಿಯಾಗುವಂತೆ ಕ್ರಮವಹಿಸಿ, ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಜನರಿಗೆ ರೇಗಾ ಪ್ರಯೋಜನ ದೊರಕಿಸುವಲ್ಲಿ ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಸಿಬ್ಬಂದಿಗಳು ಪೂರ್ತಿ ಶ್ರಮಿಸುವುದಾಗಿ ಹೇಳಿದರು.

ಜನಾಂದೋಲನ ಸಮಾವೇಶವನ್ನುದ್ದೇಶಿಸಿ ನೀಲಾ ಕೆ, ಡಾ. ಪ್ರಭು ಖಾನಾಪುರೆ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ನಂದಾದೇವಿ ಮಂಗೊಂಡಿ ಇವರುಗಳೂ ಮಾತನಾಡಿದರು. ಏದೂ ಗ್ರಾಮ ಪಂಚಾಯತನಿಂದ ಬಂದ ಪಿಡಿಓ ಅವರೆಲ್ಲರೂ ಪ್ರತಿ ಗ್ರಾಮದ ಸಮಸ್ಯೆಯನ್ನು ಆಲಿಸಿ ಅಲ್ಲಿಯೇ ಸಮಸ್ಯೆ ಪರಿಹಾರಕ್ಕಾಗಿ ಭರವಸೆ ನೀಡಿದರು. ಹಾಗೂ ಮುಂದಿನ ವಾರದೊಳಗಾಗಿ ಎಲ್ಲ ಹಳ್ಳಿಗಳಲ್ಲಿ ರೇಗಾ ಕೆಲಸ ಆರಂಭಿಸುವುದಾಗಿ ಹೇಳಿದರು. ಮುನ್ನಳ್ಳಿಯಲ್ಲಿ ಕೆಲಸ ಆರಂಭಿಸಲಾಗಿದೆ. ಹಾಗೆಯೇ ಕೆರೆಯಂಬಲಗಾದಲ್ಲಿ ಸುರು ಮಾಡುವುದಾಗಿ ಹೇಳಿದರು.

ಸಮಾವೇಶದಲ್ಲಿ ಕಡಗಂಚಿ ಗ್ರಾಮ ಪಂಚಾಯತನ ಅಧ್ಯಕ್ಷರಾದ ಅಂಬಿಕಾ ಅವರು ಅಧ್ಯಕ್ಷತೆ ವಹಿಸಿದ್ದರು. ದತ್ತರಾಜ ಕರಬಸಪ್ಪ ಎಲೆನಾವದಗಿಯ ರೈತ ಮುಖಂಡರಾದ ಶ್ರೀಶೈಲ ರೆಡ್ಡಿ ಸಭೆಯಲ್ಲಿ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಸುಮಂಗಲಾ, ರೇಣುಕ, ತಸ್ಲೀಮಾ, ನಾಗಮ್ಮ ಅನಸೂಯಾ ಮುಂತಾದವರು ಉಪಸ್ಥಿತರಿದ್ದರು.

ಕಡಗಂಚಿಯ ನೀರಿನ ಸಮಸ್ಯೆ ಬಗೆಹರಿಸಲು ನಾಳೆಯೇ ಸ್ಥಳಕ್ಕೆ ಬಂದು ಸಮಸ್ಯೆ ಪರಿಹರಿಸುತ್ತೇನೆಂದು ಕಡಗಂಚಿ ಪಿಡಿಓ ಹೇಳಿದರು. ರಮಾ ನಿರ್ವಹಣೆ ಮಾಡಿದರು. ಕಾಶಿನಾಥ ವಂದಿಸಿದರು.

ಎಸ್‌ಎಫ್‌ಐ 14 ನೇ ರಾಜ್ಯ ಸಮ್ಮೇಳನ....... ಪುಟ 11 ರಿಂದ

ಸಾಮಾಜಿಕವಾಗಿಯೂ ಹಿಂದುಳಿದಿದ್ದಾರೆ. ಅವಕಾಶ ವಂಚಿತ ದಲಿತರು ಈಗಲಾದರೂ ಶಿಕ್ಷಣ ಮತ್ತು ಉದ್ಯೋಗಗಳನ್ನು ಪಡೆದು ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಅಸಮಾನತೆಯನ್ನು ತೊಡೆದು ಹಾಕಲು ದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದು ಅನಿವಾರ್ಯವಾಗಿದೆ. **ಮೀಸಲಾತಿ ಎಂಬುದು ಭಿಕ್ಷೆಯಲ್ಲ**. ಅದು ಅವಕಾಶ ವಂಚಿತ ನಾಗರಿಕರ ಹಕ್ಕು, ಮೀಸಲಾತಿಯಿಂದ ಪ್ರತಿಭೆಗೆ ಅನ್ಯಾಯವಾಗುತ್ತದೆ ಎಂಬ ವಾದದಲ್ಲಿ ಹುರುಳಿಲ್ಲ. ಶಿಕ್ಷಣ ರಂಗದಲ್ಲಿ ಮೀಸಲಾತಿ ಪಡೆದವರು ಉಳಿದವರಂತೆ ಕಷ್ಟಪಟ್ಟು ಓದಿ ಪಾಸಾಗಬೇಕು. ಅಲ್ಲಿ ಅವರಿಗೆ ಯಾವ ರಿಯಾಯ್ತಿ ಇರುವುದಿಲ್ಲ. ಮೀಸಲಾತಿ ಪಡೆದು ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಎಲ್ಲರಂತೆ ಪಾಸಾಗಬೇಕು. ಪಡೆಯಬೇಕಾದ ಕನಿಷ್ಠ ಅಂಶಗಳಲ್ಲಿ ಸ್ವಲ್ಪ ಮಟ್ಟಿಗೆ ರಿಯಾಯ್ತಿಗಳನ್ನು ಮಾತ್ರ ಅವರು ಪಡೆಯುತ್ತಾರೆ.

ಮೀಸಲಾತಿ ಶೇ.50 ರಷ್ಟು ದಾಟಬಾರದು ಎಂಬ ಸಂವಿಧಾನದ ನಿರ್ದೇಶನವಿದೆ. ದಲಿತೇತರು ಇದರ ಪ್ರಯೋಜನ ಪಡೆಯುತ್ತಾರೆ. ಸಂವಿಧಾನವನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಆರ್ಥಿಕವಾಗಿ ಹಿಂದುಳಿದ ಜಾತಿಗಳಿಗೂ ಮೀಸಲಾತಿ ಒದಗಿಸುವ ಏರ್ಪಾಡು ಮಾಡಬಹುದು. ಧಾರ್ಮಿಕ ಅಲ್ಪಸಂಖ್ಯಾತರಿಗೂ ಆರ್ಥಿಕ ಹಿಂದುಳಿಯುವಿಕೆಯ ಆಧಾರದಲ್ಲಿ ಮೀಸಲಾತಿಯನ್ನು ನೀಡಬಹುದು. ದಲಿತರಾಗಲಿ, ದಲಿತೇತರರಾಗಲಿ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಇಲಾಖೆಗಳಲ್ಲಿ ಮಾತ್ರ ಮೀಸಲಾತಿ ಪಡೆಯಬಹುದು. ಖಾಸಗಿ ರಂಗದಲ್ಲಿ ಮೀಸಲಾತಿಗೆ ಅವಕಾಶವಿಲ್ಲ. ಕಳೆದ ಎರಡು ಮೂರು ದಶಕಗಳಿಂದ ಕೇಂದ್ರ ಸರ್ಕಾರದ ಧೋರಣೆಗಳು ತುಂಬಾ ಬದಲಾಗಿವೆ. ರಾಷ್ಟ್ರೀಕರಣದ ಬದಲಾಗಿ ಸರ್ಕಾರ ಹೆಚ್ಚು ಹೆಚ್ಚು ಖಾಸಗೀಕರಣದ ಪರವಾಗಿ ಹೆಜ್ಜೆ ಹಾಕುತ್ತಿದೆ. ಸರ್ಕಾರಿ ಇಲಾಖೆಗಳಲ್ಲಿ ನೇಮಕಾತಿ ನಿಷೇಧ ಜಾರಿಯಲ್ಲಿದೆ. ಸಾರ್ವಜನಿಕ ವಲಯದ ಕಾರ್ಖಾನೆಗಳನ್ನು, ಬ್ಯಾಂಕು, ವಿಮಾ ಮೊದಲಾದ ಹಣಕಾಸು ಸಂಸ್ಥೆಗಳ ಖಾಸಗೀಕರಣ ಆಗುತ್ತಿದೆ. ಖಾಸಗಿ ರಂಗದಲ್ಲಿ ಮೀಸಲಾತಿಗೆ ಅವಕಾಶವಿಲ್ಲ. ಇದರಿಂದಾಗಿ ದಲಿತರು, ಹಿಂದುಳಿದವರು ಮೀಸಲಾತಿ ಎಂಬ ಸಂವಿಧಾನ ಬದ್ಧ ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದಿದೆ. ದಲಿತರ ಮೀಸಲಾತಿ ಹಕ್ಕನ್ನು ಉಳಿಸಿಕೊಳ್ಳಬೇಕಾದರೆ ಒಂದೋ ಸಾರ್ವಜನಿಕ ರಂಗದ ಖಾಸಗೀಕರಣವನ್ನು ತಡೆಯಬೇಕು ಅಥವಾ ಖಾಸಗಿ ರಂಗದಲ್ಲಿಯೂ ಮೀಸಲಾತಿಗಾಗಿ ಹೋರಾಡಬೇಕು. ಹೋರಾಟವಿಲ್ಲದೆ ಈ ಹಕ್ಕನ್ನು ಉಳಿಸಿಕೊಳ್ಳಲಾಗದು ದಲಿತರ ಈ ನ್ಯಾಯಬದ್ಧ ಹೋರಾಟಕ್ಕೆ ದಲಿತೇತರರು ವಿಶಾಲ ಮನಸಿನಿಂದ ಬೆಂಬಲ ನೀಡಬೇಕು. ●

JANASHAKTHI KANNADA VARA PATRIKE Feb 27-Mar 5, 2017 Price : Rs. 10/- Date of Publication : 24 February 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಪ್ರೇಮಿಗಳ ದಿನಾಚರಣೆಗೆ ಜಯತೀರ್ಥರ ಉಡುಗೊರೆ

"ಬ್ಯೂಟಿಫುಲ್ ಮನಸ್ಸುಗಳು"

ಶಿವು ಹೊಸಹಳ್ಳಿ

ಕೆಲವು ಸಿನಿಮಾ ಹೀಗೆಯೇ, ಸಮಾಜ, ಅಧಿಕಾರಶಾಹಿಗಳು ನಡೆಸುವ ದೌರ್ಜನ್ಯಗಳನ್ನು ಧೈರ್ಯವಾಗಿ ಸಮಾಜದ ಮುಂದೆ ನೇರವಾಗಿಯೋ, ಪರೋಕ್ಷವಾಗಿಯೋ ತೆರೆದಿಡುತ್ತವೆ. ಅಂತಹವುಗಳಲ್ಲಿ ಜಯತೀರ್ಥ ನಿರ್ದೇಶನದ 'ಬ್ಯೂಟಿಫುಲ್ ಮನಸ್ಸುಗಳು' ಕೂಡಾ ಅಗ್ರಪಂಕ್ತಿಯಲ್ಲಿ ಕಾಣಸಿಗುತ್ತದೆ. ಸಿನಿಮಾದಲ್ಲಿ ತಾವು ತೋರಿಸಬೇಕಾದ ವಿಷಯವನ್ನು ಗಟ್ಟಿಯಾಗಿ ನಿರೂಪಿಸಲಾಗದೇ, ಸಮಾಜಕ್ಕೆ ತಲುಪಿಸಬೇಕಾದ ಗಂಭೀರವಾದ ವಿಷಯಗಳನ್ನು ತಲುಪಿಸಲಾಗದೆ ಹಲವು ಸಿನಿಮಾಗಳು ಸೋತಿವೆ. ಈ ಸಿನಿಮಾದಲ್ಲಿ ಗೆಲ್ಲುವ ಅಂಶಗಳು ಹೆಚ್ಚಾಗಿರಲು ಧನಾತ್ಮಕ ಅಂಶವೇ ನಿರ್ದೇಶಕರು ಅಯ್ಕೆ ಮಾಡಿಕೊಂಡಿರುವ ನಿರೂಪಣಾ ಶೈಲಿ. ಒಂದು ಅಮೂಲ್ಯವಾದ ಕಲಾಕೃತಿಯನ್ನು ಯಾವ ಶೈಲಿಯಲ್ಲಿ ಪ್ರೇಕ್ಷಕರಿಗೆ ಊಣಬಡಿಸಬೇಕು ಎಂಬುದನ್ನು ನಿರ್ದೇಶಕರು ಮನಗಂಡಿದ್ದು, ಅದರಲ್ಲಿ ಯಶಸ್ವಿಯಾಗಿದ್ದಾರೆ.



ಸರಿಸುಮಾರು 2ವರುಷಗಳ ಹಿಂದೆ ಬೆಂಗಳೂರಿನ ಪ್ರತಿಷ್ಠಿತ ಲೇಔಟ್‌ನಲ್ಲಿ ನಡೆದ ಸತ್ಯ ಘಟನೆಯ ಎಳೆಯನ್ನು ಹಿಡಿದುಕೊಂಡು ಸಾಗುವ ಕಥೆಯ ನಾಯಕಿ ನಂದಿನಿಯು ಹಾಲಿನಷ್ಟೆ ನಿಷ್ಕಲ್ಮಷ ಮನಸ್ಸಿನ ಹುಡುಗಿ. ಐಶ್ವರ್ಯಕ್ಕೆ ಆಸೆಪಡದ, ತನ್ನ ಬಡತನವನ್ನು ಕಂಡು ಕೊರಗದ ನಾಳಿನ ಉತ್ತಮ ದಿನಗಳ ನಿರೀಕ್ಷೆಗಳಲ್ಲಿ ಕಾಲವನ್ನು ದೂಡುವ ಮುಗ್ದೆಗೆ ನಾಯಕ ಪಚ್ಚಿಯ ಪರಿಚಯವಾಗಿ, ಪ್ರೀತಿಯ ಸೆಲೆಯಲ್ಲಿ ಬಂದಿಸಿ ಹೊಸ ಜೀವನದ ಕನಸು ಕಾಣುತ್ತಾರೆ. ಕಥೆಯ ಅನೀರಿಕ್ಷಿತ ತಿರುವು ಅವಳನ್ನು ಸಮಾಜ ಮತ್ತು ಪ್ರೇಮಿಯ ಮುಂದೆ ವೈಶ್ಯೆಯಾಗಿ ನಿಲ್ಲಿಸುವುದರೊಂದಿಗೆ ಮೊದಲಾರ್ದಕ್ಕೆ ಬ್ರೇಕಿಂಗ್ ನ್ಯೂಸ್ ನೀಡುತ್ತದೆ. ಅವಳನ್ನು ಸಮಾಜದ ಎದುರು ವೈಶ್ಯೆಯಾಗಿಸಲು 'ಮಾಧ್ಯಮ'ಗಳ ಅತಿಯಾದ ಕಾರ್ಯಕ್ಷಮತೆಯೇ ಪ್ರಧಾನವಾದುದು ಎಂಬುದನ್ನು ಈ 'ಸಿನಿಮಾ ಮಾಧ್ಯಮ' ತೋರಿಸಲು ಶಕ್ತವಾಗುತ್ತದೆ.

ಇಲ್ಲಿಯೇ ನಿರ್ದೇಶಕರು ತಮ್ಮ ಪ್ರೌಡಿಮೆಯನ್ನು ಮೆರೆದಿರುವುದು ಸಾಮಾನ್ಯವಾಗಿ ಇಂತಹ ಆರೋಪಗಳಿಗೆ ಮಹಿಳೆಯರು ಬಲಿಯಾಗಿದ್ದೇ ಹೆಚ್ಚು, ಸಮಾಜದ ಕೀಳು ಮಟ್ಟದ ನಡತೆಯಿಂದ ಬೇಸರಿಸಿ ಮನೆಯವರು ಆರೋಪಕ್ಕೆ ಗುರಿಯಾದವರನ್ನು ನಿಂದಿಸುವುದೇ ಸಾಮಾನ್ಯ. ಆದರೆ ಇಲ್ಲಿ ಸಂತ್ರಸ್ತರ ನೆರವಿಗೆ ಮನೆಯವರು ನಿಲ್ಲುತ್ತಾರೆ ಹಾಗೂ ಇಂತಹ ಆರೋಪಗಳ ಹೊರತಾಗಿಯೂ ಮುಂದಿನ ಬೇರೆಯಾದಂತಹ ಜೀವನವು ಇದೇ ಎಂಬ ಹೊಸ ಬರವಸೆಯನ್ನು ಹುಟ್ಟಿಸಿ ಪರಿಸ್ಥಿತಿಯನ್ನು ಎದುರಿಸುವ ತಿಳುವಳಿಕೆಯನ್ನು ಸಮಾಜಕ್ಕೆ ನೀಡಲು ಸಾಧ್ಯವಾಗಿದೆ. ಪ್ರೇಮಿ ಪಚ್ಚಿಯಿಂದ ದೂರಾದ ನಂತರ ನಂದಿನಿ ತಾನು ನಿರಪರಾಧಿ ಇದು ಭ್ರಷ್ಟ ಪೋಲೀಸ್ ಇಲಾಖೆಯವರು ನಡೆಸಿದ ಮೋಸಕ್ಕೆ ತಾನು ಬಲಿಯಾಗಿದ್ದೆ ಎಂದು ನಿರೂಪಿಸಿಕೊಳ್ಳುತ್ತಾಳೆ ಮತ್ತು ಪಚ್ಚಿಗೆ ಅವನು ಮಾಡಿದ ತಪ್ಪಿನ ಅರಿವಾಗುವಂತೆ ಶಿಕ್ಷಿಸುತ್ತಾಳೆ. ಶಿಕ್ಷೆಯ ಉದ್ದೇಶ ಅವಳ ಒಡಲಬೆಂಕಿಯು ಹೊರಚಿಮ್ಮಿದ್ದೆ ವಿನಃ, ಪ್ರತಿಕಾರದ ದಾಹವಲ್ಲವೆಂಬುದು ಗಮನಾರ್ಹ ಅಂಶ. ಪಚ್ಚಿಗೆ ತನ್ನ ತಪ್ಪಿನ ಅರಿವಾಗಿ ನಂದಿನಿಗೆ ನ್ಯಾಯಕೊಡಿಸಬೇಕೆಂದು ಯೋಜನೆ ರೂಪಿಸಿ ಅದರಲ್ಲಿ ಯಶಸ್ವಿಯಾಗುತ್ತಾನೆ.

ಇದರಲ್ಲಿ ಪ್ರಶ್ನಾರ್ಹವಾದುದು ಪಚ್ಚಿಯ ಎಲ್ಲಾ ಪ್ಲಾನ್‌ಗಳನ್ನು ಬೇಧಿಸಿದ ಪೋಲೀಸ್ ಇಲಾಖೆ ಕೊನೆಗೆ ಅವನನ್ನು ಬಂಧಿಸಲು ವಿಫಲವಾದದ್ದು ಕಥೆಯ ಹೊಳಪನ್ನು ಕಡಿಮೆಗೊಳಿಸುತ್ತದೆ. ಕಾರಣ ಅಧಿಕಾರದಲ್ಲಿರುವ ಪೋಲೀಸ್ ಅಧಿಕಾರಿಯನ್ನು ಸಾರ್ವಜನಿಕರ ಎದುರು ಬೆತ್ತಲಾಗಿಸುವುದು ಸುಲಭದ ಕೆಲಸವಲ್ಲ ಮತ್ತು ಅದು ಒಬ್ಬನಿಂದಲೇ ಸಾಧ್ಯವಾಗುವುದಿಲ್ಲ ಎಂಬ ವಾಸ್ತವಾಂಶವು ನೆನಪಾಗದೆ ಇರಲಾರದು. ಅದರೂ ಸಿನಿಮಾ ಎಲ್ಲವನ್ನು ಸಾಧಿಸುತ್ತದೆ ಎಂಬುದು ಮಾತ್ರ ಸತ್ಯವಾದ ಮಾತು. ಈ ಸಿನಿಮಾ ಕೇವಲ ಕಥೆಯಾಗಿರದೇ ಜೀವನದ ನೈಜತೆಗೆ ಬಹಳ ಹತ್ತಿರವಾಗಿರುವುದು ಸಿನಿಮಾದ ಯಶಸ್ವಿಗೆ ಗುಟ್ಟು. ಸಿನಿಮಾದ ಯಾವುದಾದರು ಒಂದು ಪಾತ್ರ, ಸನ್ನಿವೇಶ ನಮ್ಮನ್ನು ನಮ್ಮದೆ ಕಥೆ ಎಂಬ ಭಾವವನ್ನುಂಟು ಮಾಡದೆ ಬಿಡದು ಎನ್ನುವಷ್ಟು ಮನಸ್ಸಿಗೆ ಹತ್ತಿರವಾಗುತ್ತದೆ. ಸಂತ ಶಿಶುನಾಳ ಶರೀಫಜ್ಜನ 'ಸೋರುತಿಹುದು ಮನೆಯ ಮಾಳಿಗೆ ಅಜ್ಞಾನದಿಂದ' ಹಾಡೇ ಸಿನಿಮಾದ ಕಥೆಯನ್ನು ಹೇಳಿಬಿಡಬಹುದು ಎಂದು ಭಾವಿಸುವಂತೆ ಮಾಡುತ್ತದೆ. ನಾವೆಲ್ಲರೂ ನಮ್ಮ ಜೀವನದಲ್ಲಿ ಅಜ್ಞಾನದಿಂದ ಎಷ್ಟೊಂದು ತಪ್ಪುಗಳನ್ನು ಮಾಡಿದ್ದೇವೆ ಎಂದು ನಮ್ಮನ್ನು ಒಮ್ಮೆಯಾದರು ಸಿನಿಮಾ ಮುಗಿಯುವುದರೊಳಗೆ ಸ್ವ-ವಿಮರ್ಶೆಗೆ ಒಡ್ಡುವುದಂತು ಸತ್ಯ. ಪ್ರೀತಿಸುವ ಜೀವಗಳಿಗೆ ಇರಬೇಕಾದ ನಂಬಿಕೆ ಮತ್ತು ಜವಬ್ದಾರಿಗಳನ್ನು ಸಿನಿಮಾ ಕಲಿಸುತ್ತದೆ.

ನಿರ್ದೇಶಕ ಜಯತೀರ್ಥ ಈ ವರ್ಷದ ಪ್ರೇಮಿಗಳ ದಿನಕ್ಕೆ ಒಂದು ತುಂಬು ಭಾವನೆಗಳ ಸಿನಿಮಾವನ್ನು ನೀಡಿ ಗೆದ್ದಿದ್ದಾರೆ. ಬಿ.ಜೆ. ಭರತ್‌ರ ಸಂಗೀತ, ಕಿರಣ್ ಹಂಪಾಪುರರ ಛಾಯಾಗ್ರಹಣ, ರಘು ದೀಕ್ಷಿತ್‌ರ ಧ್ವನಿಯಲ್ಲಿ ಮೂಡಿಬಂದಿರುವವ ಸೋರುತಿಹುದು ಮನೆಯ ಮಾಳಿಗೆ ಹಾಡು, ಇಂಪಾದ ಸಂಗೀತ, ತಬಲಾ ನಾಣಿ, ಅಚ್ಯುತ್ ಕುಮಾರ್, ಪ್ರಶಾಂತ್ ಸಿದ್ದಿ, ಇನ್ನಿತರೆ ಪೋಷಕ ಪಾತ್ರಗಳ ಜೊತೆಗೆ ನಾಯಕ ನಿನಾಸಂ ಸತೀಶ್ ಹಾಗೂ ನಾಯಕಿ ಶ್ರುತಿ ಹರಿಹರನ್ ರವರ ನಟನೆ ಚಿತ್ರವನ್ನು ಉತ್ತಮವಾದ ಕೃತಿಯಾಗಿಸಿದೆ.

ಬೆಂಕಿ ಹಚ್ಚಿದ್ದು ಕಛೇರಿಗಲ್ಲ ಜನ ಕನಸುಗಳಿಗೆ..* ರಾಜ್ಯದಾದ್ಯಂತ ಪ್ರತಿಭಟನೆ













JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**